# ಪ್ರಸಾದ

**ಸಂಪುಟ 30  ಸಂಚಿಕೆ 2** **ಮಾರ್ಚ್-ಏಪ್ರಿಲ್  2015**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಎಸ್. ನಂಜುಂಡಯ್ಯ
ಡಾ. ಎನ್.ಎಸ್. ತಾರಾನಾಥ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಎನ್.ಎಂ. ತಳವಾರ್
ಶ್ರೀಮತಿ ಪ್ರೀತಿ ಶುಭಚಂದ್ರ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

## ಪರಿವಿಡಿ


ಸಂಪಾದಕೀಯ 5

ಗುರುವಾಣಿ 9

'ಮೈಸೂರು ಸ್ಟಾರ್' ಪತ್ರಿಕೆ ಹಾಗೂ ವೀರಸಂಗಪ್ಪನವರು 11
**ಡಾ. ಬಿ. ನಂಜುಂಡಸ್ವಾಮಿ**

ಲಿಂಗ ರಾಜಕಾರಣ ಮತ್ತು ಧರ್ಮ 17
**ಡಾ. ಶ್ರೀ ವಿಜಯಕುಮಾರ ಮಹಾನುಭಾವಿಗಳು**

ಕೊಂಡಗುಳಿ ಕೇಶಿರಾಜನ ಶೀಲಮಹತ್ವದ ಕಂದ 36
**ಡಾ. ಆರ್. ರಾಮಕೃಷ್ಣ**

ಗ್ರಂಥಾಂತರಂಗ 42
**ಕೆ.ಬಿ. ಗಣಪತಿ**

ವಾರ್ತಾವಿಹಾರ 47

ಕೃತಿ ಸ್ವೀಕೃತಿ 58


**ಮುಖಪುಟ ಚಿತ್ರ**

ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ ಹಾಗೂ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪ್ರೊ. ಚಂದ್ರಶೇಖರಯ್ಯನವರಿಗೆ 2013 ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ನೀಡುತ್ತಿರುವುದು. ಚಿತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರೊಡನೆ ಸಾಹಿತಿ ಶ್ರೀ ಜಯದೇವಪ್ಪ ಜೈನಕೇರಿ, ಪ್ರೊ. ಸಿ. ನಾಗಣ್ಣ, ಡಾ. ಷ. ಶೆಟ್ಟರ್ ಮತ್ತು ಶ್ರೀ ಬಿ.ಎನ್. ಬೆಟ್‌ಕೆರೂರ್

## ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮ ಶತಮಾನೋತ್ಸವಕ್ಕಾಗಿ ಬರಹಗಳಿಗೆ ಆಹ್ವಾನ

ಅಕ್ಷರ, ಅನ್ನ, ಆರೋಗ್ಯ ಕ್ಷೇತ್ರಗಳಲ್ಲಿ ಅಹರ್ನಿಶಿ ಸೇವೆಗೈದ ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೆಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವದ ಅಂಗವಾಗಿ ನೆನಪಿನ ಸಂಚಿಕೆಗಳನ್ನು ಹೊರತರಲಾಗುತ್ತಿದೆ. ಪೂಜ್ಯರು ಸಲ್ಲಿಸಿರುವ ಅನುಪಮ ಸೇವೆ ಸರ್ವವಿದಿತವಾಗಿದೆ.

ಆಸಕ್ತ ಲೇಖಕರು ಪೂಜ್ಯರ ಜೀವನ-ಸಾಧನೆಗಳನ್ನು ಕುರಿತಾಗಿ ಪೂಜ್ಯರ ನೆನಪಿನ ಮಾಹಿತಿ ಅಥವಾ ಘಟನೆಗಳಿದ್ದರೆ (ಈಗಾಗಲೇ ಕಳುಹಿಸಿಕೊಟ್ಟಿರುವವರನ್ನು ಹೊರತುಪಡಿಸಿ) ದಯವಿಟ್ಟು ಬರೆದು ಕಳುಹಿಸಿಕೊಡಬೇಕಾಗಿ ವಿನಂತಿ. ಹಾಗೆಯೇ ವಿಶೇಷವಾದ ಭಾವಚಿತ್ರಗಳಿದ್ದರೆ ಅವುಗಳನ್ನೂ ಕಳುಹಿಸಿಕೊಟ್ಟು ಅನಂತರ ಹಿಂದಕ್ಕೆ ಪಡೆಯಬಹುದಾಗಿದೆ.

ಆಸಕ್ತರು ತಮ್ಮ ಬರಹಗಳನ್ನು ದಿನಾಂಕ 31.6.2015 ರೊಳಗಾಗಿ ಉಪ ಸಂಯೋಜನಾಧಿಕಾರಿಗಳು, ಶತಮಾನೋತ್ಸವ ಸಮಿತಿ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570004 ಈ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

ಸಂಚಾಲಕ
ಶತಮಾನೋತ್ಸವ ಸಮಿತಿ

# ಸಂಪಾದಕೀಯ

**ಜಯಂತಿ ಅವಾಂತರಗಳು**

ಕೆಲವು ದಿನಗಳ ಹಿಂದೆ 'ಅಭಿಮಾನಿ ದೇವರು' ಒಬ್ಬರು ತಮ್ಮ ಊರಿನಲ್ಲಿ ನಡೆಯುವ ಜಯಂತಿ ಸಮಾರಂಭವೊಂದಕ್ಕೆ ಆಹ್ವಾನಿಸಲು ಬಂದಿದ್ದರು.

ಆದರೆ ನನಗೆ ಜಯಂತಿಗೆ ಭಾಜನರಾದ ಆ ಮಹಾಪುರುಷರ ಬಗ್ಗೆ ಅಧಿಕೃತವಾಗಿ ಮಾತನಾಡುವಷ್ಟರಮಟ್ಟಿನ ತಲಸ್ಪರ್ಶಿಯಾದ ಜ್ಞಾನವಿರಲಿಲ್ಲ. ಆದ್ದರಿಂದ ಒಪ್ಪಿಕೊಳ್ಳಲು ನನ್ನ ಮನಸ್ಸು ಹಿಂಜರಿಯಿತು.

ನೀವು ಜಯಂತಿ ಮಾಡುತ್ತಿರುವ ಮಹಾವ್ಯಕ್ತಿಯ ಬಗ್ಗೆ ನಾನು ಅಷ್ಟಾಗಿ ತಿಳಿದುಕೊಂಡಿಲ್ಲ. ಸಮಾರಂಭಗಳಲ್ಲಿ ಹಾಗೆಲ್ಲಾ ಸುಮ್ಮಸುಮ್ಮನೆ, ಅಥವಾ ಅರೆಬರೆ ಜ್ಞಾನದಿಂದ ಮಾತನಾಡಬಾರದು, ಬೇರೆ ಯಾರನ್ನಾದರೂ ಕರೆಯಿರಿ ಎಂದೆ. ಮನೆಗೆ ಬಂದವರಲ್ಲಿ ನನ್ನ ಮಾಜಿ ಶಿಷ್ಯನೊಬ್ಬ ಇದ್ದ. ಆತ "ಬನ್ನಿ ಸಾ, ನಿಮಗಿಂತ ತಿಳಿದವರು ಇನ್ಯಾರಿದ್ದಾರೆ. ನೀವು ಏನು ಬೇಕಾದರೂ ಮಾತನಾಡ್ತೀರಿ. ಗಂಟೆಗಟ್ಟಲೆ ಮಾತನಾಡೋ ಶಕ್ತಿ ನಿಮಗೆ ಇದೆ" ಅಂದ. ಇದನ್ನು ಅವನು ಯಾವ ಅರ್ಥದಲ್ಲಿ ಹೇಳಿದನೋ ನನಗೆ ತಿಳಿಯಲಿಲ್ಲ. ಅವನ ಮಾತುಗಳನ್ನು ಕೇಳಿಸಿಕೊಂಡ ನನಗೆ ಗೊ.ರು.ಚ. ಅವರ 'ಮಹಾಮನೆ'ಯಲ್ಲಿ ಬರೆದಿದ್ದ ಸಂಪಾದಕೀಯವೊಂದು ನೆನಪಾಯಿತು. ಸಿದ್ಧರಾಮೇಶ್ವರರ ಜಯಂತಿಗೆ ಆಹ್ವಾನಿಸಲು ವಿದ್ವಾಂಸರೊಬ್ಬರ ಬಳಿ ಕೆಲವರು ಬಂದರಂತೆ. ಆಗ ಆ ವಿದ್ವಾಂಸರು ನನಗೆ ಸಿದ್ಧರಾಮೇಶ್ವರರ ಬಗ್ಗೆ ಮಾತನಾಡುವಷ್ಟು ಶಕ್ತಿ ಇಲ್ಲ, ಬೇರೆ ಯಾರನ್ನಾದರೂ ಕರೆಯಿರಿ ಎಂದರಂತೆ. ಆಗ ಬಂದಿದ್ದವರು ಬನ್ನಿ ಸಾರ್ ಏನೋ ಒಂದಿಷ್ಟು ಮಾತನಾಡಿ ಅದೆಲ್ಲಾ ಯಾರಿಗೆ ಬೇಕಾಗಿದೆ. 'ಮಧ್ಯೆ ಮಧ್ಯೆ ಸಿದ್ಧರಾಮ ಅನ್ನಿ ಸಾಕು' ಎಂದರಂತೆ. ಇದನ್ನು ನೆನಸಿಕೊಂಡಾಗಲೆಲ್ಲಾ ನನಗೆ ನಗು ಮತ್ತು ಸಂಕಟ ಒಟ್ಟೊಟ್ಟಿಗೇ ಒತ್ತರಿಸಿ ಬರುತ್ತವೆ.

ಇತ್ತೀಚಿನ ದಿನಗಳಲ್ಲಿ ನಾನು ಭಾಷಣ ಮಾಡುವ (ಸ್ಟ್ಯಾಂಡ್ ಹಾಕಿ ಸೈಕಲ್ ತುಳಿಯುವ) ಕೆಲಸವನ್ನು ತೊಂಬತ್ತು ಭಾಗ ನಿಲ್ಲಿಸಿದ್ದೇನೆ. ಇದಕ್ಕೆ ಕಾರಣ ಪೂಜ್ಯ ಗುರುಗಳಾದ ಡಾ. ಪ್ರಭುಶಂಕರ ಅವರು. ಒಮ್ಮೆ ಅವರು ನನಗೆ ಕರೆ ಮಾಡಿ ಮನೆಕಡೆ ಬರುವುದಕ್ಕೆ ಸಾಧ್ಯವೇ ಎಂದು ಕೇಳಿದರು. ಆಗ ನಾನು ಸಾರ್ ಕ್ಷಮಿಸಿ, ಯಾವುದೋ

ಊರಿಗೆ ಹೊರಟಿದ್ದೇನೆ, ನಾಳೆ ಬಂದು ನೋಡುತ್ತೇನೆ ಎಂದೆ. ಅಲ್ಲಿ ಅಂತಹ ತುರ್ತಿನ ಕೆಲಸ ಏನಿದೆ ಎಂದರು. ಅಲ್ಲೊಂದುಕಡೆ ಭಾಷಣದ ಕಾರ್ಯಕ್ರಮವಿದೆ. ಅವರು ನೀವೇ ಬರಬೇಕು, ನಿಮ್ಮ ಭಾಷಣವನ್ನು ಜನ ತುಂಬಾ ಇಷ್ಟಪಡುತ್ತಾರೆ ಎಂದು ದುಂಬಾಲು ಬಿದ್ದಿದ್ದಾರೆ ಅಂದೆ. ಅದಕ್ಕವರು ನಕ್ಕು, ಹಾಗಾದರೆ ನೀನು ಇನ್ನೂ ಪಾಪ ಕೆಲಸ ಮಾಡೋದನ್ನ ಬಿಟ್ಟಿಲ್ವೆ? ಎಂದರು. ಯಾಕೆ ಸಾರ್ ಎಂದೆ. ಜನ ಈಗಾಗಲೇ ಸಾಕಷ್ಟು ಕೆಟ್ಟಿದ್ದಾರೆ, ನಿನ್ನ ಭಾಷಣದಿಂದ ಅವರನ್ನು ಮತ್ತಷ್ಟು ಯಾಕೆ ಕೆಡಿಸ್ತೀಯಾ? ಜೊತೆಗೆ ಅವರು ನಿನ್ನನ್ನು ನೀವೇ ಭಾಷಣಕ್ಕೆ ಬರಬೇಕು ಎಂದು ಒತ್ತಾಯಮಾಡಿರೋದೂ ಶುದ್ಧಸುಳ್ಳು; (ಸುಳ್ಳಿನಲ್ಲಿ ಅಶುದ್ಧ ಸುಳ್ಳು ಎನ್ನುವುದೂ ಇರುತ್ತದೆಯೇ!) ಅವರಿಗೆ ಅಲ್ಲಿ ಅನ್ನದಾಸೋಹ ಪ್ರಾರಂಭಿಸೋದಕ್ಕೆ ಮೊದಲು ಟೈಂ ಪಾಸ್ ಮಾಡೋದಕ್ಕೆ ಯಾರೋ ಒಬ್ಬರು ಬೇಕು; ಅದಕ್ಕೆ ಅವರು ನಿನ್ನನ್ನು ಹಿಡಿದಿದ್ದಾರೆ. ಆಹ್ವಾನ ಪತ್ರಿಕೆಯಲ್ಲಿ ಮುಖ್ಯ ಭಾಷಣಕಾರರು ಎಂದು ಹಾಕಿದ್ದರೂ ನಿನ್ನ ಹೆಸರು ಎಲ್ಲಿರುತ್ತೆ ನೋಡಿದ್ದೀಯಾ? ಮುಖ್ಯ ಭಾಷಣಕಾರರ ಹೆಸರು ಪತ್ರಿಕೆಯ ಮುಖ್ಯಸ್ಥಾನದಲ್ಲಿ ಇರಬೇಕಲ್ವೆ? ನಿನ್ನ ಹೆಸರು ಎಲ್ಲರ ಹೆಸರು ಮುಗಿದ ಮೇಲೆ ಕೊನೆಯಲ್ಲಿ ಒಂದಿಷ್ಟು ಜಾಗವಿದ್ದರೆ, ಸಣ್ಣದಾಗಿ ಅಚ್ಚು ಹಾಕಿರುತ್ತಾರೆ ಅಲ್ವಾ ಎಂದರು. ಮೇಷ್ಟ್ರ ಮಾತನ್ನು ಕೇಳಿಸಿಕೊಳ್ತಾನೆ ಕೈಯಲ್ಲಿದ್ದ ಆಹ್ವಾನ ಪತ್ರಿಕೆ ನೋಡಿದೆ; ಅರೆ! ಅವರ ಮಾತು ನೂರಕ್ಕೆ ನೂರರಷ್ಟು ಸತ್ಯವಾಗಿತ್ತು. ಎಂಟು ಪುಟಗಳ ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರು ಎಂಟನೇ ಪುಟದ ಕೊನೆಯಲ್ಲಿ ಇತ್ತು! ಅದೂ ಗ್ರಾಮಪಂಚಾಯಿತಿ ಕಾರ್ಯದರ್ಶಿ, ಹಾಲಿನ ಡೈರಿಯ ಟೆಸ್ಟರ್, ಇವರೆಲ್ಲರ ಹೆಸರೂ ಆದಮೇಲೆ! ಅದೂ ಏನೋ ಅಪಾರ್ಥ ಕೊಡುವ ಮುದ್ರಣ ದೋಷದಿಂದ! ಇರಲಿ, ಸದ್ಯ ನನ್ನ ಹೆಸರು ಇದೆಯೆಲ್ಲಾ (ಶಿಲಾಶಾಸನದಂತೆ) ಎಂದು ನನಗೆ ನಾನೇ ತೃಪ್ತಿಪಟ್ಟುಕೊಂಡು ಆ ಗ್ರಾಮಕ್ಕೆ ತಲುಪಿದೆ.

ಊರು ತುಂಬಾ ಕಟೌಟ್‌ಗಳು ರಾರಾಜಿಸುತ್ತಿದ್ದವು. ಪುಡಿಯಲ್ಲಿ ಪುಡಿಯೆನಿಸುವ ಲೋಕಲ್ ರಾಜಕಾರಣಿಗಳೂ ಸಹ ತಮ್ಮ ತಮ್ಮ ನಾಯಕರನ್ನು ಮೆಚ್ಚಿಸುವುದಕ್ಕೆ ದೊಡ್ಡ ದೊಡ್ಡ ಫ್ಲೆಕ್ಸ್ ಹಾಕಿಸಿಕೊಂಡಿದ್ದರು. ಯಾವುದೋ ಪಕ್ಷದ ಸ್ಥಳೀಯ ಕಾರ್ಯಕರ್ತ ರಾಷ್ಟ್ರಮಟ್ಟದ ನಾಯಕ, ನಾಯಕಿಯರಿಂದ ಹಿಡಿದು ಕ್ಷೇತ್ರದ ಶಾಸಕರ ತನಕ ಎಲ್ಲರ ಚಿತ್ರವನ್ನು ಸಾಲಾಗಿ ಛಾಪಿಸಿದ್ದ; ಅವರದ್ದೆಲ್ಲ ಸಣ್ಣ ಸಣ್ಣ ಫೋಟೋಗಳಾಗಿದ್ದರೆ, ಫ್ಲೆಕ್ಸ್ ಹಾಕಿಸಿದ ಮಾಲೀಕನದು ಆಳೆತ್ತರದ, ಕೈಯಲ್ಲಿನ ಮೊಬೈಲ್‌ಅನ್ನು ಕಿವಿಯ ಬಳಿ ಹಿಡಿದು ರಾಜಠೀವಿಯಲ್ಲಿ ನಡೆಯುವ ಭಂಗಿಯಲ್ಲಿ ನಿಂತಿರುವ ಚಿತ್ರ! ಇನ್ನು ಕೆಲವರದು ಹೇಳಲೇಬಾರದು ತಮ್ಮ God fother, godess mother ಗಳ ಚಿತ್ರದ ಆಯಕಟ್ಟಿನ ಅಂಗಾಂಗಗಳ ಮೇಲೆ ಇವರ ಭಾವಚಿತ್ರ. ಅಲ್ಲಿದ್ದ ಎರಡು ಡಜನ್‌ಗೂ ಮಿಕ್ಕಿದ್ದ ಫ್ಲೆಕ್ಸ್‌ಗಳ ಪ್ರದರ್ಶನ ಒಂದನ್ನೊಂದು



ಮೀರಿಸುವಂತಿದ್ದವು. ಈ ನಾಯಕರುಗಳ ಸಾಲಿನಲ್ಲಿ ಜಯಂತಿ ಮಾಡಿಸಿಕೊಳ್ಳುತ್ತಿದ್ದ ಮಹಾತ್ಮನ ಚಿತ್ರ ಪಾಸ್‌ಪೋರ್ಟ್ ಅಳತೆಯಲ್ಲಿ ಒಂದು ಮೂಲೆಯಲ್ಲಿ ನಿಂತ ಅನಾಥ ಮಗುವಿನಂತೆ ಕಂಡು ಬರುತ್ತಿತ್ತು.

ಊರೊಳಗೆ ನನ್ನ ಕಾರು ಹೋಗುತ್ತಿದ್ದಂತೆಯೇ, ಪೊಲೀಸ್ ಜೀಪ್ ಒಂದು ಬಂದು ಅಡ್ಡಲಾಗಿ ನಿಂತಿತು. ಜೀಪ್‌ನಿಂದ ಇಳಿದು ಸೆಲ್ಯೂಟ್ ಹೊಡೆದ, ಆ ಅಧಿಕಾರಿ ನನ್ನ ಮಾಜಿ ಶಿಷ್ಯನಾಗಿದ್ದ. ಆತ ಏನು ಸಾರ್ ಇಂದು ನಿಮ್ಮ ಭಾಷಣ ಕೇಳಾ ಛಾನ್ಸ್ ತಪ್ಪಿಸಿಕೊಂಡೆ ನೋಡಿ ಅಂದ. ನಾನು ನಕ್ಕು, ಯಾಕ್ರಿ ಕ್ಲಾಸ್‌ನಲ್ಲಿ ಪಾಠ ಕೇಳಲಿಲ್ಲ, ಈಗಲಾದರೂ ಸ್ವಲ್ಪ ಕೇಳಬಹುದಾಗಿತ್ತು ಅಂದೆ. ಅದಕ್ಕೆ ಅವನು ಎಲ್ಲಿ ಕೇಳೋದು ಸಾರ್, ನಿನ್ನೆಯಿಂದ 144 ಹಾಕಿಬಿಟ್ಟಿದ್ದೇವೆ ಎಂದ. ನನಗೆ ಅವನ ಪೊಲೀಸ್ ಭಾಷೆ ಅರ್ಥವಾಗದೆ ಏನು ಎಂದೆ. ಫ್ಲೆಕ್ಸ್ ಹಾಕೋ ವಿಚಾರದಲ್ಲಿ ರಾತ್ರಿ ಈ ಊರಿನಲ್ಲಿ ಮಾರಾಮಾರಿ ನಡೆದು ಕಂಟ್ರೋಲ್ ಮಾಡೋದೇ ಕಷ್ಟವಾಗಿ ನೂರಾ ನಲವತ್ತು ನಾಲ್ಕು ಹಾಕಲೇಬೇಕಾಯಿತು. ಅದಕ್ಕೇ ಫಂಕ್ಷನ್ ಕ್ಯಾನ್ಸಲ್ ಆಗಿದೆ, ನಿಮಗೆ ಇದನ್ನು ಯಾರೂ ತಿಳಿಸಲಿಲ್ವಾ ಸಾರ್? ಬನ್ನಿ, ನಿಮ್ಮ ಕಾರಿಗೆ ಯಾರಾದರೂ ಕಲ್ಲು ಹೊಡೆದಾರು, ಊರಿಂದ ಆಚೆ ತನಕ ಎಸ್ಕಾರ್ಟ್ ಮಾಡ್ತೀನಿ ಎಂದು ಜೀಪ್ ಸ್ಟಾರ್ಟ್ ಮಾಡಿದ. ಬಂದ ಹಾದಿಗೆ ಸುಂಕವಿಲ್ಲದಂತೆ ಕಾರ್ ಹಿಂದಕ್ಕೆ ತಿರುಗಿಸಿದೆ. ಊರಾಚೆ ಜೀಪ್ ನಿಲ್ಲಿಸಿದ ಇನ್ಸ್‌ಪೆಕ್ಟರ್, ಸೆಲ್ಯೂಟ್ ಹೊಡೆದು ಇನ್ನು ಹೋಗಿ ಸಾರ್, ಅವರು ಕರೆದರು ಅಂತ ನೀವ್ಯಾಕ್ ಬರಾಕೋದ್ರಿ, ಅವರಿಗೇನೋ ಬುದ್ಧಿ ಇಲ್ಲ, ಆದರೆ ತಮ್ಮಂತಹ ವರಿಗೂ... ಎಂದು ಆತ ಮಾತನ್ನು ಅರ್ಧಕ್ಕೇ ನಿಲ್ಲಿಸಿದ. ಅವನು ಮುಂದೆ ಆಡಬೇಕೆಂದಿದ್ದ ವಾಕ್ಯವನ್ನು ನಾನೇ ಪೂರ್ಣಗೊಳಿಸಿಕೊಂಡೆ. ಅದು ನನಗೆ ಕೊಟ್ಟ ನೂರಾರು ಲಾಠಿ ಪೆಟ್ಟುಗಳನ್ನೂ ಮೀರಿಸುವಂತಿತ್ತು. ನಮ್ಮ ಜಯಂತಿಗಳು ಪಡೆಯುತ್ತಿರುವ ಸ್ವರೂಪಕ್ಕೆ ಇದೊಂದು ಉದಾಹರಣೆ ಅಷ್ಟೇ.

ಜಯಂತಿಗಳ ಆಚರಣೆ ತಮ್ಮ ತ್ಯಾಗ ಮತ್ತು ಸೇವೆಗಳಿಂದ ಸಮಾಜವನ್ನು ಉದ್ಧರಿಸಿದ ಮಹಾತ್ಮರನ್ನು ನೆನೆದುಕೊಳ್ಳುವ ಮೂಲಕ ಅವರ ತತ್ತ್ವ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅನುಸಂಧಾನದ ಪ್ರಕ್ರಿಯೆ. ಆದರೆ ಇತ್ತೀಚಿನ ದಿನಗಳಲ್ಲಿ ಅವುಗಳು ಪಡೆದುಕೊಂಡಿರುವ ಸ್ವರೂಪವಂತೂ ಪ್ರಜ್ಞಾವಂತರಿಗೆ ಬೇಸರ ತರಿಸುವಂತಿದೆ. ಜಾತಿಗಳು, ಪಂಗಡ ಒಳಪಂಗಡಗಳು, ರಾಜಕೀಯ ಪಕ್ಷಗಳು, ಸಮುದಾಯಗಳು ಈ ಸಂದರ್ಭವನ್ನು ತಮ್ಮ ವಿಕೃತ ಮನಸ್ಸಿನ ವಿಜೃಂಭಣೆಗೆ ಬಳಸಿಕೊಳ್ಳುತ್ತಿರುವ ರೀತಿ ಅಸಹ್ಯಭಾವವನ್ನು ಉಂಟುಮಾಡುವಂತಿದೆ. ದರ್ಶನಕ್ಕಿಂತ ಪ್ರದರ್ಶನದ ಭರಾಟೆ, ಶ್ರಮ, ಕಾಲ, ಹಣದ ಅಪವ್ಯಯಕ್ಕೆ ಕಾರಣವಾಗಿದೆ. ಇತ್ತೀಚೆಗೆ ಇವುಗಳ ಸಂಖ್ಯೆಯೂ ವಿಪರೀತವಾಗುತ್ತಿರುವುದರಿಂದ ಆಡಳಿತಯಂತ್ರಕ್ಕೂ ದೊಡ್ಡ

ತಲೆನೋವಿನ ಸಂಗತಿಯಾಗುತ್ತಿದೆ. ಎಲ್ಲದಕ್ಕೂ ಸರ್ಕಾರ ಹಣ ಮಂಜೂರು ಮಾಡಬೇಕು, ಜಾತಿಯ, ಧರ್ಮದ, ಪಕ್ಷದ ನಾಯಕರನ್ನು ಓಲೈಸಬೇಕು. ಭಾವಚಿತ್ರ ಹಾಕುವುದರಲ್ಲಿ, ಹಾರ ತುರಾಯಿ ತರುವಲ್ಲಿ, ಶಿಷ್ಟಾಚಾರ ಪಾಲಿಸುವಲ್ಲಿ ವಹಿಸಬೇಕಾದ ಎಚ್ಚರವನ್ನು ನೆನೆಸಿಕೊಂಡರೇ ಸಾಕು ಅಧಿಕಾರಿ ವರ್ಗಕ್ಕೆ ಛಳಿಜ್ವರ ಬಂದ ಅನುಭವವಾಗುತ್ತದೆ. (ಜಯಂತಿ ಎಂಬುದ ಮಾಡಬಾರದು, ಅದು ಗರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು' - ಬಸವಣ್ಣನವರ ಕ್ಷಮೆ ಕೋರಿ). ಮೆರವಣಿಗೆ ನಡೆಯುವ ಬೀದಿಗಳಲ್ಲಿನ ಜನ ಅದು ಮುಗಿಯುವ ತನಕ ಜೀವವನ್ನು ಕೈಲಿ ಹಿಡಿದುಕೊಂಡು ಬದುಕಬೇಕು. ಪಟಾಕಿಗಳ ಸಿಡಿತ, ವಾದ್ಯಗೋಷ್ಠಿಗಳ ಅಬ್ಬರ, ಕುಣಿದು (ಕುಡಿದು) ಕುಪ್ಪಳಿಸುವವರ ಆಟಾಟೋಪ – ಇಂತಹ ಹತ್ತು ಹಲವು ವಿಕೃತಗಳನ್ನು ಹೇಳಬಾರದು, ಹೇಳದಿರಬಾರದು ಎನ್ನುವ ಸ್ಥಿತಿ. ಅವರ ಜಯಂತಿಗಿಂತ, ತಮ್ಮ ಜಯಂತಿ ಹೆಚ್ಚು ವಿಜೃಂಭಣೆಯಿಂದ ನಡೆಯಬೇಕು ಎನ್ನುವ ಕೆಟ್ಟ ಸ್ಪರ್ಧೆ. ಇದೆಲ್ಲವನ್ನು ಸಾರ್ವಜನಿಕರು ಸಹಿಸಿಕೊಳ್ಳಬೇಕು. ಆ ಮಹಾಪುರುಷ ತಮ್ಮವನೆಂದು ಹೇಳಿಕೊಳ್ಳುವ ಸಮುದಾಯಕ್ಕೆ ತೋಳ್ಬಲ, ಹಣಬಲ, ರಾಜಕೀಯಬಲ ಇದ್ದರಂತೂ ಅವರನ್ನು ಓಲೈಸಲು ಸರ್ಕಾರ ರಜಾದಿನವನ್ನು ಘೋಷಿಸಬೇಕು. ನಮ್ಮ ದೇಶದಲ್ಲಿರುವ ಇಂತಹ ರಜೆಗಳು ಪ್ರಪಂಚದ ಬೇರೆ ಯಾವ ರಾಷ್ಟ್ರದಲ್ಲಿಯೂ ಇಲ್ಲ ಎನ್ನುವುದನ್ನು ಆಲೋಚಿಸಿದಾಗ, ರಜೆಯನ್ನು ಕೊಡುವುದು ಯಾವ ಪುರುಷಾರ್ಥಕ್ಕೆ? ಇದಕ್ಕೆ ಪರ್ಯಾಯವಿಲ್ಲವೇ? ಮಹಾಮಹಿಮರ ದಿನ ಎಂದು ವರ್ಷದಲ್ಲಿ ಒಂದು ದಿನವನ್ನು ಪರಿಗಣಿಸಿ, ಆ ದಿನ ಎಲ್ಲ ಮಹನೀಯರನ್ನು ಸಾಂಕೇತಿಕವಾಗಿ ಸ್ಮರಿಸುವ ದಿಸೆಯಲ್ಲಿ ಚಿಂತನೆ ನಡೆಸಬಹುದಲ್ಲವೇ? (ಈ ಬಾರಿ ಪಾಂಡವಪುರದಲ್ಲಿ ಇಂತಹ ಒಂದು ಪ್ರಯೋಗ ನಡೆದು ನಾನೂ ಅದರಲ್ಲಿ ಭಾಗವಹಿಸಿದ್ದೆ) ಹೀಗೆ ಮಾಡಿದರೆ ಆಗುವ ನಷ್ಟವಾದರೂ ಏನು? ಎಲ್ಲ ವರ್ಗದವರೂ, ಸಮುದಾಯದವರೂ ಒಂದೆಡೆ ಸೇರಿ ಸಾಮೂಹಿಕವಾಗಿ ಮಹಾತ್ಮರ 'ಸ್ಮರಣೆ' ಮಾಡುವುದು ಭಾವೈಕ್ಯತೆಯ ದೃಷ್ಟಿಯಿಂದ ಹೆಚ್ಚು ಲಾಭದಾಯಕವೇ ಅಲ್ಲವೇ. ಮೌಲ್ಯಪ್ರಜ್ಞೆ ರಸಾತಲಕ್ಕೆ ತಲುಪಿರುವ ಇಂದಿನ ದಿನಮಾನಗಳಲ್ಲಿ ಇಂತಹ ಚಿಂತನೆಯೂ ಅಪರಾಧದ ಛಾಯೆಯನ್ನು ಪಡೆದುಕೊಂಡರೂ ಆಶ್ಚರ್ಯವಿಲ್ಲ. ಆದರೂ... ನನ್ನ ಆತ್ಮಸಾಕ್ಷಿಯಂತೂ ಹೀಗೆ ಮಿಡಿಯುತ್ತಿದೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಪ್ರತಿವರ್ಷ ಏಪ್ರಿಲ್ ಮಾಸ ಬಂತೆಂದರೆ ಸಾಲುಸಾಲು ಜಯಂತಿಗಳು ಬರುತ್ತವೆ. ಮಹಾವೀರ ಜಯಂತಿ, ಶಂಕರ ಜಯಂತಿ, ಮಧ್ವ ಜಯಂತಿ, ರಾಮಾನುಜ ಜಯಂತಿ, ಬಸವ ಜಯಂತಿ, ಅಂಬೇಡ್ಕರ್ ಜಯಂತಿ, ಹಾಗೆಯೇ ಇತ್ತೀಚಿನ ವರ್ಷಗಳಲ್ಲಿ ಸರ್ವಜ್ಞ ಜಯಂತಿ, ಭಗೀರಥ ಜಯಂತಿ, ದಲಿತ ಶರಣರ ಜಯಂತಿ – ಹೀಗೆ ಸಾಲುಸಾಲಾಗಿ ಜಯಂತಿಗಳನ್ನು ಆಚರಿಸಲಾಗುತ್ತದೆ. ಇವುಗಳ ಜೊತೆಗೆ ಗುಡ್ ಫ್ರೈಡೇ, ಹೋಲಿ ಸಾಟರ್‌ಡೇ, ಈಸ್ಟರ್ ಡೇ, ಸಂಕಷ್ಟ ಚತುರ್ಥಿ, ಅಕ್ಷಯ ತೃತೀಯೆ ಮುಂತಾದ ಪವಿತ್ರ ದಿನಗಳೂ ಇವೆ. ಇವುಗಳ ಜೊತೆಗೆ ಅನೇಕ ಸ್ಥಳಗಳಲ್ಲಿ ರಥೋತ್ಸವಗಳು, ಮಹಾಪುರುಷರ ಆರಾಧನೆಗಳೂ ನಡೆಯುತ್ತವೆ. ಕ್ಯಾಲೆಂಡರ್‌ಗಳ ಪುಟಗಳನ್ನು ತಿರುವಿಹಾಕಿದರೆ, ಪ್ರತಿದಿನವೂ ಒಂದಲ್ಲ ಒಂದು ಕಡೆ ಜನಪದರ ಪೂಜೆ, ಸೇವಾಕೈಂಕರ್ಯಗಳು ನಡೆಯುತ್ತಲೇ ಇರುತ್ತವೆ. ಇಡೀ ಜನಸಮೂಹ, ಕೆಲವೊಮ್ಮೆ ಆಯಾ ವರ್ಗದ, ಸಮುದಾಯದ ಜನ ಅವುಗಳನ್ನು ಶ್ರದ್ಧಾಭಕ್ತಿಗಳಿಂದ ಆಚರಿಸುತ್ತ ಬಂದಿರುವುದರಿಂದಲೇ – ಸಾಮಾಜಿಕವಾಗಿ, ರಾಜಕೀಯವಾಗಿ ಏನೆಲ್ಲ ಬದಲಾವಣೆಗಳು ನಡೆದಿದ್ದರೂ – ಈ ಪಾರಂಪರಿಕ ನಂಬಿಕೆ, ನಡಾವಳಿಗಳು ನಿರಂತರವಾಗಿ ಉಳಿದುಕೊಂಡು ಬಂದಿವೆ. ತಿಳಿದೋ, ತಿಳಿಯದೆಯೋ ಅಲ್ಲಲ್ಲಿ ಸಣ್ಣಪುಟ್ಟ ಮೌಢ್ಯ, ಕಂದಾಚಾರಗಳು ಗೋಚರವಾದರೂ, ಒಟ್ಟಾರೆಯಾಗಿ ಇವು ಸಮುದಾಯದ ಭಾವಕೋಶವನ್ನು ಒಂದಾಗಿ ಬೆಸೆಯುವುದರಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತ ಬಂದಿರುವುದನ್ನೂ ಅಲ್ಲಗಳೆಯುವಂತಿಲ್ಲ. ಒಂದು ಗ್ರಾಮದಲ್ಲಿ ಕೆಲವೊಮ್ಮೆ ಕ್ಷುಲ್ಲಕ ಕಾರಣಗಳಿಗಾಗಿ ಜನಗಳ ನಡುವೆ ಪರಸ್ಪರ ಅನುಮಾನ, ದ್ವೇಷ, ಅಸಹನೆಗಳು ಮನೆ ಮಾಡಿದ್ದರೂ, ಒಂದು ಹಬ್ಬ, ಜಾತ್ರೆ, ಜಯಂತಿ, ಆರಾಧನೆಗಳು ಬಂದರೆ ಸಾಕು, ಅವೆಲ್ಲವೂ ಮರೆಯಾಗಿ ಹೋಗಿ ಭೇದಭಾವಗಳನ್ನು ಮರೆತು ಎಲ್ಲರೂ ಊರೊಟ್ಟಿನ ಕೆಲಸದಲ್ಲಿ ಭಾಗಿಗಳಾಗಿ ಸಂಭ್ರಮಿಸುವುದನ್ನು ಕಾಣಬಹುದು. ಮುಗ್ಧರಿರಲಿ, ವಿದಗ್ಧರಿರಲಿ ಎಲ್ಲರೂ 'ಧಾರ್ಮಿಕ' ಕಾರ್ಯಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುತ್ತಾರೆ. ಇಂತಹ ಸಾಮುದಾಯಿಕ ಪ್ರಕ್ರಿಯೆಗಳು ಗ್ರಾಮೀಣ ಜನರನ್ನು ಅಷ್ಟಿಷ್ಟಾದರೂ ಸ್ವಾರ್ಥ ರಹಿತರನ್ನಾಗಿ ಮಾಡುತ್ತವೆ. ಎಂತಹ ಕಡುಬಡವರೂ, ಅವರ ಪಾಲಿನ ಕಾಣಿಕೆಯನ್ನು, ಯಾವುದಾದರೂ ರೂಪದಲ್ಲಿ ಕೊಡಲು ಸ್ವಯಂಪ್ರೇರಿತರಾಗಿ ಮುಂದೆ ಬರುತ್ತಾರೆ.

ಎಲ್ಲೆಲ್ಲೋ ಹರಡಿಹೋಗಿರುವ ಬಂಧುಬಾಂಧವರು, ಆಪ್ತೇಷ್ಟರು ಇಂಥ ಸಂದರ್ಭಗಳಲ್ಲಿ ಊರಿಗೆ ಬಂದು ಕೆಲವು ದಿನಗಳವರೆಗಾದರೂ ತಮ್ಮ ಪರಿಚಯವನ್ನು ಅರ್ಥೈಸಿಕೊಳ್ಳುವ, ಆಪ್ತವಾಗಿಸುವ ಅವಕಾಶವನ್ನು ಕಲ್ಪಿಸಿಕೊಳ್ಳುತ್ತಾರೆ. ಮನೆಗಳೂ ಕೂಡ ಗ್ರಾಮದ ಉತ್ಸವದ ಕಾರಣಕ್ಕಾಗಿ ಸ್ವಚ್ಛವಾಗಿ ಬೆಳಗಿ ನಿಲ್ಲುತ್ತವೆ. ಶ್ರೀಮಂತರ ಮನೆಯ ಊಟ, ಬಡವರ ಮನೆಯ ಊಟ ಒಂದೇ ಆಗಿರುತ್ತದೆ. ಶಿವರಾತ್ರಿ, ಯುಗಾದಿ, ದೀಪಾವಳಿ ಮುಂತಾದ ಹಬ್ಬಗಳಲ್ಲಿ ನಿರ್ದಿಷ್ಟವಾದ ಅಡಿಗೆಯನ್ನು ಮಾಡುವ ಪದ್ಧತಿ ಇಂದಿಗೂ ಹಳ್ಳಿಗಳಲ್ಲಿ ರೂಢಿಯಲ್ಲಿದೆ. ಗೌರಿ ಹಬ್ಬದ ದೋಸೆ, ಗಣೇಶನ ಹಬ್ಬಕ್ಕೆ ಮೋದಕ ಇವು ಇಂಥ ಕೆಲವು ಉದಾಹರಣೆಗಳು. ಅವರವರ ಆರ್ಥಿಕ ಸ್ಥಿತಿಗತಿಗೆ ತಕ್ಕಂತೆ ಎಲ್ಲರೂ ಹೊಸ ಬಟ್ಟೆ ಧರಿಸುತ್ತಾರೆ. ಅಂದು ಬಡವ ಬಲ್ಲಿದ ಭೇದ ಎಲ್ಲೂ ಕಂಡುಬರುವುದೇ ಇಲ್ಲ; 'ವ್ಯಕ್ತಿಗತ ಅಹಂಕಾರ'ಕ್ಕೆ ಒಂದಿಷ್ಟೂ ಎಡೆಯಿರುವುದಿಲ್ಲ. ಏಕೆಂದರೆ ಒಂದು ಧಾರ್ಮಿಕ ಕ್ರಿಯೆಯಲ್ಲಿ ಊರಿನ ಪ್ರತಿಯೊಬ್ಬರ ಪಾಲೂ ಸಮಾನವಾಗಿರುತ್ತದೆ. ಒಂದು ರಥೋತ್ಸವದಲ್ಲಿ ರಥದ ಮೇಲಿನ ವಿಗ್ರಹವನ್ನು ಪೂಜಿಸುವ ಅರ್ಚಕ ಎಷ್ಟು ಮುಖ್ಯವೋ, ರಥದ ಮುಂದಿನ ನಾಗಸ್ವರದವರು, ಹಗ್ಗ ಎಳೆಯುವವರು, ತಮಟೆ ಬಡಿಯುವವರು, ರಥಕ್ಕೆ ಕೀಲೆಣ್ಣೆ ಹಾಕುವವರು – ಎಲ್ಲರೂ ಅಷ್ಟೇ ಮುಖ್ಯರಾಗುತ್ತಾರೆ.

ಈ ಸರಪಳಿ ಕ್ರಿಯೆಯಲ್ಲಿ ಒಂದು ಗೈರುಹಾಜರಾದರೂ ಇಡೀ ಪ್ರಕ್ರಿಯೆಯೇ ಸ್ಥಗಿತಗೊಳ್ಳುತ್ತದೆ; ಭಕ್ತರ ಭಾವನೆಗೆ ಧಕ್ಕೆ ಬರುತ್ತದೆ. ಪೂಜಾಕೈಂಕರ್ಯವನ್ನು ಸಲ್ಲಿಸುವವರಿಗೆ ಮೆರವಣಿಗೆಯಲ್ಲಿ ಬರುವುದು ಯಾವ ದೇವರು ಎನ್ನುವುದು ಮುಖ್ಯವಾಗುವುದಿಲ್ಲ; ಅವರಿಗೆ ಅದು 'ದೇವರು' ಎನ್ನುವುದಷ್ಟೇ ಮುಖ್ಯ. ಅವರ ಭಾವ ಅಖಂಡವಾಗಿ ಅದನ್ನು ಅನುಭವಿಸುತ್ತಿರುತ್ತದೆ.

ಪ್ರಾಯಃ ಈ ಕಾರಣಕ್ಕಾಗಿಯೇ ಪುರಾತನರು ಸಾಮಾಜಿಕ ಸ್ವಾಸ್ಥ್ಯ ಹಾಗೂ ವ್ಯಕ್ತಿಗತ ಉತ್ಥಾನಕ್ಕಾಗಿ ಜಯಂತಿ, ಆರಾಧನೆ, ಹಬ್ಬ, ಉತ್ಸವಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ಕಾಲಕಾಲಕ್ಕೆ ಇವುಗಳನ್ನು ಆಚರಿಸುವ ರೂಪಗಳು ಬದಲಾಗಿದ್ದರೂ, ಆಚರಿಸುವವರ ಮನಸ್ಸು ಮಾತ್ರ ಹಾಗೆಯೇ ಇದೆ. ಅದೆಂದರೆ ದೈವದ ಮುಂದೆ ತನ್ನನ್ನು ತೃಣವೆಂದು ಭಾವಿಸಿ, ಆ ಭಾವದಲ್ಲಿ ಬದುಕನ್ನು ಹೊಸದಾಗಿ ರೂಪಿಸಿಕೊಳ್ಳುವುದು. ನಮ್ಮ ನಡುವೆ ಇದ್ದ ಮಹನೀಯರ ಜಯಂತಿಗಳಿರಬಹುದು, ಕಾಣದಿರುವ ದೇವರ ಪೂಜೆ ಇರಬಹುದು – ಇವೆಲ್ಲವೂ ಮನುಷ್ಯರನ್ನು ಮನುಷ್ಯರನ್ನಾಗಿಸುವುದಕ್ಕೆ, ದೈವತ್ವಕ್ಕೇರಿಸುವುದಕ್ಕೆ ಇರುವಂತಹವು. ಈ ಪ್ರಜ್ಞೆ ಸರ್ವರಲ್ಲೂ ಸದಾ ಜಾಗೃತವಾಗಿರಲೆಂದು ಹಾರೈಸೋಣ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# 'ಮೈಸೂರು ಸ್ಟಾರ್' ಪತ್ರಿಕೆ ಹಾಗೂ ವೀರಸಂಗಪ್ಪನವರು

**ಡಾ. ಬಿ. ನಂಜುಂಡಸ್ವಾಮಿ**

ಹಳೆ ಮೈಸೂರಿನ ಬಹಳ ಪ್ರಮುಖವಾದ 'ಮೈಸೂರು ಸ್ಟಾರ್' ಪತ್ರಿಕೆ ಪ್ರಾರಂಭದ ದಿನದಿಂದ ಹೋರಾಟದಲ್ಲೇ ಮುಂದುವರಿದು, ನಿಂತುಹೋದ ನಂತರವೂ ಈ ಪತ್ರಿಕೆಯ ಬಗ್ಗೆ ಸರಿಯಾದ ಮಾಹಿತಿಯು ಲಭಿಸದೆಹೋದದ್ದು ಪತ್ರಿಕೆಯ ದುರಾದೃಷ್ಟವೇ ಸರಿ. ಸುಮಾರು 56 ವರ್ಷಗಳು ಜನಸಾಮಾನ್ಯರಿಗೋಸ್ಕರ ಸರ್ಕಾರದ ಕಡೆಯಿಂದ ಸಿಕ್ಕಬೇಕಾದ 'ವಿದ್ಯೆ' 'ನೌಕರಿ' ಕೊಡಿಸಲು ಇದು ಸಾಕಷ್ಟು ಹೋರಾಟ ಮಾಡಿದೆ. ಸಂಸ್ಕೃತ ವಿದ್ಯಾಭ್ಯಾಸದ ಬಗ್ಗೆಯಂತೂ ಈ ಪತ್ರಿಕೆ ಅವಿರತವಾದ ಹೋರಾಟವನ್ನು ಮಾಡಿ ತನ್ನ ಪತ್ರಿಕೆಯಲ್ಲಿ ಅನೇಕ ಸಂಪಾದಕೀಯಗಳನ್ನು ಬರೆದು ಜನರಿಗೆ ತಿಳುವಳಿಕೆ ಉಂಟುಮಾಡಿತು. ಸಂಸ್ಕೃತ ವಿದ್ಯಾಭ್ಯಾಸವನ್ನು ಎಲ್ಲರಿಗೂ ಕೊಡಿ. ಸರ್ಕಾರದ ಖರ್ಚಿನಲ್ಲಿ ನಡೆಯುವ ಸಂಸ್ಕೃತ ಪಾಠಶಾಲೆಯಲ್ಲಿ ಕಲಿಯಲು ಎಲ್ಲಾ ನಾಗರಿಕರಿಗೂ ಹಕ್ಕಿದೆ. ಒಂದು ವರ್ಗದವರ ಕಂದಾಯದಿಂದಲೆ ಸಂಸ್ಕೃತ ಪಾಠಶಾಲೆ ನಡೆಯುತ್ತಾ ಇಲ್ಲವಲ್ಲ ಎಂದು ಬಹಳಷ್ಟು ವಾದಮಾಡಿ ತನ್ನ ಪತ್ರಿಕೆಯಲ್ಲಿ ಈ ವಿಷಯದಲ್ಲಿ ಕುರಿತು ಸಂಪಾದಕೀಯವನ್ನು ಬರೆದಿದೆ. ಬ್ರಾಹ್ಮಣೇತರ ಚಳವಳಿಗೆ ಮೈಸೂರು ರಾಜ್ಯಕ್ಕೆ ಈ ಪತ್ರಿಕೆ ಒಂದು ಬೆನ್ನೆಲಬು ಆಗಿತ್ತು ಅಂದರೆ ಅತಿಶಯೋಕ್ತಿ ಆಗಲಾರದು.

ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಕನ್ನಡ ವಿಷಯ ವಿಶ್ವಕೋಶ ಪುಟ 884ರಲ್ಲಿ "20ನೇ ಶತಮಾನದ ಆರಂಭದ ಕಾಲದಲ್ಲಿ 'ಮೈಸೂರು ಸ್ಟಾರ್' ಪ್ರಾರಂಭವಾಯಿತು. ಹಿಂದುಳಿದ ವರ್ಗಗಳ ಮುನ್ನಡೆಗಾಗಿ ಹೋರಾಟ ನಡೆಸುತ್ತಿದ್ದ ಈ ಪತ್ರಿಕೆ ಕೆಲವೇ ವರ್ಷಗಳಲ್ಲಿ ನಿಂತುಹೋಯಿತು" ಅನ್ನುವ ಮಾಹಿತಿ ಕೊಟ್ಟಿದೆ. ಆದರೆ ಸತ್ಯವೇ ಬೇರೆ.

ಕೈ. ಯಜಮಾನ್ ವೀರಸಂಗಪ್ಪನವರು 1891 ಫೆಬ್ರವರಿ 8ನೇ ತಾರೀಖು ಭಾನುವಾರದ ಸಂಚಿಕೆಯಲ್ಲಿ 'ಮೈಸೂರು ಸ್ಟಾರ್' ಪತ್ರಿಕೆಯಲ್ಲಿ ಬರೆದ ಒಕ್ಕಣೆ ಹೀಗಿದೆ: 'ಮೈಸೂರು ಸ್ಟಾರ್'ಯೆಂಬ ಅಭಿದಾನವುಳ್ಳ ಪತ್ರಿಕೆಯೂ 1880ನೇ ಇಸವಿಯಲ್ಲಿ ಹೊರಡುವುದಕ್ಕೆ ಆರಂಭವಾಗಿದ್ದು, 1882ನೇ ಇಸವಿ ಜನವರಿ ತಿಂಗಳಲ್ಲಿ ನಮ್ಮ ವಶವಾಗಿ 1887 ಜುಲೈ ಮಾಹೆವರಿಗೂ ಚಾಲ್ತಿಯಲ್ಲಿದ್ದು ಈ ಪತ್ರಿಕೆ ಚಂದಾದಾರರು ತಮ್ಮಗಳ ಮೇಲೆ ಇರತಕ್ಕ ಬಾಕಿಯನ್ನು ರವಾನಿಸಿ ಸಹಾಯ ಮಾಡುವ ವಿಷಯದಲ್ಲಿ

ಉದಾಸೀನರಾದ ಪ್ರಯುಕ್ತ ಹೊರಡುತ್ತಿದ್ದನ್ನು ಆಗ್ಗೆ ನಿಲ್ಲಿಸಿದ್ದು ಪುನಃ ಪ್ರಚಾರಪಡಿಸಲು ಉಂಟಾದ ಕಾರಣವೇನೆಂದ್ರೆ"...ಎಂದು ಸ್ಟಾರ್ ಪತ್ರಿಕೆ ಹುಟ್ಟಿನ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿದೆ.

ಮೈಸೂರು ಸ್ಟಾರ್ ಹುಟ್ಟು ಬೆಳವಣಿಗೆಯನ್ನು ಆರಂಭದಿಂದಲೂ ನೋಡಿದ, ಜೊತೆಗೆ ಆ ಪತ್ರಿಕೆಯ ಬಾಲ್ಯಾವಸ್ಥೆಯಲ್ಲಿ ಉತ್ತಮವಾದ ಲೇಖನವನ್ನು ಬರೆದು ಯಜಮಾನ್ ವೀರಸಂಗಪ್ಪನವರ ಕೈ ಬಲಪಡಿಸಿದ ಕರ್ನಾಟಕ ಭಾಷಾರತ್ನ ಆಸ್ಥಾನ ವಿದ್ವಾನ್ ಕರಿಬಸವಶಾಸ್ತ್ರಿಗಳಿಗೂ ಯಜಮಾನ್ ವೀರಸಂಗಪ್ಪನವರಿಗೂ ಕೆಲವು ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದು 1891ರ ಜುಲೈ ತಿಂಗಳಿನಿಂದ 'ವೀರಶೈವ ಮತ ಪ್ರಕಾಶಿಕಾ' ಪತ್ರಿಕೆಯನ್ನು ಶುರು ಮಾಡಿದರು. ಮೈಸೂರು ಮಹಾರಾಜ ಕಾಲೇಜಿನ ಮುನಿಷಿಯಾಗಿ ಕೆಲಸ ಮಾಡುತ್ತಾ ಇದ್ದ ಶಾಸ್ತ್ರಿಗಳು ತಮ್ಮ ದತ್ತುಮಗ ರುದ್ರಪ್ಪನವರನ್ನು ತಮ್ಮ ಪತ್ರಿಕೆಗೆ ಸಂಪಾದಕರನ್ನಾಗಿ ಮಾಡಿದ್ದರು. ಶ್ರೀ ರುದ್ರಪ್ಪನವರು ಶಾಸ್ತ್ರಿಗಳ ನೇತೃತ್ವದಲ್ಲಿ ನಡೆಯುತ್ತಾ ಇದ್ದ ಮೈಸೂರು ಮಂಡಿ ಪೇಟೆಯಲ್ಲಿ ಇದ್ದ ವಿದ್ಯಾಭಿವರ್ಧಿನೀ ಪಾಠಶಾಲೆಯ ಉಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಾ ಇದ್ದರು. "ವೀರಶೈವ ಮತ ಪ್ರಕಾಶಿಕಾ ಪತ್ರಿಕೆಯಲ್ಲಿ 1891 ಅಕ್ಟೋಬರ್ ತಿಂಗಳಲ್ಲಿ" ಮೈಸೂರು ಸ್ಟಾರ್ ಪತ್ರಿಕಾ ಪ್ರಲಾಪವು ಲೇಖನದಲ್ಲಿ ಮೈಸೂರು ಸ್ಟಾರ್ ಬಗ್ಗೆ ಕೆಳಕಂಡ ಮಾಹಿತಿ ಲಭ್ಯವಿದೆ.

### ಮೈಸೂರು ಸ್ಟಾರ್ ಮೊದಲನೆ ಜನ್ಮದ ವೃತ್ತಾಂತ

ಮ||ರಾ|| ಅಸಿಸ್ಟೆಂಟ್ ಶ್ರೀನಿವಾಸರಾಯರು ಮ||ರಾ|| ಗಣೇಶಸಿಂಗರು ಕುಮಾರಸ್ವಾಮಿ ಮೊದಲಿಯಾರ್ ಮುಂತಾದ ದೊಡ್ಡ ಮನುಷ್ಯರು ಪರೋಪಕಾರ ಬುದ್ಧಿಯಿಂದ ಒಂದು ಮೀಟಿಂಗ್ ಮಾಡಿ ಕೆಲಸಗಾರರಿಗೆ 'ಜೀವನೋಪಾಯಂಗಳಂ' ಕಲ್ಪಿಸಬೇಕೆಂದು ನಿರ್ಧರಿಸಿ ಈ ಸಂಸ್ಥಾನದಲ್ಲಿ ಒಂದು ಮುದ್ರಾಶಾಲೆಯನ್ನು ಅದರಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಿಂದ ಕೂಡಿದ "ಮೈಸೂರು ಸ್ಟಾರ್" ಎಂಬ ವಾರಪತ್ರಿಕೆಯನ್ನು ಹಾಗೂ ಮರಗೆಲಸ ಕಾರ್ಖಾನೆಯನ್ನು, ಕಬ್ಬಿಣ ಕೆಲಸ ಕಾರ್ಖಾನೆಯನ್ನು, ಒಂದು ಬ್ಯಾಂಕನ್ನು ಸ್ಥಾಪಿಸಿ 2-3 ವರ್ಷಗಳು ನಡೆಸಿದರು. ಈಚೆಗೆ ಯಾವ ಕಾರಣದಿಂದಲೋ ಮುದ್ರಾಯಂತ್ರವನ್ನು ಮಾರಿಬಿಡಬೇಕು ಎಂದು ನಿರ್ಧರಿಸಿದಾಗ, ಅದನ್ನು ಯಜಮಾನ್ ವೀರಸಂಗಪ್ಪನವರು ಮತೀಯ ಗ್ರಂಥಗಳನ್ನು ಪ್ರಕಾಶಪಡಿಸಲು ತೆಲುಗು, ಕನ್ನಡ, ಇಂಗ್ಲಿಷ್ ಅಕ್ಷರಗಳೊಡನೆ ಮೂರು ಸಾವಿರ ರೂಪಾಯಿ ಕ್ರಯಕ್ಕೆ ತೆಗೆದುಕೊಂಡದ್ದಲ್ಲದೆ ಆ ಮುದ್ರಾಶಾಲೆಯಲ್ಲಿ ನಡೆಯುತ್ತಿದ್ದ ಸ್ಟಾರ್ ಪತ್ರಿಕೆಯನ್ನು ತಮ್ಮ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡರು. ಸ್ವಲ್ಪ ತಿಂಗಳ ನಂತರ ಇಂಗ್ಲಿಷ್ ಭಾಗವನ್ನು ಕೈಬಿಟ್ಟು ಕನ್ನಡ ಭಾಗವನ್ನು ಮಾತ್ರ ಪ್ರಕಟ ಮಾಡಲು ಪ್ರಾರಂಭಿಸಿದರು.



ಮೈಸೂರು ಸ್ಟಾರ್ ಪತ್ರಿಕೆಯಲ್ಲಿ 2-3 ಶಂಕರ ಸಂಹಿತಾ ವಚನಗಳನ್ನು ಬರೆದದ್ದರ ಮೇಲೆ ಪಾಲಹಳ್ಳಿ ರಂಗಣ್ಣನವರು, ನಾಗಮಂಗಲದ ನರಸಿಂಹಶಾಸ್ತ್ರಿಗಳು, ಕಳಲೆ ವೆಂಕಟರಮಣ್ಣಯ್ಯನವರು ಮತ್ತು ಹಾವನೂರು ಭುಜಂಗಚಾರ್ಯರು ವೀರಶೈವ ಮತದ ಮೇಲೆ ದೋಷಾರೋಪಣೆಗಳನ್ನು ಮಾಡಿದರು. ಅದನ್ನೆಲ್ಲಾ ವೀರಸಂಗಪ್ಪನವರು ವಿದ್ವಾಂಸರ ಮುಖದಿಂದಲೇ ಸಪ್ರಮಾಣವಾಗಿ ಖಂಡಿಸಿದರು. 1885ರ ತನಕ ವಾರಪತ್ರಿಕೆಯಾಗಿದ್ದ ಮೈಸೂರು ಸ್ಟಾರ್ ಮಾಸಪತ್ರಿಕೆಯಾಗಿ ಮಾರ್ಪಾಟಾಯಿತು. ಹೀಗೆ ವರ್ಷ ನಡೆದ ನಂತರ ತಮ್ಮ ಮುದ್ರಾಯಂತ್ರವನ್ನು ಮ||ರಾ|| ಮಾಸ್ತಣ್ಣನವರ ಮೂಗಣ್ಣನವರಿಗೆ ಮಾರಿಬಿಟ್ಟರು. 1887ನೇ ಇಸವಿಯಲ್ಲಿ ಮೈಸೂರು ಸ್ಟಾರ್ ನಿಂತು ಹೋಯಿತು.

### ಎರಡನೇ ಜನ್ಮದ ವೃತ್ತಾಂತ

ಮೊದಲಿನ ಸ್ಟಾರ್ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಕನ್ನಯ್ಯನಾಯಿಡು ಒಂದು ಮುದ್ರಾಯಂತ್ರವನ್ನು ಮದ್ರಾಸಿನಿಂದ ತರಿಸಿದ್ದರು. ಕೆಲವು ದಿನಗಳಲ್ಲಿ ಕನ್ನಯ್ಯನಾಯಿಡು ಮೃತಪಟ್ಟದ್ದರಿಂದ ಹರಾಜಿನಲ್ಲಿ ತಾವೇ ಪ್ರೆಸ್ಸನ್ನು ವಹಿಸಿಕೊಂಡರು. 1891 ರಿಂದ ಮತ್ತೆ ಮೈಸೂರು ಸ್ಟಾರ್ ಪ್ರಾರಂಭವಾಯಿತು.

ಹೀಗೆ 1880 ರಲ್ಲಿ ಪ್ರಾರಂಭವಾದ ಮೈಸೂರು ಸ್ಟಾರ್ ಪತ್ರಿಕೆ 1882 ಜನವರಿ ತಿಂಗಳಿನಿಂದ ಯಜಮಾನ ವೀರಸಂಗಪ್ಪನವರ ವಶವಾಗಿ 1887 ಜುಲೈ ತಿಂಗಳವರೆಗೂ ನಡೆದು ಮತ್ತೆ 1891 ಫೆಬ್ರವರಿ 8ನೇ ತಾರೀಖು ಭಾನುವಾರ ವಾರಪತ್ರಿಕೆಯಾಗಿ ಪ್ರಾರಂಭವಾಯಿತು. ಯಜಮಾನ್ ವೀರಸಂಗಪ್ಪನವರ ನಿಧನದ ನಂತರ ಅವರ ಮಗ ಯಜಮಾನ್ ವಿರೂಪಾಕ್ಷಪ್ಪನವರು 1942ರ ತನಕ ಪತ್ರಿಕೆಯನ್ನು ನಡೆಸಿದರು. ಹೀಗೆ ತಂದೆ ಮತ್ತು ಮಗನಿಂದ ಮೈಸೂರು ಸ್ಟಾರ್ ಸುಮಾರು 56 ವರ್ಷ ಸೇವೆಯನ್ನು ಸಲ್ಲಿಸಿದೆ. 1880 ರಿಂದ 1882 ಬೇರೆಯವರಿಂದ 2 ವರ್ಷ ಒಟ್ಟು ಈ ಪತ್ರಿಕೆ 58 ವರ್ಷ ನುಡಿಸೇವೆಯನ್ನು ಮಾಡಿದೆ.

### ಯಜಮಾನ್ ವೀರಸಂಗಪ್ಪನವರ ಪರಿಚಯ

ಮೈಸೂರಿನ ಯಜಮಾನ್ ಮಲ್ಲಣ್ಣ, ಪಾರ್ವತಮ್ಮನವರ ದ್ವಿತೀಯ ಪುತ್ರರಾಗಿ ದಿನಾಂಕ 12-11-1843 ರಲ್ಲಿ ಜನಿಸಿದರು. ಇವರ ಹಿರಿಯರು ಶ್ರೀರಂಗಪಟ್ಟಣದಿಂದ ಮೈಸೂರಿಗೆ ಬಂದು ನೆಲೆಸಿದರೆಂದು ಹೇಳುತ್ತಾರೆ. ಇವರು ವಿದ್ಯಾಭ್ಯಾಸದ ನಂತರ ತಂದೆಯವರ ಜವಳಿ ವ್ಯಾಪಾರ, ಚೌಬೀನೆ ಅಂದರೆ ತೇಗದ ಮರದ ವ್ಯಾಪಾರದ ಜೊತೆಗೆ ಮೈಸೂರು-ಬೆಂಗಳೂರು ಮಧ್ಯೆ ಟಪ್ಪಾಲು ಕೊಂಡೊಯ್ಯುವ ಕಾರ್ಯವನ್ನು ಸರ್ಕಾರದಿಂದ ಗುತ್ತಿಗೆ ಪಡೆದಿದ್ದರು. ಮುಂದೆ ಮೈಸೂರಿನಿಂದ ಮಡಿಕೇರಿಗೂ ಟಪ್ಪಾಲು ಕೊಂಡೊಯ್ಯುವ ಜವಾಬ್ದಾರಿಯನ್ನು ವಹಿಸಿಕೊಂಡರು. ಮೈಸೂರು ನಗರಸಭೆ

ಸದಸ್ಯರಾಗಿದ್ದ ಇವರು ತಂದೆಯ ನಿಧನದ ನಂತರ 'ಯಜಮಾನ್' ಪಟ್ಟವನ್ನು ಪಡೆದರಲ್ಲದೆ ವ್ಯಾಪಕವಾಗಿ ಸಮಾಜ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

**ಸಂಸ್ಕೃತ ಪಾಠಶಾಲೆ**

ಸಂಸ್ಕೃತ ಭಾಷೆಯಲ್ಲಿದ್ದ ಜ್ಞಾನದ ಉಪಯುಕ್ತತೆಯನ್ನು ಮನಗಂಡು ಪಾಠಶಾಲೆ ಬಗ್ಗೆ ತಮ್ಮ ಬೀಗರಾದ ಗ್ರಂಥಿಗೆ ಮಲ್ಲಪ್ಪನವರ ಮುಂದೆ ಪ್ರಸ್ತಾಪ ಮಾಡಲು ಅವರು ರೂ. 2000 ಸಹಾಯದ ವಾಗ್ದಾನ ಮಾಡಿದರು. ವೀರಸಂಗಪ್ಪನವರು ಶಾಲೆಯನ್ನು ತಮ್ಮ ಸ್ವಂತ ಕಟ್ಟಡದಲ್ಲಿ ಪ್ರಾರಂಭ ಮಾಡಿದರು. ಆಗಿನ ಕಾಲದ ಪ್ರಸಿದ್ಧ ವಿದ್ವಾಂಸರಾಗಿದ್ದ ವ್ಯಾಕರಣದ ಬಿ. ಮಲ್ಲಪ್ಪನವರು, ಆಸ್ಥಾನ ವಿದ್ವಾಂಸ ಅಭಿನವ ಕಾಳಿದಾಸ ಶ್ರೀ ಬಸವಪ್ಪ ಶಾಸ್ತ್ರಿಗಳು, ಕರ್ನಾಟಕ ಭಾಷಾರತ್ನ ಶ್ರೀ ಪಿ.ಆರ್. ಕರಿಬಸವ ಶಾಸ್ತ್ರಿಗಳು, ಪಂಡಿತ ಸಿದ್ಧಲಿಂಗ ಶಾಸ್ತ್ರಿಗಳು – ಈ ನಾಲ್ಕು ಜನರ ಒಂದು ಸಮಿತಿಯನ್ನು ಮಾಡಿದರು. ಈ ಶಾಲೆಗೆ 'ವೀರಸಂಗಪ್ಪನವರ ಶಾಲೆ' ಎಂದು ಹೆಸರಾಯಿತು. ಈ ಪಾಠಶಾಲೆಗೆ ಹಣದ ಅಡಚಣೆ ಉಂಟಾಗಬಾರದು ಎಂದು ಗ್ರಂಥಿಗೆ ಅಂಗಡಿ ಮಲ್ಲಪ್ಪನವರು ದೊಡ್ಡಪೇಟೆಯಲ್ಲಿ ಒಂದು ಅಂಗಡಿಯನ್ನು ಕಟ್ಟಿಸಿ ಅದರಿಂದ ಬರುವ ಬಾಡಿಗೆಯನ್ನು ಶಾಲೆಗೆ ಹೋಗುವಂತೆ ವ್ಯವಸ್ಥೆ ಮಾಡಿದರು. ಈ ಪಾಠಶಾಲೆಯ ವಿದ್ಯಾರ್ಥಿಗಳು ವೇದ, ಶಾಸ್ತ್ರ, ಪುರಾಣ, ವೈದಿಕ ಕಾರ್ಯಗಳಲ್ಲಿ ಪರಿಣತರಾದರು. ಈ ಪಾಠಶಾಲೆಯನ್ನು ನೋಡಿ ಬಳ್ಳಾರಿಯಲ್ಲಿ ಸಕ್ಕರೆ ಕರೆಡಪ್ಪನವರು, ಸೋಲಾಪುರದಲ್ಲಿ ವಾರದ ಮಲ್ಲಪ್ಪನವರು ಸಂಸ್ಕೃತ ಪಾಠಶಾಲೆಗಳನ್ನು ಪ್ರಾರಂಭ ಮಾಡಿದರು.

ಮೈಸೂರಿನ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಪ್ರಸಾದನಿಲಯವನ್ನು ಪ್ರಾರಂಭ ಮಾಡಲು ಮುಡುಕುತೊರೆ ತೋಪಿನ ಮಠದ ಮುಪ್ಪಿನಸ್ವಾಮಿಗಳು ರೂ.1000, ಮುಡಿಗುಂಡದ ವೀರಶೈವರಿಂದ ರೂ. 500, ಒಟ್ಟು 2000 ಹಣವನ್ನು ಇಡುಗಂಟಾಗಿ ಇಟ್ಟು ಇದರ ಬಡ್ಡಿ ಹಣದಿಂದ ವಿದ್ಯಾರ್ಥಿನಿಲಯವನ್ನು ನಡೆಸುತ್ತಾ ಇದ್ದರು. ಹತ್ತು ವಿದ್ಯಾರ್ಥಿಗಳಿಗೆ ಉಚಿತವಾದ ಊಟದ ವ್ಯವಸ್ಥೆಯಾಯಿತು. ಯಜಮಾನ್ ವೀರಸಂಗಪ್ಪನವರು ಕೊಟ್ಟೂರು ಪ್ರಾಂತ್ಯದಲ್ಲಿ ಹಣ ಸಂಗ್ರಹ ಮಾಡಿ ಅಂಗಡಿಮಳಿಗೆ ಹಾಗೂ ಗದ್ದೆಯನ್ನು ಕೊಂಡು ವಿದ್ಯಾರ್ಥಿನಿಲಯಕ್ಕೆ ಸ್ಥಿರ ಆಸ್ತಿಯನ್ನು ಮಾಡಿ ಶಾಶ್ವತ ವ್ಯವಸ್ಥೆಯನ್ನು ಮಾಡಿದರು. ಸಾರ್ವಜನಿಕರಿಂದ ಮತ್ತೆ ಹಣವನ್ನು ಸಂಗ್ರಹಿಸಿ 'ಫಂಡ್' ಮಾಡಿ ಅದರಲ್ಲಿ ಬರುವ ಹಣವನ್ನು ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಶುರು ಮಾಡಿದರು.

**ವೀರಶೈವ ಗ್ರಂಥ ಪ್ರಕಾಶನ**

ಯಜಮಾನ್ ವೀರಸಂಗಪ್ಪನವರು ಪತ್ರಿಕೆ, ವಿದ್ಯಾದಾನ, ಸಮಾಜಸೇವೆ ಜೊತೆಗೆ



ಹಲವು ಮಠಮಾನ್ಯ ಮನೆಗಳಲ್ಲಿ ಇದ್ದ ಓಲೆಕಟ್ಟುಗಳು, ಕೋರಿ ಕಾಗದದ ಕಟ್ಟುಗಳನ್ನು ಸಂಗ್ರಹಿಸಿ ಅದರ ಮುದ್ರಣದ ವ್ಯವಸ್ಥೆಯನ್ನು ಮಾಡಿದರು.

'1881ರ ಸೆನ್ಸಸ್ ರಿಪೋರ್ಟಿನಲ್ಲಿ ವೀರಶೈವರನ್ನು ಶೂದ್ರರ ಮಾಲಿಕೆಯಲ್ಲಿ ಸೇರಿಸಿದ್ದಾರೆ. ನಮ್ಮಲ್ಲಿ ಕೌಸ್ತುಭಾಚಾರ ಮುಂತಾದ ಇಪ್ಪತ್ತಕ್ಕೂ ಹೆಚ್ಚು ಗ್ರಂಥಗಳಿವೆ. ಇವುಗಳನ್ನೆಲ್ಲಾ ಬೇರೆ ಮುದ್ರಣಾಲಯದಲ್ಲಿ ಅಚ್ಚು ಮಾಡಿಸಿ ಪ್ರಕಟಿಸಬೇಕೆಂದರೆ ಹೆಚ್ಚು ಹೆಚ್ಚು ಹಣ ಬೇಕಾಗುತ್ತದೆ. ಆದುದರಿಂದ ನಾವೇ ಒಂದು ಮುದ್ರಣಯಂತ್ರವನ್ನು ಕೊಂಡುಕೊಂಡರೆ ಸುಮಾರು ಹತ್ತು ಸಾವಿರದಲ್ಲಿ ಈ ಕೆಲಸವನ್ನು ಮುಗಿಸಬಹುದು. ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಮತ ಗ್ರಂಥ ಮುದ್ರಣಾರ್ಥವಾಗಿ ಚಂದಾಹಣವನ್ನು ಕೊಟ್ಟರೆ ಅವರವರು ಕೊಟ್ಟ ಮೊಬಲಗಿಗೆ ಮುದ್ರಿಸಲಾದ ಪುಸ್ತಕಗಳನ್ನು ಕೊಡಲಾಗುವುದು ಎಂಬ ಅರ್ಥದ ನೋಟಿಸನ್ನು ಅಚ್ಚುಹಾಕಿಸಿ ಪರಸ್ಥಳದವರಿಗೆ ಹಂಚಿದರು.

**ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಕರಸ್ಪಾಂಡೆನ್ಸ್**

ಮೊದಲನೆ ಮೈಸೂರು ಸ್ಟಾರ್ ಕರಸ್ಪಾಂಡೆನ್ಸ್ 1882ನೇ ಇಸವಿ ಮೇ ತಿಂಗಳಿಂದ 1884ನೇ ಇಸವಿ 30ನೇ ಮೇ ವರೆಗೆ ನಡೆದ ಆರೋಪ ಪ್ರತ್ಯಾರೋಪದ ಸಂಗ್ರಹ. ಈ ಗ್ರಂಥವನ್ನು ಯಜಮಾನ್ ವೀರಸಂಗಪ್ಪನವರು ತಮ್ಮ ಸ್ವಕೀಯ ಮುದ್ರಾಶಾಲೆಯೊಳ್ 15ನೇ ಜೂನ್ 1894ನೇ ಇಸವಿಯಲ್ಲಿ ವಾಣಿವಿಲಾಸ ಪ್ರೆಸ್ ಮೈಸೂರು ಇಲ್ಲಿ ಮುದ್ರಿಸಲಾಯಿತು. ಇದರಲ್ಲಿ ಪಾಲಳ್ಳಿ ರಂಗಣ್ಣನವರು, ನಾಗಮಂಗಲದ ನರಸಿಂಹ ಶಾಸ್ತ್ರಿಗಳು, ಕಳಲೆ ವೆಂಕಟರಮಣಯ್ಯ, ಹಾವನೂರು ಭುಜಂಗಚಾರ್ಯ ಮಾಡಿದ ಕರಸ್ಪಾಂಡೆನ್ಸ್, ಅದಕ್ಕೆ ಯಜಮಾನ ವೀರಸಂಗಪ್ಪನವರು ನೀಡಿದ ಉತ್ತರ. ಈ ಉತ್ತರವನ್ನು ಬರೆದವರು ಆಸ್ಥಾನ ವಿದ್ವಾನ್ ಮಹಾರಾಜ ಕಾಲೇಜಿನ ಮುನಿಷಿಗಳಾದ ಶ್ರೀ ಪಿ.ಆರ್. ಕರಿಬಸವ ಶಾಸ್ತ್ರಿಗಳು ಎಂದು ತಿಳಿದು ಬರುತ್ತದೆ. ಇದೇ ರೀತಿಯಲ್ಲಿ ಐದು ಮೈಸೂರು ಸ್ಟಾರ್ ಕರಸ್ಪಾಂಡೆನ್ಸ್‌ಗಳನ್ನು ಇವರು ಸಂಗ್ರಹಿಸಿದ್ದು ಅವುಗಳಲ್ಲಿ ಮೂರರವರೆಗೆ ಪ್ರಕಟವಾಗಿವೆ. ಉಳಿದೆರಡು ಹಸ್ತಪ್ರತಿರೂಪದಲ್ಲಿವೆ. ಮೊದಲನೇ ಕರಸ್ಪಾಂಡೆನ್ಸ್ ಎರಡನೇ ಮುದ್ರಣವನ್ನು ಕಂಡಿದೆ.

ಈ ಎಲ್ಲಾ ವ್ಯವಹಾರದಲ್ಲಿ ವೀರಸಂಗಪ್ಪನವರು ತಮ್ಮನ್ನು ತೊಡಗಿಸಿಕೊಂಡು ಕಡೆಗೆ ಮನೆಮಠಗಳನ್ನು ಕಳೆದುಕೊಳ್ಳುವ ಪ್ರಸಂಗ ಬಂದಿತು. ವೀರಶೈವ ಸಮಾಜದ ಜನಾಂಗ ಇವರಿಗೆ ನೆರವಾದರು. 1899ನೇ ಇಸವಿ 25ನೇ ಏಪ್ರಿಲ್‌ನಲ್ಲಿ ತಮ್ಮ 56ನೇ ವಯಸ್ಸಿನಲ್ಲಿ ಶಿವಾಧೀನರಾದರು.

ತಂದೆಯಂತೆ ಮಗನು ಸಹ ಗ್ರಂಥ ಪ್ರಚಾರ ಮತ್ತು ಮೈಸೂರು ಸ್ಟಾರ್ ಇವರ ದುಡಿಮೆಯಿಂದ ಸ್ಟಾರ್ ಪತ್ರಿಕೆ ತನ್ನ ಹೆಸರನ್ನು ಜನರ ಮನದಲ್ಲಿ ಅಚ್ಚೊತ್ತಿತ್ತು. ಆ

ಕಾಲದಲ್ಲಿ ಸ್ಟಾರ್ ಅಂದರೆ ಪತ್ರಿಕೆ ಅನ್ನುವ ಅರ್ಥವನ್ನು ಸಾಮಾನ್ಯ ಜನ ಮಾಡಿಕೊಂಡುಬಿಟ್ಟಿದ್ದರು. ಹರ್ಡೇಕರ್ ಮಂಜಪ್ಪನವರು ದಾವಣಗೆರೆಯಲ್ಲಿ 'ಧನುರ್ಧಾರಿ' ಪ್ರಕಟ ಮಾಡುವ ಮುಂಚೆ ಜನ ನಿಮ್ಮ 'ಸ್ಟಾರ್' ಪ್ರಾರಂಭ ಯಾವಾಗ ಎಂದು ಕೇಳುತ್ತಾ ಇದ್ದರು ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ. ಮೈಸೂರು ಸ್ಟಾರ್‌ನಲ್ಲಿ ಬಂದಿರುವ ಲೇಖನಗಳನ್ನು ಸಂಪುಟಗಳಲ್ಲಿ ಪ್ರಕಟಿಸಿದರೆ ಅರ್ಧ ಶತಮಾನದ ಇತಿಹಾಸವನ್ನೇ ಬರೆಯುವಷ್ಟು ಮಾಹಿತಿ ದೊರೆಯುತ್ತದೆ. ಗ್ರಂಥ ಸಂಗ್ರಹದ ಮಾದರಿ ಈಗಿನ ಕಾಲಕ್ಕೂ ಮಾದರಿಯಾಗಿದೆ. ಅಷ್ಟು ಸೊಗಸಾದ ಬರಹ. ಆ ಕಾಲದ ಅನೇಕ ತೊಂದರೆಗಳು ಮಠಮಹಂತಗಳ ಪಟ್ಟಾಧಿಕಾರ, ಮರಣದ ಬಗ್ಗೆ ಕರಾರುವಾಕ್ಕಾದ ದಾಖಲೆ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಇದೆ.

ಯಜಮಾನ ವೀರಸಂಗಪ್ಪನವರು ಮೈಸೂರು ಸ್ಟಾರ್ ಪತ್ರಿಕೆ, ಮತಗ್ರಂಥಗಳ ಪ್ರಕಟಣೆ ಮತ್ತು ಸಂಸ್ಕೃತ ಶಿಕ್ಷಣಗಳಿಗೆ ಸಂಬಂಧಿಸಿದ ಹೋರಾಟದಲ್ಲಿ ಹಣ್ಣಾದದ್ದನ್ನು ಗಮನಿಸಿದ ಸಮಾಜ ಅವರ ಸ್ಟಾರ್ ಪತ್ರಿಕೆಗೆ ಸಹಾಯ ಮಾಡುವ ದೃಷ್ಟಿಯಿಂದ ವಿವಾಹಾದಿ ಶುಭ ಸಮಾರಂಭಗಳಲ್ಲಿ 'ವೀರಸಂಗಪ್ಪನವರ ಅಗ್ರ ತಾಂಬುಲ' ತೆಗೆದು ಕಾಣಿಕೆ ಇಟ್ಟು ಕೊಡುವ ಪದ್ಧತಿ ಇತ್ತು. 'ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕ್ ಸಂಪಿಗೆ ಗ್ರಾಮ (ಈಗ ತುರುವೇಕೆರೆ ತಾಲ್ಲೂಕ್)ದಲ್ಲಿ ನಡೆದ 'ಶ್ರೀಮದ್ವೀರಶೈವ ಬ್ರಾಹ್ಮಣ ಸಮಾಜದ ಸಭೆಯ ವರದಿಯಲ್ಲಿ (23-7-1911) ಅವರ ಸೇವೆಯನ್ನು ಗಮನಿಸಿ ಅವರು ಹುಟ್ಟುಹಾಕಿದ್ದ ಪತ್ರಿಕೆಗೆ ಸಹಾಯ ಮಾಡುವ ದೃಷ್ಟಿಯಿಂದ ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ತೆಗೆಯುತ್ತಿರುವ ತಾಂಬೂಲದೊಂದಿಗೆ 1ರೂ. ಕಾಣಿಕೆಯನ್ನು ಕಳುಹಿಸಲೆಂದು ಸಭೆಯನ್ನು ವಿನಂತಿಸಿಕೊಂಡಿದೆ. ವೀರಸಂಗಪ್ಪನವರನ್ನು ಕುರಿತು ಜೀರಿಗೆ ಬಸವಲಿಂಗಪ್ಪನವರು 53 ಕಂದ ಪದ್ಯಗಳನ್ನು ಬರೆದು ಚರಮ ಗೀತೆಯನ್ನು ಸಮರ್ಪಿಸಿದ್ದಾರೆ.

ಸ್ಟಾರ್ ಪ್ರೆಸ್ ಮುದ್ರಣಕ್ಕೆ ಬಹಳ ಹೆಸರುವಾಸಿಯಾಗಿತ್ತು. 1905ರಲ್ಲಿ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಬೆಳ್ಳಿ ಪಲ್ಲಕ್ಕಿ ಆಹ್ವಾನ ಪತ್ರಿಕೆಯನ್ನು ಬಹಳ ಸುಂದರವಾಗಿ ಅಚ್ಚುಮಾಡಿಕೊಟ್ಟಿದ್ದಾರೆ. ಮೈಸೂರು 'ಕರ್ನಾಟಕ ಗ್ರಂಥ ಮಂಜರಿ' ಮೊದಲನೆ ಪುಸ್ತಕ ಸ್ಟಾರ್ ಪ್ರೆಸ್‌ನಲ್ಲಿ ಅಚ್ಚಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಮೊದಲ ಪುಸ್ತಕಗಳನ್ನು ಸ್ಟಾರ್ ಪ್ರೆಸ್‌ನವರು ಅಚ್ಚುಮಾಡಿಕೊಟ್ಟಿದ್ದಾರೆ. ಒಂದು ಪತ್ರಿಕೆ ತನ್ನ ಹಿತಮಿತದಲ್ಲಿ ಏನನ್ನು ಮಾಡಲು ಸಾಧ್ಯವೋ ಅದನ್ನೆಲ್ಲಾ ಮಾಡಿದೆ. ಜನಾಂಗದ ಈ ಪತ್ರಿಕೆ ಕೆಲವು ಸಾರಿ ಕಷ್ಟಕ್ಕೆ ಗುರಿಯಾಗಿ ಎಲ್ಲಾ ತರಹದ ತೊಂದರೆಯನ್ನು ಅನುಭವಿಸಿದರೂ ಒಂದು ಸಂಸ್ಕೃತಿಯನ್ನು ಉಳಿಸಲು ಸಾಕಷ್ಟು ಹೋರಾಟ ಮಾಡಿದ್ದು ಮಾತ್ರ ಕಟು ಸತ್ಯ.

□

# ಲಿಂಗ ರಾಜಕಾರಣ ಮತ್ತು ಧರ್ಮ*

**ಡಾ. ಶ್ರೀ ವಿಜಯಕುಮಾರ ಮಹಾನುಭಾವಿಗಳು**

ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ
ಹೆಣ್ಣು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನ
ಸಿದ್ಧರಾಮೇಶ್ವರ ವಚನ (468)

ಸಿದ್ಧರಾಮೇಶ್ವರ ವಚನ ಹೆಣ್ಣನ್ನು ಪರಮಾತ್ಮನ ಪ್ರತ್ಯಕ್ಷರೂಪ ಎನ್ನುತ್ತದೆ. ಸಿದ್ಧರಾಮೇಶ್ವರರ ಸಮಾಧಿಯು ಸೊಲ್ಲಾಪುರದಲ್ಲಿದೆ. ಸಮಾಧಿ ಸ್ಥಳಕ್ಕೆ ಮಹಿಳೆಯರ ಪ್ರವೇಶಕ್ಕೆ ನಿಷೇಧವಿದೆ. ಸಿದ್ಧರಾಮೇಶ್ವರರು ಮಹಿಳೆಯನ್ನು ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನ ಎಂದರು. ಈ ಬಗ್ಗೆ ಸಿದ್ಧರಾಮೇಶ್ವರರ ವಿಚಾರ, ವಚನ ಹೀಗಿದೆ. ವಿವರಿಸಲು ಹೋದರೆ ಮಾತು ನಿಲ್ಲಿಸಿ ಎಂದು ಹೇಳಲಾಗುತ್ತದೆ. ಪ್ರಗತಿಪರ ಧರ್ಮ ಎಂದು ಹೇಳಿಕೊಳ್ಳುವ ಲಿಂಗಾಯತ ಧರ್ಮವು ವೈದಿಕ, ಕ್ರೈಸ್ತ ಧರ್ಮಕ್ಕಿಂತ ಭಿನ್ನವಾಗೇನೂ ಇಲ್ಲ. ಶೂನ್ಯಸಂಪಾದನಕಾರರು ಅನುಭವಮಂಟಪದ ಕಲ್ಪನೆ ಕಟ್ಟಿಕೊಡುತ್ತಾರೆ. ಇದು ಶೂನ್ಯಸಂಪಾದನಕಾರರ ಪರಿಕಲ್ಪನೆ. ಅನುಭವಮಂಟಪ ಪ್ರವೇಶಿಸಿದ ಮೇಲೆ ಅಲ್ಲಿ ಅನುಭಾವದಲ್ಲಿ ಮಾನ್ಯತೆ ಪಡೆಯಬೇಕಾದರೆ ಪುರುಷನ ಹೆಸರು ಹೇಳಬೇಕು. ಮಹಿಳೆಯನ್ನು ಪುರುಷನ ಮೂಲಕ ಗುರುತಿಸುವ ಪರಿಪಾಠ ಎಂದರೆ ಅಕ್ಕಮಹಾದೇವಿಯವರನ್ನು ಶಿವಗಣ ಪ್ರಸಾದಿ ಮಹಾದೇವಯ್ಯ 400 ವರ್ಷಗಳು ಗತಿಸಿದ ಮೇಲೂ ಗುರು, ಶರಣೆ, ಮಹಾತ್ಮರು ಎಂದು ಒಪ್ಪಿಕೊಳ್ಳಲು ಸಿದ್ಧನಿಲ್ಲ. ಪುರುಷರೂಪಿತ ಚಿಂತನೆಗಳು ಮಹಿಳೆಯರನ್ನು ಆಳುತ್ತವೆ. ದೀನನಾನು ತನದ ಮನಸ್ಸುಗಳನ್ನು ಸೃಷ್ಟಿಸಲಾಗಿದೆ. ಅವರನ್ನು ಭಯ, ನಂಬಿಕೆಗಳು ಆಳುತ್ತಿವೆ. ವಚನಕಾರರು ಸರ್ವಸಮಾನತೆಯನ್ನು ತರಲು ಹೊರಟರೂ ಅದು ಆಗುವಂಥದಲ್ಲ. ಶತಶತಮಾನದಿಂದ ಭೇದಪ್ರಜ್ಞೆ ಮನಸ್ಸುಗಳಲ್ಲಿ ಜೀವಕೋಶಗಳಲ್ಲಿ ಭದ್ರವಾಗಿ ತಳವೂರಿದೆ. ವ್ಯವಸ್ಥೆಗಳು ಅಜ್ಞಾನಿಗಳ ವಶವಾಗಿವೆ.

---

* ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರು 19.8.2014ರಂದು ವಿಜಯಪುರ, ಮಹಿಳಾ ವಿಶ್ವವಿದ್ಯಾಲಯದಲ್ಲಿ ನಡೆದ ಲಿಂಗ ರಾಜಕಾರಣ ಮತ್ತು ಮಹಿಳೆ ವಿಚಾರ ಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿ ಮಂಡನೆ ಮಾಡಿದ ಪ್ರಬಂಧ.

ಉನ್ನತ ತತ್ವಗಳು ಸರ್ವಸಮಾನತೆ ಎಂಬುದು ಧೂಳು ಹಿಡಿಯುತ್ತಿದೆ ಎನ್ನುವುದಕ್ಕೆ ಲೆಕ್ಕವಿಲ್ಲದ ಉದಾಹರಣೆಗಳು ಸಿಗುತ್ತವೆ.

ತುರುಗೋಳೊಳ್ ಪೆಣ್ಬುಯ್ಯಲೊಳ್
ಕಾದಿ ಗೆಲಿದನ್ ವೀರನ್-ಶಾಸನ ಪದ್ಯ

ಶಾಸನ ಪದ್ಯವು ಗೋವುಗಳನ್ನು ರಕ್ಷಿಸಿದಂತೆ ಮಹಿಳೆಯರನ್ನು ರಕ್ಷಿಸಬೇಕು ಎನ್ನುತ್ತದೆ. ಪ್ರಾಣವನ್ನಾದರೂ ಕೊಟ್ಟು ಅವರ ಮಾನಸಂರಕ್ಷಣೆ ಮಾಡಬೇಕು. ಅವರ ಕಣ್ಣೀರ ಹನಿ ನೆಲಕ್ಕೆ ಬೀಳದ ಮುನ್ನ ಮಹಿಳೆಯರನ್ನು ರಕ್ಷಿಸಬೇಕು. ಕಾದಿ ಗೆಲಿದನ್ ವೀರನ್ ಎನ್ನುವ ಮೂಲಕ ವೀರ ಯಾರು? ಎಂದರೆ ಆಪತ್ತಿನಲ್ಲಿರುವ ಮಹಿಳೆಯನ್ನು, ಗೋವುಗಳನ್ನು ರಕ್ಷಿಸುವವನು ವೀರ ಎನ್ನುತ್ತದೆ. ಮಹಿಳೆಯನ್ನು ದೇವರ ರೂಪವಾಗಿ ನೋಡಿದ ಗೌರವದ ಮಾತು ಒಂದು ಕಡೆ. ಆಪತ್ತಿನಲ್ಲಿರುವ ಮಹಿಳೆಯನ್ನು ತನ್ನ ಪ್ರಾಣ ಕೊಟ್ಟಾದರೂ ಕಾಪಾಡಿದವನೆ ವೀರ ಎನ್ನುವ ವೀರತ್ವದ ಮಾತು ಇನ್ನೊಂದು ಕಡೆ. ಒಂದು ಕಡೆಗೆ ಮಹಿಳೆಗೆ ದೇವರ ಎತ್ತರದ ಗೌರವ. ಇನ್ನೊಂದು ಕಡೆ ಮಹಿಳೆಯನ್ನು ರಕ್ಷಿಸು ಎನ್ನುವ ವೀರತ್ವದ ಮಾತು. 1. ಗುರುವಿನ ಮಾತು, ಧರ್ಮದ ಮಾತು, 2. ವ್ಯವಸ್ಥೆಯ ಮಾತು. ರಾಜಕೀಯ ಮಾತು. ಎರಡೂ ವಾಕ್ಯಗಳು ಕೇಳಿದ ಕೂಡಲೆ ಬಹಳ ಆಕರ್ಷಕ, ಅಮೋಘ ಕಾಣುತ್ತವೆ. ಈ ಧೋರಣೆಗಳ ಹಿಂದಿರುವ ಧಾರೆಯು ಬಹಳ ಅಪಾಯಕಾರಿ.

ಗೋವುಗಳನ್ನು ಕದ್ದುಕೊಂಡು ಹೋಗುವಂತೆ ಮಹಿಳೆಯರನ್ನು ಕದ್ದುಕೊಂಡು ಹೋಗುತ್ತಾರೆ. ಗೋವುಗಳು ಕದ್ದವರ ವಶವಾದಂತೆ ಮಹಿಳೆಯರು ಕದ್ದವರ ವಶವಾಗುತ್ತಾರೆ. ಕದ್ದೊಯ್ಯುವಾಗ ಆಕಳುಗಳು, ಮಹಿಳೆಯರ ಆಕ್ರಂದನ ಮುಗಿಲು ಮುಟ್ಟುತ್ತದೆ. ಗೋವುಗಳು ಅಂಬಾ ಎನ್ನುವಂತೆ ಮಹಿಳೆಯರು ಪೊರೆಯಿರೇ ಎಂದು ಕೂಗುತ್ತಾರೆ. ಹೊತ್ತೊಯ್ದವರನ್ನು ಕೊಂದು ಅವರ ಕಣ್ಣೀರು ಒರೆಸುವವನು ವೀರ ಎಂದು ರಾಜಶಕ್ತಿ ಹೇಳುತ್ತದೆ. ಈ ಎರಡು ಚಿಂತನೆಗಳು ಒಂದಕ್ಕೊಂದು ಅವಲಂಬಿತ ವಾಗಿವೆ. ಮಹಿಳೆ ಗೋವುಗಳಂತೆ ಸಂಪತ್ತು. ಗೋವುಗಳನ್ನು ರಕ್ಷಿಸಿದಂತೆ ಮಹಿಳೆಯನ್ನು ರಕ್ಷಿಸಬೇಕು. ಗೋವುಗಳಂತೆ ಮಹಿಳೆ ಅಸುರಕ್ಷಿತಳು, ಆಕೆ ಸಂಪತ್ತು, ದ್ರವ್ಯ. ಈ ಧೋರಣೆಯಲ್ಲಿ ಹೆಣ್ಣು ದುರ್ಬಲಳು ಮತ್ತು ಹೆಣ್ಣು ಸಂರಕ್ಷಿಸಬೇಕಾದವಳು ಎನ್ನುವ ಚಿಂತನೆ ಇದೆ. ಮೇಲುನೋಟಕ್ಕೆ ಕಾದಿ ಗೆಲಿದನ್ ವೀರನ್ ಎಂಬುದು ಬಹಳ ವೀರತ್ವದ, ಆಕರ್ಷಣೆಯ ಮಾತಾಗಿ ಚೆಂದ ಕೇಳಿಸುತ್ತದೆ. ಆಳದಲ್ಲಿ ಮಹಿಳೆಯು ಪುರುಷನ ಸ್ವತ್ತಾಗಿ ವ್ಯವಸ್ಥೆಯ ದಾಳವಾಗಿರುವುದನ್ನು ತಿಳಿಸುತ್ತದೆ. ಇವೆರಡೂ ಬಹಳ ಅಪಾಯಕಾರಿ ಚಿಂತನೆಗಳು. ಆ ಕಾರಣವಾಗಿಯೇ ಮಹಿಳೆಯು ಪುರುಷನ ಅಧೀನದಲ್ಲಿ ಬಾಳಿದಳು. ಅನೇಕ ಗೋವುಗಳನ್ನು ಸಾಕಿದಂತೆ ಅನೇಕ ಪತ್ನಿಯರನ್ನು ಸಾಕಿಕೊಂಡು ರಾಜನಾದನು,



ಶೂರನಾದನು. ಇದಕ್ಕೆ ಭಿನ್ನವಾದ ಚಿಂತನೆಯನ್ನು 12ನೆಯ ಶತಮಾನದ ಕೆಲ ಮಹಿಳೆಯರು, ಶರಣೆಯರು ಅಭಿವ್ಯಕ್ತಿಸಿದ್ದಾರೆ. ಗಮನಿಸಿರಿ.

ಮಾಡಿ ನೀಡಿ ಹೋಹೆನೆಂದಾಗ ಕೈಲಾಸವೇನು ಕೈಕೂಲಿಯೇ?
ಮುಂದೊಂದ ಕಲ್ಪಿಸದೆ ಹಿಂದೊಂದ ಭಾವಿಸದೆ ಸಲೆ ಸಂದಿದ್ದರಾಗದೆ?
644, ಆಯ್ದಕ್ಕಿ ಲಕ್ಕಮ್ಮ

ಮಾಡುವ ಮಾಟ ಉಳ್ಳನ್ನಕ್ಕ ಬೇರೊಂದು ಪದವಿ ಅರಸಲೇತಕ್ಕೆ?
ದಾಸೋಹವೆಂಬ ಸೇವೆಯ ಬಿಟ್ಟು ಈಸಲಾರದೆ ಕೈಲಾಸವೆಂಬ ಆಸೆ ಬೇಡ
645, ಆಯ್ದಕ್ಕಿ ಲಕ್ಕಮ್ಮ

ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದಹೆನೆಂಬುದು ಕೈಕೂಲಿ.
ಮರ್ತ್ಯಕೈಲಾಸವೆಂಬುದು ತನ್ನರಿವು ಲಕ್ಷ್ಯವಾದಲ್ಲಿ ಅದೆ ಲಕ್ಷ್ಯ.
ಮೋಳಿಗೆ ಮಹಾದೇವಿಯಮ್ಮ, 943, ಶಿ.ಶ.ವ.

ತನ್ನ ವಿಚಾರಗಳನ್ನು ಚಿಂತನೆಗಳನ್ನು ಮಹಿಳೆಯೂ ವ್ಯಕ್ತಪಡಿಸುವ ಒಂದು ವೇದಿಕೆ ಶರಣರ ಅನುಭಾವಗೋಷ್ಠಿ. 33 ವಚನಕಾರ್ತಿಯರು ತಮ್ಮ ವಿಚಾರಗಳನ್ನು ವಚನಗಳಲ್ಲಿ ಅಭಿವ್ಯಕ್ತಿಸಿದರು. ಮಾತು ಭಾಷೆಯಾಗಿ ಪ್ರಮಾಣವಾಗಿ ವಾಣಿಯಾಗಿ ಚಿಂತನೆಯಾಗಿ ಶರಣರ ಗೋಷ್ಠಿಯಲ್ಲಿ ಪ್ರಕಟವಾದವು. ಇಲ್ಲಿ ಆಯ್ದಕ್ಕಿ ಲಕ್ಕಮ್ಮ ಮೋಳಿಗೆ ಮಾರಯ್ಯನ ಪತ್ನಿ ಮಹಾದೇವಿಯಮ್ಮ, ಸತ್ಯಕ್ಕ ಮುಂತಾದ ಶರಣೆಯರು ಪುರುಷನ ಚಿಂತನೆಯ ದಿಕ್ಕನ್ನೇ ಬದಲಿಸಿದ ಶಕ್ತ ಚಿಂತಕಿಯರಾಗಿ ಪ್ರಕಟವಾಗಿದ್ದಾರೆ. ಕೈಲಾಸ ಕಾಣುವ ಅಪೇಕ್ಷೆಯನ್ನು ಮೋಳಿಗೆ ಮಾರಯ್ಯ, ಆಯ್ದಕ್ಕಿ ಮಾರಯ್ಯ ಪ್ರಕಟಪಡಿಸಿದಾಗ ಅದೇನು ಕೈಕೂಲಿಯೇ? ಅದೇನು ಒಂದು ಪ್ರದೇಶವೇ? ಎಂದು ಪ್ರಶ್ನಿಸಿದರು. ದೇವರು ಪರಿಕಲ್ಪನೆಯ ದಿಕ್ಕನ್ನೇ ಬದಲಿಸಿ ಕಾಯಕದಲ್ಲಿಯೇ ಕೈಲಾಸ, ಇಹದಲ್ಲಿಯೇ ಪರಮಾತ್ಮ ಎನ್ನುವ ಹೊಸ ಚಿಂತನೆಯನ್ನು ಹರಳುಗೊಳಿಸಿದರು. ಇಹ-ಪರದ ಭೇದವನ್ನು ನಿರಾಕರಿಸಿದರು. ಈ ಭೂಮಿಯಲ್ಲಿಯೇ ಆ ಬದುಕಿನಲ್ಲಿಯೇ ಶಿವನನ್ನು ಕಾಣುವ ಚಿಂತನೆಯನ್ನು ತೇಲಿಬಿಟ್ಟರು. ಸಂಸ್ಕೃತಿ ಚಿಂತನೆಯ ದಿಕ್ಕನ್ನೇ ಬದಲಿಸಿದರು. ಹೊಸ ಪರಂಪರೆ, ಹೊಸ ಸಂಸ್ಕೃತಿಯನ್ನು ನಿರ್ಮಾಣ ಮಾಡಿದರು. ಧಾನ್ಯ ಹಸನು ಮಾಡಿ ಬಂದ ಫಲದಲ್ಲಿ ದಾಸೋಹ ಮಾಡುತ್ತ ಬದುಕುವವರು ಆಯ್ದಕ್ಕಿ ಲಕ್ಕಮ್ಮನವರು. ದಿನಕ್ಕೆ ಒಂದು ಕಟ್ಟಿಗೆ ಹೊರೆ ಮಾರಿ ಬಂದ ಸಂಪಾದನೆಯಲ್ಲಿ ದಾಸೋಹ ಮಾಡುತ್ತ ಬದುಕುವವರು ಮೋಳಿಗೆ ಮಹಾದೇವಿಯವರು. ಬಿಡುವಿನ ವೇಳೆಯಲ್ಲಿ ದೇವರ ಚಿಂತನೆಯ ದಿಕ್ಕನ್ನೇ ಬದಲಿಸಿ ಅತ್ಯಂತ ನೆಮ್ಮದಿಯಲ್ಲಿ ಬದುಕುವ ಈ ಶರಣಶರಣೆಯರು ಕನ್ನಡದ ಪರಂಪರೆಗೆ ಹೊಸ ಚಿಂತನೆಗಳನ್ನು 900 ವರ್ಷದ ಹಿಂದೆಯೇ ಕೊಟ್ಟಿದ್ದಾರೆ. ಇಂತಹ ಬದುಕನ್ನು, ಚಿಂತನೆಗಳನ್ನು ಇಂದಿನ ಬುದ್ಧಿಜೀವಿ

ಗಳಿಗೂ ಅರಗಿಸಿಕೊಳ್ಳಲು ಆಗಿಲ್ಲ. ದೇವಾಲಯ ಎಂದರೆ ಶರಣರ ಪ್ರಕಾರ ವರ್ಣ, ವರ್ಗ ವ್ಯವಸ್ಥೆಯನ್ನು ಪೋಷಿಸುವ ವ್ಯವಸ್ಥೆ. ಅಕ್ಷರ ಸಂಸ್ಕೃತಿಯನ್ನೆ ಕಂಡಿರದ ಈ ಶರಣೆಯರು ಇಷ್ಟೊಂದು ಎತ್ತರದ ಚಿಂತನೆಯನ್ನು ಅಭಿವ್ಯಕ್ತಿಸಿರುವುದೊಂದು ಸೋಜಿಗ. ನಮ್ಮೆದುರಿಗೆ ದೇವರನ್ನು ನಿರಾಕರಿಸುವ ಬೌದ್ಧ ಧರ್ಮ ಇದೆ. ಜೈನ ಧರ್ಮ ಇದೆ. ಮನುಷ್ಯನಿಗೆ ಮಾತ್ರ ಗೌರವ ಕೊಡುವ ಈ ಧರ್ಮಗಳು ಕೂಡ ಮಹಿಳೆಗೆ ಧರ್ಮಕ್ಕೆ ದೀಕ್ಷೆ ಕೊಡಲಿಲ್ಲ. ಮೋಕ್ಷಕ್ಕೆ ಮಹಿಳೆ ಅನರ್ಹಳು ಎಂದವು. ಮಹಿಳೆಯಾಗಿ ಇವಳಿಗೆ ಮೋಕ್ಷವೇ ಇಲ್ಲ. ಪುರುಷನಾಗಿ ಹುಟ್ಟಿಬಂದಮೇಲೆ ಮೋಕ್ಷ ಎಂದವು. ಬುದ್ಧನು ಮಹಿಳೆಗೆ ಧರ್ಮ ಪ್ರವೇಶಕ್ಕೆ ನಿರಾಕರಣೆ ಮಾಡಿದ. ಇಂತಹ ಭಾರತ ದೇಶದ ಪರಂಪರೆಯಲ್ಲಿ ದೇವರು ಪರಿಕಲ್ಪನೆಯನ್ನೆ ಬದಲಿಸಿ ಲಕ್ಕಮ್ಮ ಮತ್ತು ಮಹಾದೇವಿಯಮ್ಮ ಶರಣೆಯರು ಪುರುಷರ ಸ್ವಾರ್ಥಚಿಂತನೆಗಳನ್ನು ಪುಡಿಪುಡಿ ಮಾಡಿದ ಉಜ್ವಲ ಚಿಂತನಶೀಲರಾಗಿ ಕಾಣಬರುತ್ತಾರೆ.

ಲಿಂಗಸಮಾನತೆ ಅಷ್ಟು ಸುಲಭದಲ್ಲಿ ದೊರೆಯುವುದೂ ಇಲ್ಲ. ಪುರುಷ ಕೊಡುವುದೂ ಇಲ್ಲ. ಅದನ್ನು ಮಹಿಳೆಯರು ಸ್ವತಃ ಸಾಧಿಸಿಕೊಳ್ಳಬೇಕು. ಅಕ್ಕಮಹಾದೇವಿಯವರು ಅನುಭಾವ ಸಾಧನೆಗೆ ಅಡಿ ಇರಿಸಿದ ಕಾಲಕ್ಕೆ ರಾಜಶಕ್ತಿ ಅಡ್ಡಿಯಾಯಿತು. ತಂದೆ, ತಾಯಿ, ಗುರು, ಬಂಧುಗಳು ಪ್ರಾಣಕ್ಕೆ ಹೆದರಿದರು. ರಾಜ ಪ್ರತ್ಯಕ್ಷ ದೇವರು. ಬೇರೆ ದೇವರೆಲ್ಲಿ? ಇದು ಎಲ್ಲರೂ ಅಕ್ಕಮಹಾದೇವಿಯವರನ್ನು ಒಪ್ಪಿಸಲು ಹೇಳಿದ ಉಪದೇಶದ ಮಾತುಗಳು. ಅಕ್ಕಮಹಾದೇವಿಯವರು ಪ್ರಭುತ್ವವನ್ನು ಪ್ರಶ್ನಿಸಿದರು. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ಎಂದು ಮುಖಾಮುಖಿಯಾದರು. ರಾಜ ಮೊದಲುಗೊಂಡು ಯಾರು ಎಷ್ಟು ಇಕ್ಕಿಮೆಟ್ಟಲು ಪ್ರಯತ್ನಿಸಿದರೂ ಆ ಪ್ರತಿಭೆ, ಸಾಧನೆ ಹೊರಹೊಮ್ಮುವವರೆಗೂ ನಿಲ್ಲಲಿಲ್ಲ. ಗುರಿ ತಲುಪುವವರೆಗೂ ಪ್ರಯತ್ನ, ಸಾಧನೆಯನ್ನು ನಡೆಸಿದರು. ಭೌತಿಕ ಶರೀರವನ್ನು ಮುಂದಿಟ್ಟು ಸಿನ್ ಎಂದು ಮಹಿಳೆಗೆ ಪಾಪದ ಪಟ್ಟವನ್ನು ಎಲ್ಲ ಧರ್ಮಗಳು ಕಟ್ಟಿದವು. ಮಹಿಳೆ ಧರ್ಮಗುರು ಆಗುವುದು, ಅವರ ಕಾಲಿಗೆ ಪುರುಷ ನಮಸ್ಕರಿಸುವುದು ನಿಷಿದ್ಧ. ಪತಿತರ ಸೇವೆಯಲ್ಲಿಯೇ ಮಹಾತ್ಯಾಗಿಯಾಗಿ ಕಳೆದರು. ಮದರ್ ಥೆರೇಸಾ ಅವರನ್ನು ಸೇಂಟ್ ಎಂದು ಕರೆಯಲು, ಅವರ ಜೀವಿತಕಾಲದಲ್ಲಿ ಚರ್ಚ್ ಒಪ್ಪಿಗೆ ಕೊಡಲಿಲ್ಲ. ಮದರ್ ಥೆರೇಸಾ ಜೀವಂತ ಇರುವವರೆಗೆ ಸೇಂಟ್ ಎಂದು ಕರೆಯಲಿಲ್ಲ. ಇಂತಹ ಶಕ್ತಿಗಳು ಜಗತ್ತನ್ನು ಆಳುತ್ತಿವೆ. ಗತಿಸಿದ ಥೆರೇಸಾ ಎರಡು ಪವಾಡಗಳನ್ನು ನಡೆಸಬೇಕು; ಆಗ ಅವರು ಸೇಂಟ್ ಎಂದು ಕತೆ ಕಟ್ಟಿದವು. ಈ ಧೋರಣೆಗಳು ಪುರುಷನ ಅಹಂ ಅನ್ನು ಬಹಳ ಪೋಷಿಸಿವೆ, ಬೆಳೆಸಿವೆ. ಜ್ಞಾನ ಮತ್ತು ಸದ್ಗುಣಗಳಿಗೆ ಯಾವುದೇ ಲಿಂಗಭೇದವಿಲ್ಲ. ಜ್ಞಾನವು ಸದ್ಗುಣಸಹಿತವಾದುದು. ಜ್ಞಾನವೇ ಸದ್ಗುಣ. ಮಲ್ಲಿಗೆ



ಮತ್ತು ಪರಿಮಳ ಅವಿನಾಭಾವ ಸಂಬಂಧದಲ್ಲಿರುವಂತೆ ಮನುಷ್ಯನಲ್ಲಿರುವ ಜ್ಞಾನವು ಸದ್ಗುಣಗಳ ಆಧಿಕ್ಯವನ್ನು ಹೆಚ್ಚಿಸುತ್ತದೆ. ಎಲ್ಲಿ ಜ್ಞಾನ, ಅಲ್ಲಿ ಸದ್ಗುಣ. ಎಲ್ಲಿ ಅಜ್ಞಾನ ಅಲ್ಲಿ ಕೇಡು. ತನುಗುಣಮದಾಂಧರಾದ ದುರ್ಯೋಧನ, ದುಶ್ಯಾಸನ, ಕೀಚಕಾದಿಗಳು ಅವಿದ್ಯೆ, ಅಜ್ಞಾನ ರಾಗಾದಿ ಭಾವಗಳ ಕುಣಿತದಿಂದ ಘೋರ ದುರ್ವಿಧಿಗೊಳಗಾದರು. ದೇಹಗುಣಗಳಿಗೆ ವಶವಾದ ಮನುಷ್ಯನು ಅವಿದ್ಯೆಯಿಂದ ಆಳಿಸಿಕೊಳ್ಳುತ್ತಾನೆ. ತಮೋಗುಣಮತ್ತರಾದ ಮದಾಂಧರು ದುರ್ವರ್ತನೆಗಳನ್ನು ಪ್ರಕಟಿಸುತ್ತಾರೆ. ನಮ್ಮ ಬದುಕಿಗೆ ಜ್ಞಾನದ ಬೆಳಕು ಬೇಕಾಗಿದೆ. ಅರಿವಿನ ದ್ವಾರ ತೆರೆಯುವ ಕಾರ್ಯ ಎಲ್ಲರಿಂದಲೂ ನಡೆಯಬೇಕಿದೆ.

ಲಿಂಗ, ರಾಜಕಾರಣ, ಧರ್ಮ ಇಲ್ಲಿ ಮೂರು ಶಬ್ದಗಳಿವೆ. ಇಲ್ಲಿ ಲಿಂಗ ಎಂದರೆ ಪುರುಷ ಮತ್ತು ಮಹಿಳೆ; ರಾಜಕಾರಣ ಎಂದರೆ ರಾಜಕೀಯ, ಭೇದ ಬುದ್ಧಿ. ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ವ್ಯವಹಾರ ಎಂದು ನಿಘಂಟುಕಾರರು ವಿವರಿಸುತ್ತಾರೆ. ಇಲ್ಲಿ ಲಿಂಗ ರಾಜಕಾರಣ ಎಂದರೆ ಏನು? ಸರಳದಲ್ಲಿ ಹೇಳುವುದಾದರೆ ಪುರುಷಶ್ರೇಷ್ಠ ಮಹಿಳೆ ಕನಿಷ್ಠ ಎಂಬ ಭೇದಪ್ರಜ್ಞೆ, ತರತಮ ಭೇದಗಳನ್ನು ಮಾಡುವುದು ಲಿಂಗ ರಾಜಕಾರಣ. ಇದು ಪುರುಷ, ಮಹಿಳೆಯರ ಕುರಿತಂತೆ ನಡೆದುಕೊಂಡು ಬಂದಿರುವ ನೀತಿ ನಿಯಮಾವಳಿಗಳು. ರಾಜಶಕ್ತಿ ಮತ್ತು ಪುರೋಹಿತಶಾಹಿ ಶಕ್ತಿ ಒಂದಾಗಿ ಧರ್ಮದ ಹೆಸರಿನಲ್ಲಿ ಮಹಿಳೆಯನ್ನು, ವ್ಯವಸ್ಥೆಯನ್ನು ನಿಯಂತ್ರಿಸುವ ಕೆಲಸ ಮಾಡಿವೆ. ಪುರುಷ ಮತ್ತು ಮಹಿಳೆಯರ ನಡುವೆ ಭೇದಪ್ರಜ್ಞೆಯನ್ನು ಮಾಡಿಕೊಂಡು ಬಂದಿವೆ. ಧರ್ಮವು ಪುರುಷನ ಸ್ವತ್ತೆಂಬಂತೆ ರೂಪಿಸಿಕೊಂಡಿರುವ ರಾಜಕೀಯ, ಧಾರ್ಮಿಕ ನಾಯಕರು ಮಹಿಳೆಯನ್ನು ಧರ್ಮದಿಂದ ದೂರ ಇರಿಸಿ ಆಳುತ್ತ ಬಂದಿದ್ದಾರೆ. ಭಾರತದ ಸಂವಿಧಾನ ತನ್ನ ಪ್ರಜೆಗಳಿಗೆ ಕೆಲವು ಹಕ್ಕುಗಳನ್ನು ಕೊಟ್ಟು ನಿಬಂಧನೆಗಳನ್ನು ಹಾಕುವಂತೆ ಧರ್ಮವು ತನ್ನ ಅನುಯಾಯಿಗಳಿಗೆ ಕೆಲವು ಹಕ್ಕುಗಳನ್ನು ಕೊಡುವ, ನಿಬಂಧನೆಗಳನ್ನು ಹಾಕುವ ಸಂವಿಧಾನ. ಎಲ್ಲ ಧರ್ಮಗಳೂ ಕೂಡ ತನ್ನ ಅನುಯಾಯಿಗಳು ಶ್ರೇಷ್ಠ ಉಳಿದವರು ಕನಿಷ್ಠ ಎನ್ನುತ್ತವೆ. ಪರಧರ್ಮೀಯರು ನಮಗೆ ಸಮನಲ್ಲ ಎನ್ನುವ ಸಂವಿಧಾನವನ್ನೆ ರೂಪಿಸಿವೆ. ಹೀಗೆ ಧರ್ಮ ಸಂವಿಧಾನ ರೂಪಿಸುವಾಗ ಮಹಿಳೆ ತನ್ನ ಧರ್ಮದ ಅನುಯಾಯಿಯಾಗಿದ್ದರೂ ಪುರುಷನಿಗೆ ಸಮನಾದ ಹಕ್ಕು, ಗೌರವಗಳನ್ನು ಮಹಿಳೆಗೆ ಕೊಡುವುದಿಲ್ಲ. ಕೊಟ್ಟಿಲ್ಲ. ಸಂತಾನ ಹಡೆಯುವ ಒಂದು ನಿಸರ್ಗಸಹಜವಾದ ಸೃಷ್ಟಿಕ್ರಿಯೆಯನ್ನೆ ನಿಮಿತ್ತಮಾಡಿಕೊಂಡು ಆಕೆಯನ್ನು ದೂರ ಇರಿಸಿವೆ. ದೈಹಿಕವಾಗಿ ಮಹಿಳೆಯನ್ನು ಎಷ್ಟು ಬಳಸಿಕೊಳ್ಳಬಹುದೊ ಅಷ್ಟು ಬಳಸಿಕೊಂಡು ಎಲ್ಲ ಧರ್ಮಗಳು ಮಹಿಳೆಗೆ ಅನ್ಯಾಯ ಮಾಡುತ್ತಲೆ ಬಂದಿವೆ.

ಧರ್ಮ ಎಂದರೇನು? ಧರ್ಮಗ್ರಂಥಗಳನ್ನು ಬರೆದವರು ಯಾರು? ಅವರುಗಳು ಪುರುಷರು; ಕೆಲವರು ಅನಾಮಧೇಯರು. ಇದನ್ನು ಮಾಡು ಇದನ್ನು ಬೇಡ ಹೀಗೆ ನಡೆ ನುಡಿ ಪಾಲನೆಯ ಬಗೆಗೆ ಹೇಳುವುದು ಧರ್ಮ. ಈ ಧರ್ಮದ ವಿಚಾರಗಳನ್ನು ಧಾರ್ಮಿಕ ನಾಯಕರು ತಮ್ಮ ಬೋಧನೆಗಳಲ್ಲಿ ಹೇಳಿದರೆ ಕ್ರಿಯೆಯ ಮೂಲಕ ನಡೆಯಲ್ಲಿ ತೋರಿಸುತ್ತಾರೆ. ವಿಚಾರ, ಆಚಾರ, ಭಾವನೆಗಳ ಪಾತಳಿಯಲ್ಲಿ ಧರ್ಮ ಕ್ರಿಯೆಯನ್ನು ಪಡೆದುಕೊಂಡಿದೆ. ಇವರು ತಮ್ಮ ವಿಚಾರಸರಣಿಗಳನ್ನು ಧರ್ಮದ ಹೆಸರಿನಲ್ಲಿ ಪಾಲನೆ ಮಾಡಲು ಆಜ್ಞೆ ಮಾಡುತ್ತಾರೆ. ಅದು ಮಿಲಿಟರಿ ಕಮಾಂಡೋ ಆಜ್ಞೆಯಂತೆ ಕಡ್ಡಾಯವಾಗಿರುತ್ತದೆ. ಉಲ್ಲಂಘನೆಗೆ ಘೋರ ದಂಡನೆಯಿರುತ್ತದೆ. ಇಂತಹ ಕಠಿಣ ನಿಯಮಗಳನ್ನು ಕೆಲವು ಸಲ ಪುರುಷ ವಿನಾಯಿತಿ ಪಡೆದುಕೊಳ್ಳುವುದು ಇದೆ. ಮಹಿಳೆಗೆ ಆ ವಿನಾಯಿತಿ ಇಲ್ಲ. ಆಕೆಯನ್ನು ದಂಡಿಸುವ ಮೂಲಕ ಪುರುಷ ಉದಾತ್ತ, ಲೋಕೋತ್ತರ, ಮಹಾತ್ಮ ಇಂತಹ ಹುಸಿ ವ್ಯಕ್ತಿತ್ವಗಳನ್ನು ಪಡೆದು ಕೊಳ್ಳುತ್ತಾನೆ.

1. ತುಂಬು ಗರ್ಭಿಣಿ ಪತ್ನಿಯನ್ನು ಆರೋಪದ ಮಾತುಗಳಿಗೆ ಕಿವಿಗೊಟ್ಟು ಕಾಡಿಗೆ ಕಳುಹಿಸುವುದು ಧರ್ಮ ಎಂದು ಕವಿ ವಿವರಿಸುತ್ತಾನೆ.
2. ತುಂಬಿದ ಸಭೆಯಲ್ಲಿ ಪ್ರಪಂಚವೀರರಾದ ಐವರು ಗಂಡಂದಿರು ತಮ್ಮ ಧರ್ಮಪತ್ನಿಯ ಮೇಲೆ ಚಾರಿತ್ರ್ಯಹನನ ಮಾಡುತ್ತಿದ್ದರೂ ಮೌನ ವಹಿಸುವುದು ರಾಜರ ಧರ್ಮ ಎಂದು ಇನ್ನೊಬ್ಬ ಕವಿ ಬರೆಯುತ್ತಾನೆ.
3. ಧರ್ಮಪತ್ನಿ ಅಪರಾಧಿಯಲ್ಲದಿದ್ದರೂ ಸತ್ಯಕ್ಕಾಗಿ ಆಕೆಯ ತಲೆಗಡಿಯುವುದು ಧರ್ಮ ಎನ್ನುತ್ತಾನೆ ಕವಿ ರಾಘವಾಂಕ. ಮೋಹ, ಮಮಕಾರಗಳನ್ನು ಲೌಕಿಕದಲ್ಲಿದ್ದೂ ಮೀರುವುದು ಸಾಕ್ಷಾತ್ಕಾರದ ತುರೀಯ ಘಟ್ಟ ಎಂದು ವ್ಯಾಖ್ಯಾನಿಸುತ್ತಾನೆ.
4. ದೇಹ, ಮನಸ್ಸು ಶುದ್ಧವಿದ್ದರೂ ಕ್ಷಣಮಾತ್ರ ಅಲೆಯಲ್ಲಿ ತೇಲಿಬಂದ ಭಾವನೆಗಳಿಂದ ಮನಸ್ಸು ಮಲಿನಗೊಂಡುದೇ ಅಪವಿತ್ರತೆ. ಇವಳ ತಲೆಗಡಿಯುವುದು ಪತಿ ಧರ್ಮ ಎಂದು ಪುರಾಣಕಾರ ಬರೆಯುತ್ತಾನೆ.
5. ಪತಿಯ ರೂಪ ಧರಿಸಿ ಬಂದವನ ಜೊತೆ ಪತಿಯೆಂದೆ ಬಾಳಿದರೂ ಅವಳು ಯುಗಯುಗಗಳ ವರೆಗೆ ಕಲ್ಲಾಗಿಯೇ ಇರಬೇಕು ಎನ್ನುತ್ತದೆ ಧರ್ಮ.
6. ಶರಣನ ವೇಷ ಧರಿಸಿ ಕಳ್ಳ ಬಂದು ಕೇಳಿದರೂ ತನ್ನ ಮೈಮೇಲಿನ ಒಡವೆಗಳನ್ನು ಮರುಮಾತಿಲ್ಲದೆ ತೆಗೆದುಕೊಡಬೇಕು ಎನ್ನುತ್ತದೆ ಧರ್ಮ.
7. ಶರಣರ ವೇಷ ಧರಿಸಿ ಬಂದು ಕೇಳಬಾರದ್ದನ್ನು ಕೇಳಿದರೂ ಕೊಡಬೇಕು. ಅದೇ ಧರ್ಮ ಎಂದು ಮತ್ತೊಬ್ಬ ಕವಿ ಬರೆಯುತ್ತಾನೆ.



ಋಷಿಗಳಾದ ಕವಿಗಳು ತಮ್ಮ ಕಾವ್ಯಗಳಲ್ಲಿ ಚಿತ್ರಿಸುವ ನಾಯಕ ಪಾತ್ರಗಳ ಮೂಲಕ ಧರ್ಮ, ಅಧರ್ಮ ವಿಚಾರಗಳನ್ನು ಹೇಳುತ್ತಾರೆ. ಧರ್ಮ ನಿಮಿತ್ತ ಮಾಡಿಕೊಂಡು ಮಹಿಳೆಯನ್ನು ಪುರುಷನ ಆಟಿಕೆ ಮಾಡಿಕೊಳ್ಳುವ ಅವಳನ್ನು ಹೆದರಿಕೆಯಲ್ಲಿಡುವ ಸಂದೇಶಗಳು ಸಮಾಜಕ್ಕೆ ರವಾನೆಯಾಗುತ್ತವೆ. ಮಹಾಕಾವ್ಯದ, ಪುರಾಣಗಳ ಕೆಲ ಘಟನೆಗಳಿವು.

ವಾಲ್ಮೀಕಿ, ವ್ಯಾಸ, ಅಜ್ಞಾತ ಪುರಾಣಕಾರರು, ಹರಿಹರ ಇವರೆಲ್ಲ ಮಹಿಳೆಯರನ್ನು ಏನೆಂದು ತಿಳಿದಿದ್ದಾರೆ. ತಮ್ಮ ಆ ಕ್ಷಣದ ಕಾವ್ಯಸೃಷ್ಟಿಯ ಭಾವಾವೇಷಗಳು ತಮ್ಮ ಕಾವ್ಯದ ಕಥಾನಾಯಕರ ವ್ಯಕ್ತಿತ್ವವನ್ನು ಹೇಗೆ ಮಸಳಿಸುತ್ತವೆ, ಅವರ ಉನ್ನತ ಚಿಂತನೆ, ಮೌಲ್ಯಗಳಿಗೆ ಅಪಚಾರ ಮಾಡುತ್ತವೆ ಎಂಬುದನ್ನು ವಿಚಾರ ಮಾಡುವುದಿಲ್ಲ. ಇಂತಹ ಕವಿಗಳು, ಪಾತ್ರಗಳಿಂದ ಮಹಿಳೆಯರಿಗೆ ಬಹಳ ಘೋರ ಅನ್ಯಾಯ ಮಾಡಿವೆ. ಮತ್ತು ಕೆಟ್ಟ ಮಾದರಿಗಳನ್ನು ಹೇಳಿವೆ. ಆದರೆ ಇಂತಹ ಸರಿಯಲ್ಲದ ನಡೆಗಳನ್ನು ವೀರ, ಉದಾತ್ತ, ಲೋಕೋತ್ತರ, ಧರ್ಮನಿಷ್ಠುರಿ ಈ ತೆರನಾಗಿ ವ್ಯಕ್ತಿತ್ವವನ್ನು ಕೊಂಡಾಡುವ ಮೂಲಕ ಉದಾತ್ತ ನಾಯಕನ ವ್ಯಕ್ತಿತ್ವವನ್ನು ಕೂಡ ಮುಕ್ಕುಗೊಳಿಸಲಾಗಿದೆ. ಆಶ್ಚರ್ಯವೆಂದರೆ ಇಂತಹ ಮಾದರಿಗಳನ್ನು 21ನೇ ಶತಮಾನದಲ್ಲಿ ನ್ಯಾಯಾಲಯಗಳು ನ್ಯಾಯದಾನದ ಕಾಲಕ್ಕೆ ನ್ಯಾಯ ನಿಷ್ಕರ್ಷೆಗೆ ಉದಾಹರಣೆ ತೆಗೆದುಕೊಳ್ಳುವುದು.

ಮಹಿಳೆ ಅಸುರಕ್ಷಿತಳು ಎಂದು ಹೇಳುವವರು ಯಾರು? ಪುರುಷ. ಪುರುಷನಿಗೆ ಪುರುಷನ ಮೇಲೆ ನಂಬಿಕೆಯಿಲ್ಲ. ಕಣ್ವ ಋಷಿಗಳು ಪ್ರಿಯಂವದೆ, ಶಶಿರೇಖೆಯರಿಗೆ ಶಾಕುಂತಲೆಯನ್ನು ಜೋಪಾನವಾಗಿ ನೋಡಿಕೊಳ್ಳಿರಿ ಎಂದು ಹೇಳಿಹೋಗುತ್ತಾರೆ. ಹೊರಗೆ ಒಬ್ಬಳನ್ನೆ ಕಳುಹಿಸಬೇಡಿರಿ ಎಂದು ಹೇಳಿಹೋಗುತ್ತಾರೆ. ಆದರೂ ಶಾಕುಂತಲೆ ಕಣ್ವರ ಗಡಿ, ಮಿತಿಗಳನ್ನು ದಾಟಿ ಹೊರಗೆ ಹೋಗಿಬಿಟ್ಟಳು. ಎಲ್ಲಿ ಹಿರಿಯರು, ಗುರುಗಳು, ಋಷಿಯ ಆಜ್ಞೆಯನ್ನು ಮೀರಿ ಹೋಗುತ್ತೀರಿ. ಅಲ್ಲಿ ನೀವು ಹುಡುಗಿಯರು, ಕನ್ಯೆಯರು ಮೋಸಹೋಗುತ್ತೀರಿ. ದಾರಿ ತಪ್ಪಿ ನಡೆಯುತ್ತೀರಿ. ಬದುಕಿನ ಪ್ರಮಾದಗಳಿಗೆ ಗುರಿಯಾಗುತ್ತೀರಿ ಎಂದು ಕಾಳಿದಾಸ ಈ ಮೂಲಕ ಹೇಳಿಸುತ್ತಿದ್ದಾನೆ. ನಿರ್ಬಂಧಗಳನ್ನು ಪುರುಷ ಹಾಕುತ್ತಾನೆ. ಸಂದರ್ಭಗಳು ಹೀಗೆ ಬರಬಹುದು ಹೇಗೆ ಎಚ್ಚರಿಕೆ ವಹಿಸಬೇಕು ಎಂದು ಹೇಳುವುದಿಲ್ಲ. ಕಾಲೋಚಿತ ಪ್ರಜ್ಞೆ ಇರುವ ಋಷಿಗಳು ಶಕುಂತಲೆಯನ್ನು ವಿವೇಕಿಯನ್ನಾಗಿ ಮಾಡಲು ಹೋಗುವುದಿಲ್ಲ. ರಾಜ ಬಂದು ತನ್ನ ರಾಗ, ಭಾವಗಳನ್ನು ಮುಗಿಸಿಕೊಂಡು ಜವಾಬ್ದಾರಿ ಮರೆಯುತ್ತಾನೆ. ಇಂತಹ ದುಷ್ಟ ಪುರುಷರಿಂದ ಸದ್ಯಕ್ಕೆ ದೂರ ಇರು ಎಂದು ವಿವರಿಸುವುದಿಲ್ಲ. ಹೆದರಿಸಿ ಅಂಕೆಯಲ್ಲಿಡುವ ಪ್ರಯತ್ನಗಳು ಮತ್ತೆ ಮತ್ತೆ ಕಾವ್ಯಗಳಲ್ಲಿ ಕಾಣಬರುತ್ತದೆ. ಮಹಿಳೆಗೆ ಆಯ್ಕೆ ಗೊತ್ತಿಲ್ಲ. ಅವಳು ದಾರಿ ತಪ್ಪುತ್ತಾಳೆ. ಅಂಕೆಯಲ್ಲಿರಿಸಬೇಕು ಎನ್ನುವ ನಿಯಂತ್ರಿತ ಚಿಂತನೆಗಳು ಇಲ್ಲಿವೆ. ಆಕೆಗೆ ಅರಿವು ಕೊಡಬೇಕು ಎಂಬುದನ್ನು ಚಿಂತಿಸುವುದಿಲ್ಲ. ಇಂದು ಹುಡುಗಿಯರು

ಏಕಾಂಗಿಯಾಗಿ ಯುರೋಪ್, ಅಮೆರಿಕ, ಜಪಾನ್, ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್ ದೇಶಗಳಿಗೆ ಹೋಗಿ ಹೆಚ್ಚಿನ ವಿದ್ಯೆ ಕಲಿತು, ಉದ್ಯೋಗ ಮಾಡುತ್ತಿದ್ದಾರೆ. ಅವರಿಗೆ ಜವಾಬ್ದಾರಿಯ ಅರಿವಿದೆ.

ಧರ್ಮದ ಹೆಸರಿನಲ್ಲಿ ನಿರ್ಬಂಧಗಳನ್ನು ಹಾಕಲಾಗಿದೆ. ಪರಿಣಾಮ ಇಂದು ಕೆಲ ಯುವ ಜನತೆ ಧರ್ಮ, ಭಕ್ತಿಗಳ ಕಡೆಗೆ ತಿರುಗಿಯೂ ನೋಡುವುದಿಲ್ಲ. ಹೆದರಿಸುವ ನಿರ್ಬಂಧಿಸುವ ಧರ್ಮ ಬೇಡ. ಎಚ್ಚರಿಕೆಯನ್ನು ಕಲಿಸುವ ಅರಿವಿನ ಮೂಲಕ ಬಲವಾನ್ ಆಗುವ ಸಂದರ್ಭ, ಸಮಸ್ಯೆಗಳನ್ನು ಎದುರಿಸುವ ಆತ್ಮಸ್ಥೈರ್ಯ ಹೇಳುವ ಧರ್ಮ ಬೇಕಾಗಿದೆ. ತರತಮದ ಧರ್ಮವನ್ನು ಇಂದು ಆಧುನಿಕರು ಯಾರೂ ಒಪ್ಪುವುದಿಲ್ಲ. ಅದು ಸಮಕಾಲೀನಕ್ಕೆ ಸ್ಪಂದಿಸದೆ ಹೋದರೆ ಸಂಸ್ಕೃತ ಭಾಷೆಯಂತೆ ಧರ್ಮ ಕತ್ತಲೆ ಸೇರಬೇಕಾಗುತ್ತದೆ. ರಾಜ, ಪುರೋಹಿತರ ಕಾಲ ಹೋಯಿತು. ವಿವೇಕ, ಅರಿವಿನ ಕಾಲ ಬಂದಿದೆ.

ದೇಹದ ಗುಣಧರ್ಮಗಳಾದ ಅಹಂ, ಮಮಕಾರಗಳು ಬಲವಾಗಿ ಆಳುವುದರಿಂದ ಮಹಿಳೆ ಮಹಿಳೆಗೆ ಸಮಾನತೆ ಕೊಡಲು ಒಪ್ಪುವುದಿಲ್ಲ. ಬಹಳ ದೂರ ಹೋಗುವುದು ಬೇಡ. ಮನೆಗೆ ಬಂದ ಸೊಸೆಯನ್ನು ಅತ್ತೆ, ನಾದಿನಿಯರು ಸಮಾನವಾಗಿ ನೋಡುವುದಿಲ್ಲ. ಈ ಸೊಸೆ ತನ್ನ ತವರುಮನೆಯವರನ್ನು ಪ್ರೀತಿಸಿದಂತೆ ಅತ್ತೆಮನೆಯ ಬಂಧುಗಳನ್ನು ಪ್ರೀತಿಸುವುದಿಲ್ಲ. ವಸ್ತುಸತ್ಯ ಹೀಗೂ ಇದೆ. ಸ್ತ್ರೀವಾದ ಚಿಂತನೆಯ ಮಹಿಳೆಯೇ ಇನ್ನೊಬ್ಬ ಮಹಿಳೆಗೆ ಸಮಾನತೆ ಕೊಡುವುದಿಲ್ಲ, ಗೌರವಿಸುವುದಿಲ್ಲ. ವಿಶ್ವವಿದ್ಯಾಲಯದ ಪ್ರಾಧ್ಯಾಪಕಿಯು ಇನ್ನೊಬ್ಬ ಪ್ರಾಧ್ಯಾಪಕಿ ನಮ್ಮ ವಿಭಾಗದಲ್ಲಿ ಉಂಟಾಗುತ್ತಾಳೆ ಎಂದರೆ ಶತಾಯಗತಾಯ ಬರದಂತೆ ತಡೆಯಲು ಪ್ರಯತ್ನಿಸುತ್ತಾಳೆ. ಮಹಿಳೆ ಇನ್ನೊಬ್ಬ ಮಹಿಳೆಗೆ ಸಮಾನತೆ ಕೊಡದಂತೆ ತೊಡರುಗಾಲು ಹಾಕುವ ಪ್ರಯತ್ನ. 17 ವರ್ಷ ಭಾರತವನ್ನು ಆಳಿದ ಇಂದಿರಾ ಗಾಂಧಿಯವರಾಗಲಿ, ಪಕ್ಷದ ಮುಖ್ಯರಾದ ಸೋನಿಯಾ ಗಾಂಧಿಯವರಾಗಲಿ ಭಾರತದ ಸಂಸತ್ ಮತ್ತು ರಾಜ್ಯಸಭೆಗಳಲ್ಲಿ, ರಾಜ್ಯದ ವಿಧಾನಪರಿಷತ್, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 50 ಮೀಸಲಾತಿ ಕೊಡಲಿಲ್ಲ. ಇಂದಿರಾ ಗಾಂಧಿಯವರು ಮನಸ್ಸು ಮಾಡಿದ್ದರೆ ಮಹಿಳೆಗೆ ಶೇಕಡ 50 ಮೀಸಲಾತಿ ಒಂದು ಠರಾವು ಪಾಸು ಮಾಡಬಹುದಾಗಿತ್ತು. ಭೇದಪ್ರಜ್ಞೆಯು ಮನುಷ್ಯನ ಉಸಿರಾಟದಂತೆ ದಮನಿದಮನಿಗಳಲ್ಲಿ ಪ್ರತಿಯೊಂದು ಜೀವಕೋಶದಲ್ಲಿ ತುಂಬಿಕೊಂಡಿದೆ. ಕವಿಗೆ ಕವಿ ಮುನಿವಂ ಎಂಬ ವಾಕ್ಯವು ಎಲ್ಲ ಅಸಮಾನತೆಗೆ ಬರೆದ ಭಾಷ್ಯ. ಕಬೀರ, ಷರೀಫರಂತಹ ಸಂತರು ಕೂಡ ಮಹಿಳೆಯ ವಿಚಾರದಲ್ಲಿ ಗೌರವದಿಂದ ನಡೆದುಕೊಂಡಿಲ್ಲ. ಡೋಲು, ಕತ್ತೆ, ಮಹಿಳೆ ಇವರು ಬಾರಿಸಲು, ಹೊಡೆಸಿಕೊಳ್ಳಲು ಮಾತ್ರ ಯೋಗ್ಯರೆನ್ನುತ್ತಾರೆ ಕಬೀರ. ಹೆಂಡತಿ ತೀರಿಕೊಂಡರೆ ಮೋಹ ತೀರಿತು ಎನ್ನುತ್ತಾನೆ ಷರೀಫ. ಇವೆಲ್ಲ ಪಟ್ಟಭದ್ರ ಮಹಿಳಾ ಅಸಮಾನತೆಯ ಚಿಂತನೆಗಳು. ಬಾಲ್ಯದಲ್ಲಿ



ತಂದೆ, ಯೌವನದಲ್ಲಿ ಗಂಡ, ಮುಪ್ಪಿನಲ್ಲಿ ಮಗ ಮಹಿಳೆಯರಿಗೆ ರಕ್ಷಣೆ ಕೊಡಬೇಕು. ಮಹಿಳೆಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎನ್ನುವ ಚಿಂತನೆಯು ಮಹಿಳೆಯನ್ನು ಬಂಧಿಯಾಗಿರಿಸಿತು. ಮಹಿಳೆಗೂ ಒಂದು ಮನಸ್ಸಿದೆ ಎಂಬುದನ್ನು ಬುದ್ಧಿಪೂರ್ವಕವಾಗಿ ನಿರ್ಲಕ್ಷಿಸಿದರು. ರಕ್ಷಣೆಯ ನೆಪದಲ್ಲಿ ಮಹಿಳೆಯರನ್ನು ಹತೋಟಿಯಲ್ಲಿಟ್ಟುಕೊಳ್ಳಲಾಯಿತು. ಈ ಎಲ್ಲ ಅಸಮಾನತೆಗಳನ್ನು ನಿರ್ಮೂಲನ ಮಾಡುವವರು ಅನುಭಾವಿಗಳು ಮಾತ್ರ. ಅವರು ಎಲ್ಲರನ್ನು ಪ್ರೀತಿಸಲು ಬಲ್ಲರು. ಎಲ್ಲರನ್ನು ಗೌರವಿಸಲು ಬಲ್ಲರು. ಅರಿವಿನ ಎತ್ತರವನ್ನು ಏರಿದವರು ಅನುಭಾವಿಗಳು. 12ನೇ ಶತಮಾನದ ಶಿವಾನುಭಾವಿ ದಾಸಿಮಯ್ಯನವರು ಒಳಗಿರುವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಎನ್ನುವ ಮೂಲಕ ಮಹಿಳೆಯೂ ಧಾರ್ಮಿಕ ಪ್ರವೇಶಕ್ಕೆ ಚಿಂತನೆಗಳಿಗೆ ಬಾಗಿಲು ತೆರೆದರು. ತನ್ನ ಧರ್ಮಪತ್ನಿಯವರನ್ನು ಕುರಿತು ಅವರು ಹೇಳುವ ಗೌರವದ ವಚನವಿದು.

> ಬಂದುದನರಿದು ಬಳಸುವಳು
> ಬಂದುದ ಪರಿಣಾಮಿಸುವಳು
> ಬಂಧುಬಳಗವ ಮರೆಸುವಳು
> ದುಗ್ಗಳೆಯ ತಂದು ಬದುಕಿದೆನು
> ಕಾಣಾ ರಾಮನಾಥ

ಮಹಿಳೆಗೆ ಗೌರವ ನೀಡಿದ ಚಿಂತನೆ ಇದು. ಆಕೆಯಿಂದ ನಾನು ಬದುಕಿದೆ. ಇದು ದೊಡ್ಡ ಮಾತು. ಆಕೆಗೂ ಅರಿವಿದೆ. ಆ ಅರಿವನ್ನು ಗೌರವಿಸುವ ಹೊಸ ಚಿಂತನೆ ಇಲ್ಲಿದೆ.

ದೇಶಕ್ಕೆ, ಪ್ರಪಂಚಕ್ಕೆ ಎಷ್ಟೆಲ್ಲ ಉಪದೇಶ ನೀಡಿದ ಗಾಂಧೀಜಿಯವರು ತಮ್ಮ ಧರ್ಮಪತ್ನಿ ಕಸ್ತೂರಿಬಾ ಅವರಿಗೆ ಸಮಾನತೆ ಕೊಡಲಿಲ್ಲ. ಗಾಂಧೀಜಿ ವಕಾಲತ್ತಿಗೆ ಮನಸೋತು ಕಕ್ಷಿದಾರನು ಗಾಂಧೀಜಿ ಇಲ್ಲದ ವೇಳೆಯಲ್ಲಿ ಅವರ ಪತ್ನಿಗೆ ಆಭರಣಗಳನ್ನು ಉಡುಗೊರೆಯಾಗಿ ನೀಡಿದನು. ಪತ್ನಿ ಸಹಜವಾಗಿ ಸ್ವೀಕರಿಸಿದರು. ಇದನ್ನು ಆಕ್ಷೇಪಿಸಿ ಗಾಂಧೀಜಿ ಪತ್ನಿಯನ್ನು ಅರ್ಧರಾತ್ರಿಯಲ್ಲಿ ಮನೆಯಿಂದ ಹೊರಗೆ ದಬ್ಬಿದರು. ಅರಿವು ಕೊಟ್ಟು ನಿರಾಕರಿಸುವುದನ್ನು ಕಲಿಸುವ ಬದಲು ಹೊರಗೆ ನೂಕಿ ಬಾಗಿಲಿಕ್ಕಿಕೊಳ್ಳುವ ದಬ್ಬಾಳಿಕೆಯನ್ನೆ ಪ್ರದರ್ಶಿಸಿದರು. ಗಾಂಧೀಜಿಯವರ ತತ್ವನಿಷ್ಠೆ ದೊಡ್ಡದು. ಅದೇ ವೇಳೆಯಲ್ಲಿ ಪತ್ನಿಗೆ ಅದೇ ವಿವೇಕವನ್ನು ಕೊಡುವುದೂ ಮುಖ್ಯ. ವಿಧವಾ ಸಮಸ್ಯೆಗೆ ವಿಧವೆ ವಿಧವೆಯಾಗಿಯೇ ಉಳಿದು ಸಂಯಮ ಕಾಪಾಡಿಕೊಳ್ಳಬೇಕು ಎಂದು ಉಪದೇಶ ಹೇಳಿದರು. ಮಹಿಳೆಯ ಅರಿವು, ಚಿಂತನೆ, ದೇಹದ ಮಿತಿಗಳು, ಶಕ್ತಿಗಳಿಗೆ ಪರ್ಯಾಯ ಸೂಚನೆ ಕೊಡಲಿಲ್ಲ. ಲೋಕದ ಡೊಂಕ ನೀವೇಕೆ ತಿದ್ದುವಿರಿ ಎಂದು ಹೇಳುತ್ತಲೆ ಲೋಕದ ಡೊಂಕ ತಿದ್ದಲು ಹೊರಟ ಬಸವಣ್ಣನವರು ತಮ್ಮ ಇಬ್ಬರು ಧರ್ಮಪತ್ನಿಯರು ತಮ್ಮ ಆಜ್ಞಾನುವರ್ತಿಯಾಗಿಯೇ ಇರಬೇಕೆಂದರು.

ಕಳ್ಳನೊಬ್ಬ ನೀಲಾಂಬಿಕೆಯವರ ಕಿವಿಯ ಹರಳೋಲೆಗೆ ಕೈಹಾಕಿದಾಗ ಅಯ್ಯೋ ನಮ್ಮಯ್ಯನ ಕೈ ನೊಂದಿತು ತೆಗೆದುಕೊಡಾ ಚಂಡಾಲಗಿತ್ತಿ ಎಂದು ಆಜ್ಞೆ ಮಾಡಿದರು. ನೀಲಾಂಬಿಕೆಯರ ಕಿವಿ ಹರಿದು ರಕ್ತ ಸೋರುತ್ತಿದ್ದರೂ, ಜಂಗಮವೇಷದ ಕಳ್ಳನಲ್ಲಿ ಸಂಗಮನನ್ನು ಕಂಡರೆ ವಿನಾ ತಮ್ಮ ಧರ್ಮಪತ್ನಿಯರಲ್ಲಿಯೂ ಆ ಸಂಗಮದೇವರನ್ನು ಕಾಣಲಿಲ್ಲ. ಮಹಿಳೆಯರಲ್ಲೂ ದೇವರು ಇದ್ದಾನೆ ಎನ್ನುವ ಇರುವಿಕೆಯನ್ನು ಕಾಣಲಿಲ್ಲ. ಹಗಲಿರುಳು ದಾಸೋಹಕ್ಕೆ, ಧರ್ಮಕ್ಕೆ ದುಡಿದ ಧರ್ಮಪತ್ನಿಯರಲ್ಲಿ ಬಸವಣ್ಣನವರು ಸಂಗಮದೇವರನ್ನು ಕಾಣದೇ ಹೋದರು. ಕಳ್ಳನು ಪುರುಷ. ಧರ್ಮಪತ್ನಿಯು ಮಹಿಳೆ. ಮಹಿಳೆಗಿಂತ ಪುರುಷ ಶ್ರೇಷ್ಠ. ದೇವರು ಗಂಡಸು ಸಂಗಮದೇವರು. ಇದು ಇಲ್ಲಿರುವ ದರ್ಶನ. ಹೊರಗಿನವರನ್ನು ಪ್ರೀತಿಸುವುದು ಧರ್ಮವಾಯಿತು. ಒಳಗಿನ ಮಹಿಳೆಯರನ್ನು ಗೌರವಿಸುವುದು ಧರ್ಮವಾಗಲಿಲ್ಲ. ಧರ್ಮಸೂಕ್ಷ್ಮಗಳು ಹೀಗಿರುವಾಗ ಇನ್ನು ಯಾರು ಸಮಾನತೆ ಕೊಡುತ್ತಾರೆ. ಪುರುಷನ ಆಜ್ಞಾಧಾರಕಳಾಗಿ ಬಾಳುವುದೆ ಪತಿವ್ರತೆಯರ ಧರ್ಮ ಎಂದು ಪುರುಷ ಬೋಧಿಸುತ್ತಿರುವಾಗ ಎಲ್ಲಿಯ ಅರಿವು? ಎಲ್ಲಿಯ ಚರ್ಚೆ?

ಧರ್ಮ, ರಾಜಕಾರಣ, ಉದ್ಯಮ ಕೂಡಿ ಈ ವ್ಯವಸ್ಥೆಯನ್ನು ರೂಪಿಸುವೆ. ಇವು ಪುರುಷನ ಕೈಲಿವೆ. ಈ ವ್ಯವಸ್ಥೆ ನಮ್ಮನ್ನು ಆಳುತ್ತಿದೆ. ಉನ್ನತ ಅಧಿಕಾರದವರು ಗುರುಮಠಕ್ಕೆ ಬಂದಾಗ ಈಗಲೂ ಹೇಳಲಾಗುತ್ತದೆ. ಪ್ರಜೆಗಳನ್ನು ರಾಜರು ಆಳಿದರು. ರಾಜರನ್ನು ಗುರುಗಳು ಆಳಿದರು. ಪ್ರಜಾಪ್ರಭುತ್ವ ಬಂದರೂ ಈ ಆಳ್ವಿಕೆ ಬದಲಾಗಿಲ್ಲ. ಸಿದ್ಧರಾಮೇಶ್ವರರು ಸ್ವತಃ ಮಹಿಳೆಯನ್ನು ಪ್ರತ್ಯಕ್ಷ ಮಲ್ಲಿಕಾರ್ಜುನ ಎಂದು ಕರೆದರು. ಸಿದ್ಧರಾಮೇಶ್ವರರ ಈ ಚಿಂತನೆಗಳನ್ನು ಮೆಚ್ಚಿ ಅವರ ಸಮಾಧಿಯ ದರ್ಶನ ಪಡೆಯಬೇಕು ಎಂದು ಮಹಿಳಾ ಗುರುಗಳು ಸೊಲ್ಲಾಪುರದಲ್ಲಿ ಸಿದ್ಧರಾಮೇಶ್ವರರ ಸಮಾಧಿದರ್ಶನ ಪಡೆಯಲು ಹೋದರೆ ಹೊರಗೆ ನಿಲ್ಲಿಸಲಾಗುತ್ತದೆ. ಮಹಿಳಾ ಗುರುಗಳನ್ನು ಗುರು ಎಂದು ಒಪ್ಪಿಕೊಳ್ಳುವುದಿಲ್ಲ. ಹೊರಗಿನವರು ಎನ್ನುತ್ತದೆ ಇವತ್ತಿನ ಆಡಳಿತ ಹಿಡಿದ ವ್ಯವಸ್ಥೆ. ಹೀಗೆ ಪುರುಷ ವ್ಯವಸ್ಥೆಯು ಮಹಿಳೆಯನ್ನು ಇಂದಿಗೂ ಆಳಿಸಿಕೊಳ್ಳುವವಳು ಎಂದೇ ತಿಳಿದಿದೆ.

ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಒರಿಸ್ಸಾದ ಜಗನ್ನಾಥ ದೇವಾಲಯದಲ್ಲಿ ಜಗನ್ನಾಥನ ದರ್ಶನ ಪಡೆಯಲು ಹೋದರೆ ಒಳಗೆ ಪ್ರವೇಶ ನೀಡಲಿಲ್ಲ. ಮಹಿಳಾ ಪ್ರಧಾನಮಂತ್ರಿ ಈ ಅಸಮಾನತೆಯನ್ನು ತುಟಿ ಬಿಚ್ಚದೆ ಒಪ್ಪಿಕೊಂಡು ದೂರ ಬಂದರು. ಪ್ರಧಾನಮಂತ್ರಿ ಮಹಿಳೆಯೇ ಈ ಅಸಮಾನತೆಯ ಕ್ರೌರ್ಯದ ಆಳಅಗಲಗಳನ್ನು ಪರಿಭಾವಿಸದೆ ಹೋದರೆ ಸಮಾನತೆ ಯಾವಾಗ ಸಿಗುತ್ತದೆ. ಯಾರು ತಾನೆ ಕೊಡುತ್ತಾರೆ? ಇವತ್ತಿಗೂ ಪುರುಷನು ಧರ್ಮವು ಪುರುಷನ ಸ್ವತ್ತು ಎಂದೇ ತಿಳಿದುಕೊಂಡಿದ್ದಾನೆ.

ಆಳುವುದು ಅರಿವಲ್ಲ ಅನುಭಾವವಲ್ಲ ದೇಹ. ದೇಹವಿಡಿದ ಅಜ್ಞಾನ. ದೇಹಗುಣಗಳು ಮನುಷ್ಯನನ್ನು ಆಳುತ್ತವೆ. ದೇಹದ ಮುಖ್ಯ ಲಕ್ಷಣ ಹಸಿವು. ಹಸಿವಿಗೆ



ಅಂಗಭೋಗ. ಭೋಗಗಳನ್ನು ಎಲ್ಲ ಮುಖಗಳಲ್ಲಿ ಅನುಭವಿಸುವುದು. ರಾಗದ್ವೇಷಗಳಲ್ಲಿ ಮೆರೆಯುವುದು. ಪರಿಣಾಮದ ಅರಿವಿಲ್ಲದ ಮನುಷ್ಯ ರೋಗ, ಸಾವುಗಳಲ್ಲಿ ಪರ್ಯಾವಸಾನವಾಗುತ್ತಾನೆ. ರಜೋಗುಣದ ವ್ಯಕ್ತಿಗಳಿಗೆ ರಾಗದ್ವೇಷಗಳು ಪ್ರಬಲ. ಮನುಷ್ಯ ಮುಖ್ಯ ಗುಣ ದುರ್ಬಲರ ಮೇಲೆ ಧಾಳಿಯಿಡುತ್ತಲೆ ಇರುವುದು. ಮದಗಳು ಅಧಿಕ ಇರುವ ಮನುಷ್ಯನ ಉಪಟಳ ಅತ್ಯಧಿಕ. ಅವಿದ್ಯೆಗೆ ವಶರಾಗಿರುವ ನಾವು ವಿವೇಕದ ಕಡೆಗೆ ಮನಸ್ಸು ಕೊಡುವುದಿಲ್ಲ. ನಾವೆಲ್ಲ ಮುಖ್ಯವಾಗಿ ಲೌಕಿಕರು. ಗುರು ಇರಲಿ, ಸಂಸಾರಿ ಇರಲಿ. ಇಬ್ಬರೂ ಲೌಕಿಕರು. ಶುದ್ಧ ಅನುಭಾವಿಗಳು ದುರ್ಲಭ. ಸೇಂಟ್ ಎನ್ನುವ ಒಂದು ಪದ, ಶಬ್ದವನ್ನು ಯೋಗ್ಯತೆ ಇರುವ ಒಬ್ಬ ಮಹಿಳೆಗೆ ಉದಾರವಾಗಿ ಕೊಡದವನು ಈ ಪುರುಷ. ತನ್ನನ್ನು ತಾನು ಸೇಂಟ್ ಎಂದು ಕರೆಸಿಕೊಳ್ಳುವ ಅಗತ್ಯವಿಲ್ಲದೆ ಸೇಂಟ್ ಆಗಿ ಬದುಕುತ್ತಿರುವ ಅನೇಕ ಸಾಧಕಿಯರು ನಮ್ಮ ಕಣ್ಣ ಮುಂದಿದ್ದಾರೆ. ಇಷ್ಟು ಉದಾರ ಗುಣ ಇಲ್ಲದ ಪುರುಷವರ್ಗ ಬೇರೆ ಏನನ್ನು ಕೊಡಬಲ್ಲದು? ಈಚೆಗೆ ಮಹಿಳೆಗೆ ಚರ್ಚುಗಳು ಬಿಷಪ್ ಪದವಿ ನೀಡಿವೆ. ಆ ಅಧಿಕಾರವನ್ನು ಪುರುಷ ತನ್ನಲ್ಲಿ ಇರಿಸಿಕೊಂಡಿದ್ದಾನೆ. ಗುರುತ್ವವನ್ನು ಮಹಿಳೆಗೆ ಕೊಡುವುದು. ಮಹಿಳಾ ಗುರುವಿಗೆ ವಂದಿಸುವುದು. ಇವೆಲ್ಲ ಪುರುಷನಿಗೆ ಒಗ್ಗದ ಸಂಗತಿಗಳು. ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ. ಚಿಂತನೆಯನ್ನು ಇಂದಿನ ಧರ್ಮಗುರುಗಳು ಬದಿಗೆ ಸರಿಸಿದ್ದಾರೆ.

ಕೆಲವು ಪ್ರಾಚೀನ ಕಾವ್ಯಗಳಲ್ಲಿ ಮಹಿಳೆಯರಿಗೆ ಒಳ್ಳೆಯ ತಂದೆ, ತಾಯಿ, ಗುರುಗಳು ಸಿಕ್ಕಿರುವ ಮಾದರಿಗಳಿವೆ. ಆದರೂ ಮಹಿಳೆಯರು ಅನ್ಯಾಯಕ್ಕೊಳಗಾಗುವುದು ಅಲ್ಲಿಯೂ ಘಟಿಸಿದೆ. ಪಾರ್ವತಿ, ಸಾವಿತ್ರಿ, ದಮಯಂತಿ, ದ್ರೌಪದಿಯರು ತಾವು ಇಚ್ಛಿಸಿದ ವರನನ್ನು ಮೆಚ್ಚಿ ಲಗ್ನ ಮಾಡಿಕೊಳ್ಳುತ್ತಾರೆ.

ಆದರೆ ಅವರು ಘೋರವಾದ ದುಃಖ ಪರಂಪರೆಗಳನ್ನು ಅನುಭವಿಸಬೇಕಾಗುತ್ತದೆ. ಪಾರ್ವತಿ, ಸಾವಿತ್ರಿ, ದಮಯಂತಿ, ದ್ರೌಪದಿಯರಿಗೆ ವಿಶೇಷ ವಿದ್ಯೆಯನ್ನು ಗುರುಗಳೇ ನೀಡಿದ್ದರು. ತಂದೆ, ಗುರುವಿನ ಇಚ್ಛೆಗೆ ವಿರುದ್ಧವಾಗಿ ಲಗ್ನ ಮಾಡಿಕೊಂಡುದರಿಂದ ಅವರು ಮುಂದೆ ಸಾಂಸಾರಿಕ ಜೀವನದಲ್ಲಿ ಘೋರವಾದ ದುಃಖ ಅನುಭವಿಸಬೇಕಾಗುತ್ತದೆ ಎಂದು ಕತೆಗಳು ವಿವರಿಸುತ್ತವೆ. ಇವು ಮತ್ತೆ ಮತ್ತೆ ಮಹಿಳೆಯರ ಆಯ್ಕೆ, ಸ್ವಾತಂತ್ರ್ಯಗಳಿಗೆ ನಿರ್ಬಂಧ ವಿಧಿಸುವ ಮಾದರಿಗಳೇ ಆಗಿವೆ. ಮಹಿಳೆ ಯೋಗ್ಯವಾದ ವರನನ್ನು ಆಯ್ಕೆ ಮಾಡಲಾರಳು ಎಂಬುದನ್ನು ಋಷಿಗಳು, ಗುರುಗಳು, ಕವಿಗಳು ವಿವರಿಸುತ್ತಾರೆ. ಮೇಲಿಂದ ಮೇಲೆ ಧರ್ಮ, ಕಾವ್ಯ, ಪುರಾಣಗಳು ಪುರುಷನನ್ನು ಲೋಕೋತ್ತರ, ವೀರ ಎಂದು ವೈಭವಿಸುತ್ತವೆ.

ಕಾವ್ಯಗಳು ವಿವರಿಸುವ ಸಂದೇಶ ಏನು? ಮಗಳೆ ನಿನ್ನ ಆಯ್ಕೆ ಹೀಗಿತ್ತು. ಇಂತಹ ಫಲಗಳು ನಿನಗೆ ಸಿಕ್ಕವು ಎಂದು ವಿವರಿಸುವುದೇ ಆಗಿದೆ. ಅಂತಃಕರಣದ ನೆಲೆಯಲ್ಲಿ

ಉದಾತ್ತ ನೆಲೆಯಲ್ಲಿ ಮಹಿಳೆಯರಿಗೆ ಅರಿವು ಕೊಡುವ ಉದಾತ್ತ ನಾಯಕರನ್ನು ಋಷಿಕವಿಗಳು ಸೃಷ್ಟಿಸಲು ಹೋಗಲಿಲ್ಲ. ಧರ್ಮ ಅಧರ್ಮದ ಮೂಲಕ ನಿರ್ಬಂಧಿಸುವ ವಿಧಿಗಳೇ ಅಪರಿಮಿತವಾಗಿ ಕಾವ್ಯಗಳಲ್ಲಿ ಸಿಗುತ್ತವೆ.

1. ಕಷ್ಟಕಾಲಕ್ಕೆ ಪತಿಯೂ ಸಹಾಯಕ್ಕೆ ಬರುವುದಿಲ್ಲ. ದೇವರು ಬಂದು ರಕ್ಷಿಸುತ್ತಾನೆ. ನಂಬಿಕೆಯ ದೇವರನ್ನು ಹಿರಿದಾಗಿ ಚಿತ್ರಿಸಲು ಮಹಿಳೆಯರನ್ನು ಬೇಕೆಂದೇ ಘೋರ ದುಃಖಕ್ಕೆ ಒಳಗುಪಡಿಸುವುದು.
2. ನಮ್ಮ ಆದರ್ಶ ಪುರುಷೋತ್ತಮನು ಇಂತಹ ನಿಷ್ಠುರಿ. ಕಷ್ಟಕಾಲದಲ್ಲಿ ಪತ್ನಿಯನ್ನೂ ಕಾಡಿಗೆ ನೂಕಿದನು. ಪತಿಯ ಕರ್ತವ್ಯ, ತಂದೆಯಾದವನ ಕರ್ತವ್ಯವನ್ನು ಮರೆತನು. ತನ್ನ ಮರ್ಯಾದೆಯೇ ಮುಖ್ಯವಾಯಿತು. ಪತ್ನಿಯ ಮರ್ಯಾದೆಯೇ ತನ್ನ ಮರ್ಯಾದೆ ಎನ್ನುವ ಭಾವ ಬರದೆ ಹೋಯಿತು. ರಾಜನಿಗೆ ಹೋಲಿಸಿದರೆ ಋಷಿಗಳು ಕರುಣಾಮಯಿಗಳು. ಅಂತಃ ಕರಣವುಳ್ಳವರು. ಆಪತ್ಕಾಲದಲ್ಲಿ ತುಂಬು ಗರ್ಭಿಣಿಯನ್ನು ತಾಯ್ತನದ ಮಮತೆಯಿಂದ ಸಲಹಿದರು. ರಾಜರಿಗಿಂತ ರಾಜಗುರುಗಳು ಶ್ರೇಷ್ಠ ಎನ್ನುವ ನಿದರ್ಶನಗಳನ್ನು ಕೊಡಲಾಗುತ್ತದೆ.

ಲಿಂಗ ರಾಜಕಾರಣಕ್ಕೆ ಮಂಗಗಳ ಒಂದು ದೃಷ್ಟಾಂತ ಕೊಡುತ್ತೇನೆ. ನಮ್ಮ ಆಶ್ರಮದ ಪರಿಸರದಲ್ಲಿ ಕೆಲವು ಹಲಸಿನ ಮರಗಳಿವೆ. ಒಂದೊಂದು ಮರದಲ್ಲೂ ಇನ್ನೂರು ಮುನ್ನೂರು ಹಲಸಿನ ಹಣ್ಣುಗಳಿರುತ್ತವೆ. ಹಲಸು ಹಣ್ಣಾದ ಕಾಲಕ್ಕೆ ಬಿಳಿ ಮಂಗಗಳು, ಕಪ್ಪು ಮಂಗಗಳು ಹಿಂಡುಗಟ್ಟಿ ಬರುತ್ತವೆ. ಮಂಗದ ನಾಯಕ ತನಗೆ ತಿಂದು ಸಾಕಾಗುವವರೆಗೆ ಇತರ ಮಂಗಗಳನ್ನು ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ತನ್ನದೇ ಗುಂಪಿನ ಮಂಗಗಳಾದರೂ ಅವು ತಿನ್ನಲು ಬಂದರೆ ಧಾಳಿಯಿಡುತ್ತದೆ. ಮನುಷ್ಯನು ಇದಕ್ಕಿಂತ ಭಿನ್ನ ಇಲ್ಲ. ಅಧಿಕಾರ, ಭೋಗದ ಕಾಲಕ್ಕೆ ತಾನೇ ಮುಖ್ಯ. ರಾಗಗಳು ಪ್ರಬಲವಾಗಿ ಆಳುವುದರಿಂದ ಅಲ್ಲಿ ಸಮಾನತೆ, ಕಾನೂನು ಪುಸ್ತಕದಲ್ಲಿ ಉಳಿಯುತ್ತದೆ. ಈ ದೇಹಕ್ಕೊಂದು ಮನಸ್ಸಿದೆ ಮನಸ್ಸಿಗೊಂದು ಅರಿವಿದೆ ಎಂಬುದರ ಕಡೆಗೆ ಮನುಷ್ಯ ಮನಸ್ಸು ಕೊಡುವುದಿಲ್ಲ. ಈ ಪ್ರಪಂಚ ಇರುವುದೆ ತನ್ನ ಸುಖಕ್ಕಾಗಿ. ಉಳಿದುವೆಲ್ಲ ತನಗೆ ಅಧೀನ ಎಂದು ವಿಚಾರ ಮಾಡುತ್ತಾನೆ. ಇದು ಕೇಡಿನ ಲಕ್ಷಣ. ಪುರಾಣಗಳು ಮದಾಂಧರನ್ನು ರಾಕ್ಷಸರು ಎಂದು ಕರೆದವು. ರಾಕ್ಷಸರು ಎಂದರೆ ಬೇರೇನು ಅಲ್ಲ. ಮದಗಳಿಂದ ಆಳಿಸಿಕೊಳ್ಳುವವರು; ಇವರು ಎಲ್ಲ ಕಾಲಕ್ಕೆ ಇರುತ್ತಾರೆ.

ದೇವೀಪುರಾಣವನ್ನು ನವರಾತ್ರಿಯಲ್ಲಿ ಶ್ರದ್ಧೆಯಿಂದ ಓದಲಾಗುತ್ತದೆ. ರಾಕ್ಷಸರ ಉಪಟಳ ಅಧಿಕವಾದಾಗ ದೇವಿಗೆ ರಾಕ್ಷಸ ಸಂಹಾರ ಮಾಡಲು ದೇವಾನುದೇವತೆಗಳು ತಮ್ಮ ಎಲ್ಲ ಶಕ್ತಿ, ಶಸ್ತ್ರಗಳನ್ನು ಕೊಡುತ್ತಾರೆ. ಇದರರ್ಥ ಏನು? ನೀನು ಮಹಿಳೆ.



ನಾವು ನಿನ್ನನ್ನು ಸಂರಕ್ಷಣೆ ಮಾಡಲು ಆಗುವುದಿಲ್ಲ. ರಾಕ್ಷಸರಿಂದ ನಿನ್ನನ್ನು ನೀನೆ ಸಂರಕ್ಷಣೆ ಮಾಡಿಕೊ ಎನ್ನುತ್ತವೆ. ಮನುಷ್ಯನೇ ರಾಕ್ಷಸ. ಮನುಷ್ಯ ಇರುವವರೆಗೆ ರಾಕ್ಷಸಗುಣ ಇರುತ್ತದೆ. ಇಂತಹವರಿಂದ ಮಹಿಳೆ ತನ್ನನ್ನು ತಾನೆ ಸಂರಕ್ಷಣೆ ಮಾಡಿಕೊಳ್ಳಬೇಕು. ವಿವೇಕ ಇರುವವರು ನೆರವಿಗೆ ಬಂದರೆ ಅದು ಅರಿವಿನ ವಿಜಯ. ಯಾವುದೇ ಮಾಹಿತಿ ತಂತ್ರಜ್ಞಾನದ ವಿದ್ಯೆ ಗಳಿಸಿದರೂ ಮನುಷ್ಯನಲ್ಲಿ ಕೇಡಿನ ಗುಣ ಇದ್ದೇ ಇರುತ್ತದೆ. ಮನುಷ್ಯರು ಉದಾತ್ತರಾಗುವುದು ಉತ್ತಮ ಪರಿಸರ ನಿರ್ಮಾಣ ಮಾಡಿದಲ್ಲದೆ ಸಾಧ್ಯವಾಗದು.

ಕೇಡು ತಮೋಗುಣದ ಪ್ರಭಾವ. ತಮದ ಲಕ್ಷಣ ಅಜ್ಞಾನ. ಎಲ್ಲಿಯವರೆಗೆ ಮನುಷ್ಯನಿಗೆ ಪೂರ್ಣಜ್ಞಾನ, ಅರಿವು ಆಗುವುದಿಲ್ಲ ಅಲ್ಲಿಯವರೆಗೆ ಈ ಮನುಷ್ಯನು ಇನ್ನೊಬ್ಬರನ್ನು ಪ್ರೀತಿಸುವುದನ್ನು, ಗೌರವಿಸುವುದನ್ನು ಕಲಿಯುವುದಿಲ್ಲ. ಹುಟ್ಟುಗುಣಗಳ ಜೊತೆ ಪ್ರೀತಿ, ಮಮತೆಯೂ ಇದೆ. ವಿವೇಕವಿದ್ದಾಗ ಅದು ವೈಶಾಲ್ಯತೆ ಪಡೆದುಕೊಳ್ಳುತ್ತದೆ. ಪ್ರಪಂಚದ ಎಲ್ಲ ದೇಶಗಳಲ್ಲಿ ವರ್ಗಭೇದ, ವರ್ಣಭೇದ, ಲಿಂಗಭೇದ, ಜಾತಿಭೇದ, ಭಾಷಾಭೇದ ಭದ್ರವಾಗಿವೆ. ಇದನ್ನು ಅಧಿಕಾರದ ಬಲದಿಂದ ರಾಜಕಾರಣ, ಧರ್ಮಗಳು ಬೆಳೆಸುತ್ತವೆ. ಒಂದು ಧರ್ಮ ತನ್ನದು ಬಹಳ ಉನ್ನತ ಧರ್ಮ ಎಂದು ಹೇಳಿಕೊಳ್ಳುತ್ತದೆ. ಇನ್ನೊಂದು ಧರ್ಮದ ಬಗೆಗೆ ಅಸಹನೆಯನ್ನು ತನ್ನ ಅನುಯಾಯಿಗಳಲ್ಲಿ ಬಿತ್ತುತ್ತಲೆ ಇರುತ್ತದೆ. ಹೀಗಿರುವಾಗ ಮಹಿಳೆಗೆ ಸಮಾನತೆ ಕೊಡಲು ಈ ಪಟ್ಟಭದ್ರ ಶಕ್ತಿಗಳು ಅನುಕೂಲವಾಗುವುದಿಲ್ಲ. ಇದರಿಂದ ಲಿಂಗ ರಾಜಕಾರಣ ನಿಗಿನಿಗಿ ಉರಿಯುತ್ತಲೆ ಇರುತ್ತದೆ. ಕನ್ನಡ ಭಾಷೆ ಇಂಗ್ಲಿಷ್ ಭಾಷೆಗೆ ಸಮಾನವಾಗಿ ನಿಲ್ಲಲಾಗುತ್ತಿಲ್ಲ. ಹಿಂದಿ, ಸಂಸ್ಕೃತದ ಮುಂದೆಯೂ ಕನ್ನಡವನ್ನು ಅಸಮಾನವಾಗಿಯೇ ನೋಡಲಾಗುತ್ತದೆ. ರಾಜ ಸಂಸ್ಕೃತದಲ್ಲಿ ಮಾತನಾಡಿದರೆ ಮಹಿಳೆ ಸಂಸ್ಕೃತದಲ್ಲಿ ಮಾತನಾಡುವಂತಿಲ್ಲ. ರಾಜ ದೈವಾಂಶಸಂಭೂತ. ಮಹಿಳೆಗೆ ಆ ಅರ್ಹತೆ ಇಲ್ಲ. ಇದು ಸಂಸ್ಕೃತ, ಧರ್ಮ ವಿಧಿಸಿರುವ ಭೇದಪ್ರಜ್ಞೆ.

ಈ ದೇಶದಲ್ಲಿ ಅರ್ಧರಾತ್ರಿಯಲ್ಲಿ ಮಹಿಳೆ ಒಬ್ಬಳೆ ನಿರ್ಭಯವಾಗಿ ತಿರುಗಾಡುವ ವಾತಾವರಣ ನಿರ್ಮಾಣವಾದರೆ ಅದು ಪ್ರಜಾಪ್ರಭುತ್ವದ ಲಕ್ಷಣ ಎಂದು ಗಾಂಧೀಜಿಯವರು ಹೇಳಿದ್ದರು. ಅಂತಹ ಗಾಂಧೀಜಿಯವರ ಹೆದೆಗೆ ಗುಂಡು ಹೊಡೆಯಲಾಯಿತು. ಪ್ರಾರ್ಥನೆಗೆ ಹೋದ ಸ್ಥಳದಲ್ಲಿ ಹಗಲಿನಲ್ಲಿ ಕೊಲೆಯಾದರು. ಮಹಿಳೆಗೆ ರಕ್ಷಣೆ ಸಿಗುವುದಿರಲಿ ದೇಶದ ಮಹಾತ್ಮನಿಗೆ ರಕ್ಷಣೆ ಸಿಗಲಿಲ್ಲ. ಈ ದೇಶದಲ್ಲಿ ಶತಶತಮಾನದಿಂದಲೂ ಮಹಿಳೆಯರ ಮೇಲೆ ನಡೆದಿರುವ ಕ್ರೌರ್ಯ, ಹಿಂಸೆಯನ್ನು ವರ್ಣಿಸಲು ಗ್ರಂಥಗಳು ಸಾಲುವುದಿಲ್ಲ. ಕಣ್ಣೀರು ಸಮುದ್ರವಾಗಿ ಸಂಗ್ರಹವಾದರೂ ಮುಗಿಯುವುದಿಲ್ಲ.

ವಚನಕಾರರು ಧಾರ್ಮಿಕ ಹಿನ್ನೆಲೆಯಲ್ಲಿ ಮಹಿಳಾಪರವಾದ ಮತ್ತು ಮಹಿಳೆಯರನ್ನು ನಿರ್ಬಂಧಿಸುವ ಕೆಲವು ದ್ವಂದ್ವ ವಿಚಾರಗಳನ್ನು ಪ್ರಕಟಿಸಿದ್ದಾರೆ. ಮಹಿಳೆ ಮಾಯೆ ಎನ್ನುವುದು ಒಂದು ನಿಲುವು. ಇದೇ ಮಹಿಳೆಯನ್ನು ತಾಯಿ, ಮಹಾದೇವಿ, ಶಿವನ ಅರ್ಧಾಂಗಿ ಎಂದು ನೋಡುವುದು ಮತ್ತೊಂದು ನಿಲುವು. ಇದೇ ವಿಚಾರಗಳು ಇವತ್ತಿಗೂ ಜನಸಾಮಾನ್ಯರಲ್ಲಿ ಕಾಣುತ್ತವೆ. ಬೆಳೆದ ಹೆಣ್ಣುಮಕ್ಕಳು ಲಗ್ನವಾಗುವವರೆಗೆ ಹೊರಗೆ ಬರಬಾರದು. ದುಷ್ಟರಿಂದ ರಕ್ಷಿಸಿಕೊಳ್ಳುವುದಕ್ಕೆ ಇದು ಅಗತ್ಯ ಎನ್ನುವುದು ಇಲ್ಲಿ ಮುಖ್ಯ ಒತ್ತು ಕಾಣುತ್ತದೆ. ಇಂತಹ ನಿಲುವುಗಳು ಮಹಿಳೆಯರು ಸಾಧಿಸುವ ಸಾಧನೆಗೆ, ಪ್ರತಿಭೆಗೆ ಅಡ್ಡಿಯಾಗುತ್ತದೆ. ಜ್ಞಾನದ ದ್ವಾರ ಮುಚ್ಚಿದಂತಾಗುತ್ತದೆ. ಯಾವುದೇ ಒಂದು ಸಾಧನೆಯ ದಾರಿಯಲ್ಲಿ ಒಳಿತು, ಕೆಡುಕು ಎರಡೂ ಇರುತ್ತದೆ. ವಿದ್ಯುತ್ ಶಾಕ್ ಹೊಡೆಯುತ್ತದೆ ಎಂದು ಮನೆಗೆ ವಿದ್ಯುತ್ ಸಂಪರ್ಕ ಬೇಡ ಎನ್ನಲು ಬರುವುದಿಲ್ಲ. ಗ್ಯಾಸ್ ಕನೆಕ್ಷನ್ ಪೈಪ್ ಸರಿಯಿಲ್ಲದೆ ಸೋರಿಕೆಯಾದಾಗ ಅವಗಡಗಳು ಉಂಟಾಗುತ್ತವೆ. ಹಾಗೆಂದು ಗ್ಯಾಸ್ ಸಂಪರ್ಕ ಪಡೆದುಕೊಳ್ಳುವುದನ್ನು ನಿಲ್ಲಿಸಲಾಗುವುದಿಲ್ಲ. ಹಾಗೆಯೆ ಅವಕಾಶದ ದ್ವಾರ ಒಳಿತು, ಕೆಡುಕು ಎರಡನ್ನು ಒಳಗೆ ತರುತ್ತದೆ. ಎಚ್ಚರಿಕೆಯಿಂದ ನಿರ್ವಹಣೆ ಬೇಕು. ಧರ್ಮದ ನಿರ್ಬಂಧಗಳು ಮಹಿಳೆಯರ ವಿಚಾರದಲ್ಲಿ ಈ ಪರಿಯದೇ ನಿಲುವುಗಳಾಗಿವೆ.

ಬಸವಣ್ಣನವರನ್ನು ಸಂಶೋಧಕರು, ವ್ಯಾಖ್ಯಾನಕಾರರು ಬಹಳ ಪ್ರಗತಿಪರ ಚಿಂತಕರು ಎಂದು ವಿವರಿಸುತ್ತಾರೆ. ಅವರ ಎಲ್ಲ ವಚನಗಳಿಗೆ ವ್ಯಾಖ್ಯಾನ, ಪ್ರಕೋಶ, ಡಾಕ್ಟರೇಟ್ ಪ್ರಬಂಧ, ಜೀವನಚಿತ್ರ, ಕಾದಂಬರಿ ಬರವಣಿಗೆ, ಪ್ರವಚನ ಮುಂತಾದ ಕಾರಣಗಳಿಂದ ಹೆಚ್ಚಿನ ಅಧ್ಯಯನವನ್ನು ಮತ್ತೆ ಮತ್ತೆ ನಡೆಸಬೇಕಾಯಿತು. ಬಸವಣ್ಣನವರು ಎಷ್ಟೋ ವಚನಗಳಲ್ಲಿ ಮಹಿಳೆಯರನ್ನು ಮಾಯೆ ಎಂದು ಕರೆದಿದ್ದಾರೆ. ಪತ್ನಿಯು ಪತಿಯ ಇಚ್ಛೆಯಂತೆ ನಡೆದುಕೊಳ್ಳಬೇಕು ಎಂದು ನಿರ್ಬಂಧಿಸುತ್ತಾರೆ. ಅಲ್ಲದೆ ಮಹಿಳೆಯರ ವಿಚಾರದಲ್ಲಿ ಸಾಂಪ್ರದಾಯಕವಾದ ಚಿಂತನೆಗಳನ್ನೆ ಬಸವಣ್ಣನವರು ಕೂಡ ಹೊಂದಿರುವುದು ಅವರ ವಚನಗಳಲ್ಲಿ ಕಾಣುತ್ತದೆ.

> ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
> ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ
> ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
> ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ
> ಈ ಮಾಯೆಯ ಕಳೆವಡೆ ಎನ್ನಳವಲ್ಲ. (15, ಬ.ವ.)

> ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ
> ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು
> ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ
> ಇನ್ನೆಂದಿಂಗೆ ಮೋಕ್ಷವಹುದೋ ಕೂಡಲಸಂಗಮದೇವಾ (9, ಬ.ವ.)



ಹೆಣ್ಣು ಮಾಯೆ, ಹಡೆದ ತಾಯಿ ಮಾಯೆ, ಕೂಡಿದ ಪತ್ನಿ ಮಾಯೆ, ಪಡೆದ ಮಗಳು ಮಾಯೆ ಎಂಬ ವಿಚಾರಗಳು ಬಸವಣ್ಣನವರ ವಚನದಲ್ಲಿವೆ. ಸಂಸಾರವನ್ನು ಮಾಯೆ, ರಾಹು ಎಂದು ಕರೆಯುತ್ತಾರೆ. ಗೃಹಸ್ಥ ಜೀವನಕ್ಕೆ ಕಾಲಿರಿಸಿದ ಬಸವಣ್ಣನವರು ಸಂಸಾರವನ್ನು, ಹೆಣ್ಣನ್ನು ಮಾಯೆ ಎಂದು ಕರೆಯುತ್ತಾರೆ. ಮನೆ, ಮಡದಿ, ಮಕ್ಕಳು ಈ ಕೌಟುಂಬಿಕ ಜೀವನವನ್ನು ಮುಳುಗಿಸುವ ಸಂಸಾರ ಎಂದು ಮಿಡಿಯುತ್ತಾರೆ. ಮಹಿಳೆಯರನ್ನು ಮಾಯೆ ಎಂದು ಕರೆದ ಮೇಲೆ ಧರ್ಮದ ದ್ವಾರ ಮುಚ್ಚಿದಂತೆಯೇ ಆಯಿತು. ಗೃಹಸ್ಥಜೀವನವನ್ನು ನಿರಾಕರಿಸಿ ಅನುಭಾವಜೀವನಕ್ಕೆ ಕಾಲಿರಿಸಿದ ಪ್ರಭುದೇವರು ಮತ್ತು ಅಕ್ಕಮಹಾದೇವಿಯರು ಹೆಣ್ಣು ಮಾಯೆ ಎಂಬುದನ್ನು ಕುರಿತು ಭಿನ್ನ ನಿಲುವುಗಳನ್ನು ಅಭಿವ್ಯಕ್ತಿಸಿದ್ದಾರೆ.

> ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
> ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
> ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
> ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರಾ

ಪ್ರಭುದೇವರು ಹೆಣ್ಣಿನಲ್ಲಿ ಮಾಯೆಯಿಲ್ಲ, ಮಣ್ಣಿನಲ್ಲಿ ಮಾಯೆಯಿಲ್ಲ, ಹೊನ್ನಿನಲ್ಲಿ ಮಾಯೆಯಿಲ್ಲ, ಅದು ನಿನ್ನ ದೃಷ್ಟಿಯಲ್ಲಿ ಮಾಯೆ ಇದೆ ಎಂದು ವಾಸ್ತವ ಸತ್ಯ ವಿಚಾರಗಳನ್ನು ಮುಂದಿಡುತ್ತಾರೆ. ಬುದ್ಧ ಕೂಡ ಹೆಣ್ಣು ಮಾಯೆ ಎಂದೇ ಎಣಿಸಿದ್ದ. ತ್ರಿವಿಧಗಳಾದ ಹೆಣ್ಣು, ಹೊನ್ನು, ಮಣ್ಣು ಮಾಯೆ ಎಂದು ನಿರಾಕರಿಸಿ ತ್ಯಾಗಜೀವನಕ್ಕೆ ಅಡಿಯಿರಿಸಿದ್ದ. ಜೈನ ಧರ್ಮ ಕೂಡ ಹೆಣ್ಣಿಗೆ ಈ ಜನ್ಮದಲ್ಲಿ ಮೋಕ್ಷವಿಲ್ಲ. ಪುರುಷನಾಗಿ ಜನಿಸಿ ಮೋಕ್ಷ ಪಡೆಯಬೇಕು ಎಂದೇ ವಿವರಿಸಿತು. ಪ್ರಭುದೇವರ ವಚನದಲ್ಲಿ ಮಾಯೆಯ ವ್ಯಾಖ್ಯೆ ಉಜ್ವಲವಾಗಿದೆ. ದ್ರೌಪದಿ ದುರ್ಯೋಧನ, ದುಶ್ಯಾಸನ, ಜಯದ್ರಥ, ಕೀಚಕನಿಗೆ ಮಾತ್ರ ಮಾಯೆಯಾಗಿ ಕಂಡಳು. ಉಳಿದವರಿಗಲ್ಲ. ಎಂದರೆ ಮಾಯೆ ದ್ರೌಪದಿಯಲ್ಲಿ ಇಲ್ಲ. ಹೀಗೆ ಪ್ರಭುದೇವರು ಹೆಣ್ಣು, ಹೊನ್ನು, ಮಣ್ಣು ಮಾಯೆ ಎಂಬ ವ್ಯಾಖ್ಯೆಯನ್ನು ನಿರಾಕರಿಸುತ್ತಾರೆ. ನೋಡುವ ನೋಟಕನ ಕಣ್ಣಿನಲ್ಲಿ, ಭಾವದಲ್ಲಿ ಇದೆ. ಸ್ತ್ರೀಯ ಮುಂದೆ ಪುರುಷನೆಂಬ ಮಾಯೆ ಕಾಡಿತ್ತು ನೋಡಾ ಎನ್ನುತ್ತಾರೆ ಅಕ್ಕಮಹಾದೇವಿಯವರು. ಪುರುಷನಿಗೆ ಹೆಣ್ಣು ಮಾಯೆಯಾದರೆ ಹೆಣ್ಣಿಗೆ ಪುರುಷನು ಮಾಯೆ.

ತುರುಗೋಳೊಳ್, ಪೆಣ್ಬುಯ್ಯಲೊಳ್ ಕಾದಿ ಗೆಲಿದನ್ ವೀರನ್. ವೀರ ಯಾರು? ಇಂತಹ ಶಾಸನಗಳ ಅಗತ್ಯ ಯಾಕೆ ಬಂತು? ಯುದ್ಧ ಗೆದ್ದ ಸೇನೆ ಮೊದಲು ಮಹಿಳೆಯರ

ಮೇಲೆ ಧಾಳಿಯಿಡುತ್ತಿತ್ತು. ಮಹಿಳೆಯರ ಆಕ್ರಂದನ, ಕಣ್ಣೀರು ಭೂಮಿ ಆಕಾಶವನ್ನು ಒಂದುಮಾಡುತ್ತಿತ್ತು. ಇವತ್ತಿಗೂ ಕನ್ನಡದ ಚಲನಚಿತ್ರಗಳಲ್ಲಿ ಮೇಲಿಂದ ಮೇಲೆ ವೀರ ಯಾರು? ಎಂಬುದನ್ನು ಬಿಂಬಿಸುತ್ತಾರೆ. ಮಹಿಳೆಯರು ದುರಾಚಾರಕ್ಕೆ ಒಳಗಾಗುತ್ತಿರುವಾಗ ವೀರ ಬಂದು ಎಲ್ಲ ಕೇಡಿಗಳಿಗೆ ಹೊಡೆದು ಓಡಿಸುತ್ತಾನೆ. ವೀರ ಯಾರು ಎಂದರೆ ಅಬಲೆಯರನ್ನು ರಕ್ಷಿಸುವವನು. ಮಹಿಳೆಯರು ಅಬಲೆಯರು. ಅವರನ್ನು ಪುರುಷ ರಕ್ಷಿಸಬೇಕು ಎಂದು ತೋರಿಸಲಾಗುತ್ತದೆ. ಇಂತಹ ಮಾದರಿಗಳನ್ನು ತಿರಸ್ಕರಿಸಿ ಮಹಿಳೆಯೇ ಪೊಲೀಸಾಗಿ ಕೇಡಿಗಳಿಗೆ ಇಕ್ಕುವುದನ್ನು ಕನ್ನಡ ಚಲನಚಿತ್ರಗಳು ತೋರಿಸಿದವು. ಈ ಒಂದು ಬದಲಾವಣೆ ಜನಸಾಮಾನ್ಯರಲ್ಲಿ ಒಂದು ಸಂಚಲನ ಉಂಟುಮಾಡಿತು. ಚೆನ್ನೈ ರಾಜ್ಯದಲ್ಲಿ ಧರ್ಮಗುರುಗಳನ್ನೆ ಮಹಿಳಾ ಮುಖ್ಯಮಂತ್ರಿ ಕಾರಾಗೃಹಕ್ಕೆ ಹಾಕಿಸಿದ ಘಟನೆಗಳೂ ನಡೆದವು. ಅಲ್ಲಿ ಮಹಿಳೆ ಅಧಿಕಾರ ಹಿಡಿದಿದ್ದಾರೆ. ಇಲ್ಲಿ ಮಹಿಳೆಯರು ಧಾರ್ಮಿಕವಾಗಿ, ರಾಜಕೀಯವಾಗಿ ಕ್ಷೇಮದಿಂದ ಇದ್ದಾರೆ ಎನ್ನಬಹುದೆ? ಪಶ್ಚಿಮಬಂಗಾಳದಲ್ಲಿ, ರಾಜಸ್ಥಾನದಲ್ಲಿ ಮಹಿಳೆಯರು ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದ್ದಾರೆ. ಮಹಿಳೆ ಪ್ರಬಲಳಾದರೆ ಅಧಿಕಾರಸೂತ್ರವೇ ಕೈಗೆ ಸಿಗುತ್ತದೆ. ದುರ್ಬಲಳಾದರೆ ಕ್ರೌರ್ಯ ನಡೆಯುತ್ತದೆ ಎನ್ನುವ ವಸ್ತುಸತ್ಯ ಇದರಿಂದ ತಿಳಿಯುತ್ತದೆ. ಇಷ್ಟಾದರೂ ಧರ್ಮದ ದ್ವಾರಕ್ಕೆ ಮಹಿಳೆಗೆ ಸುಲಭದ ಪ್ರವೇಶ ಇಲ್ಲ.

ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳೆಯರಿಗೆ, ಹೆಣ್ಣುಮಕ್ಕಳಿಗೆ ಅಸುರಕ್ಷತೆ ಮೇಲಿಂದ ಮೇಲೆ ಸಂಭವಿಸುತ್ತಿದೆ. ಮಹಿಳೆ ಅಸುರಕ್ಷಿತಳು. ಅವಳನ್ನು ಪುರುಷ ರಕ್ಷಿಸಬೇಕು. ಮಹಾಭಾರತ, ರಾಮಾಯಣ ಕೃತಿಗಳು ಇದನ್ನೆ ಹೇಳುತ್ತಿವೆ. ಯಾರು ಮಹಿಳೆಯನ್ನು ಗೌರವದಿಂದ ನಡೆಸಿಕೊಳ್ಳುವುದಿಲ್ಲ ಅಂತಹವರಿಗೆ ತಲೆದಂಡವೇ ಶಿಕ್ಷೆ ಎಂಬುದನ್ನು ಅವು ಅಧಿಕಾರಯುತವಾಗಿ ಹೇಳುತ್ತಿವೆ.

ಕರ್ನಾಟಕದಲ್ಲಿ ಲೋಕಮಹಾದೇವಿ, ತ್ರೈಲೋಕ್ಯಮಹಾದೇವಿ ರಾಣಿಯರು ಪಟ್ಟದಕಲ್ಲು, ಐಹೊಳೆ ದೇವಾಲಯಗಳ ನಿರ್ಮಾಣಕ್ಕೆ ಕಾರಣರಾದರು. ಅಕ್ಕಾದೇವಿ, ಶಾಂತಲದೇವಿ, ಅತ್ತಿಮಬ್ಬೆ ಇವರೆಲ್ಲ ಧಾರ್ಮಿಕ ಕ್ಷೇತ್ರದಲ್ಲಿ ತಮ್ಮ ಬದುಕನ್ನು ಸವೆಸಿದರು. ಕರ್ನಾಟಕದ ಬಹುಪಾಲು ದೇವಾಲಯಗಳು ಈ ಧಾರ್ಮಿಕ ಮಹಿಳೆಯರಿಂದಲೇ ನಿರ್ಮಾಣವಾಗಿವೆ. ಅವರ ಧರ್ಮಶ್ರದ್ಧೆ ದೇವಾಲಯ, ಶಿಲ್ಪಕಲೆಗೆ ಹೊಸ ಹೊಸ ನಿರ್ಮಾಣಗಳಿಗೆ ಪ್ರೇರಣೆಯಾಯಿತು. ದೇವಾಲಯಗಳ ನಿರ್ಮಾತೃ ಮಹಿಳೆಯರು. ಮಹಿಳೆಯರ ಧಾರ್ಮಿಕ ಶ್ರದ್ಧೆ ಮತ್ತು ಭಕ್ತಿಯಿಂದ ನಿರ್ಮಾಣವಾದ ದೇವಾಲಯಗಳೇ ಮುಂದೇನಾದವು? ಮಹಿಳೆಯರು ದೇವಾಲಯ ಪ್ರವೇಶಿಸದಂತೆ ನಿರ್ಬಂಧಿಸಲಾಯಿತು. ಚಾಮುಂಡೇಶ್ವರಿ ಮಹಿಳಾ ದೇವತೆ. ಮಹಿಳೆಯರ ಗರ್ಭಗುಡಿ ಪ್ರವೇಶಕ್ಕೆ ನಿಷೇಧಿಸಲಾಗುತ್ತದೆ. ವಿದೇಶಿ ಮಹಿಳೆಗೆ ಪ್ರವೇಶ ಇಲ್ಲ ಎನ್ನುತ್ತದೆ.



ದೇವಾಲಯಗಳಲ್ಲಿ ದೇವದಾಸಿ ವರ್ಗವನ್ನು ರೂಪಿಸಲಾಯಿತು. ಭಾರತದ ಯಾವ ಧರ್ಮಗಳೂ ಮಹಿಳೆಯ ವಿಚಾರದಲ್ಲಿ ಗೌರವಯುತವಾಗಿ ನಡೆದುಕೊಂಡಿಲ್ಲ. ತುಂಬ ಪ್ರಗತಿಪರ ಧರ್ಮ ಎಂದು ಹೇಳಿಕೊಳ್ಳುವ ಲಿಂಗಾಯತ ಧರ್ಮದಲ್ಲಿ ಅಕ್ಕಮಹಾದೇವಿಯವರನ್ನು ನಿನ್ನ ಪತಿಯ ಹೆಸರು ಹೇಳಿದರೆ ಬಂದು ಕುಳ್ಳಿರು. ಅಲ್ಲದಡೆ ತೊಲಗು ತಾಯಿ ಎಂದು ಹೇಳಲಾಯಿತು. ಇಂತಹ ಘಟನೆಗಳು ಮಹಿಳೆಗೆ ಧರ್ಮದಲ್ಲಿ ಸರಳದಲ್ಲಿ ಗೌರವದ ಸ್ಥಾನಗಳು ದೊರೆಯಲಿಲ್ಲ ಎನ್ನುವ ಸತ್ಯವನ್ನು ಹೇಳುತ್ತವೆ. ಅನುಭವ ಮಂಟಪ ಅನುಭಾವಿಗಳ ವೇದಿಕೆ. ಇಲ್ಲಿ ಮಹಿಳೆಯರೂ ಉತ್ಸಾಹದಿಂದ ಭಾಗವಹಿಸಿದರು. ಶೂನ್ಯಸಂಪಾದನಾಕಾರರು ಅನುಭಾವ ಗೋಷ್ಠಿಯಲ್ಲಿ ಉತ್ತರ ಪ್ರತ್ಯುತ್ತರದ ಚರ್ಚೆಯನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲಿನ ಧ್ವನಿ ಏನು? ಪುರುಷನಿಗೆ ಸಿಕ್ಕಂತೆ. ಮಹಿಳೆಗೆ ಸುಲಭದ ಪ್ರವೇಶ ಇಲ್ಲ ಎನ್ನುವ ಪುರುಷ ಮನೋಭಾವ ನಿರ್ಬಂಧದ ನಿಯಮಗಳನ್ನು ಅದು ವಿವರಿಸುತ್ತದೆ.

ಇಲ್ಲಿ ಮುಂಗಟ್ಟೆ ಮತ್ತು ಪಿಕಳಾರ ಪಕ್ಷಿಗಳ ಜೀವನದ ಉದಾಹರಣೆ ಕೊಡಲಿಚ್ಛಿಸುತ್ತೇನೆ. ಅವು ಸತ್ಯಹರಿಶ್ಚಂದ್ರ ಮಹಾರಾಜನಂತೆ ಏಕಪತ್ನಿವ್ರತಸ್ಥ ಹಕ್ಕಿಗಳು. ಜೋಗ ಜಲಪಾತದಲ್ಲಿ ನಮ್ಮ ಮಠದ ಮುಂದೆ ಕೆಲವು ಎತ್ತರದ ಮರಗಳಿವೆ. ಕೊಕ್ಕರೆಯನ್ನು ಹೋಲುವ ಮುಂಗಟ್ಟೆ ಎನ್ನುವ ಹಕ್ಕಿ ಇದೆ. ಇದು ಬೂದಿ ಬಣ್ಣದ ಕಪ್ಪು ಹಕ್ಕಿ. ಇದರ ಕೊಕ್ಕು ಗಿಣಿ ಕೊಕ್ಕಿನಂತೆ ಬಾಗಿದೆ. ಆದರೆ ಇದು ದಪ್ಪ ಕೊಕ್ಕು. ಗಿಣಿ ಕೊಕ್ಕಿನಂತೆ ಕೆಂಪು ಇಲ್ಲ. ಇದರ ಧ್ವನಿ ನವಿಲಿನ ಧ್ವನಿಯಂತೆ ವಿಕಾರ. ಜೋಡಿ ಹಕ್ಕಿಗಳು ಕೂಡಿ ಮರದ ಎತ್ತರದಲ್ಲಿ ಗೂಡು ಮಾಡುತ್ತವೆ. ತಾಯಿ ಹಕ್ಕಿ ಗೂಡಿನಲ್ಲಿ ಮೊಟ್ಟೆಯಿಟ್ಟು ಕೂಡುತ್ತದೆ. ಗಂಡು ಹಕ್ಕಿ ಈ ಹೆಣ್ಣು ಹಕ್ಕಿಯ ಕಣ್ಣು, ಕೊಕ್ಕು ಮಾತ್ರ ಕಾಣುವಂತೆ ಗೂಡನ್ನು ಮೇಣದಿಂದ ಮುಚ್ಚುತ್ತದೆ. ಆ ಹೆಣ್ಣು ಹಕ್ಕಿ ತಾನಿಟ್ಟ ಮೊಟ್ಟೆಗೆ ಕಾವು ಕೊಡುತ್ತ ಮೂರು ತಿಂಗಳು ಅದೇ ಗೂಡಲ್ಲಿ ಕುಳಿತಿರುತ್ತದೆ. ಗಂಡು ಹಕ್ಕಿ ಆಹಾರವನ್ನು ಪ್ರತಿ ದಿನ 200 ರಿಂದ 300 ಸಲ ಹೆಣ್ಣು ಹಕ್ಕಿಗೆ ತಂದು ಕೊಡುತ್ತದೆ. ಅಕಸ್ಮಾತ್ ಈ ಗಂಡು ಹಕ್ಕಿಯನ್ನು ಯಾರಾದರೂ ಬೇಟೆಗಾರರು, ದೊಡ್ಡ ಪಕ್ಷಿಗಳು ಕೊಂದರೆ ಆ ಹೆಣ್ಣು ಹಕ್ಕಿ ಅದರ ಮೊಟ್ಟೆ ಅಥವಾ ಮರಿ ಆಹಾರವಿಲ್ಲದೆ ಗೂಡಿನಲ್ಲಿ ಸತ್ತುಹೋಗುತ್ತದೆ. ಈ ಗಂಡು ಹಕ್ಕಿ ತನ್ನ ಪ್ರಾಣಸಂರಕ್ಷಣೆಯನ್ನು ಮಾಡಿಕೊಂಡು ತನ್ನ ಸಂಗಾತಿ ಹಕ್ಕಿಗೆ ನಿರಂತರವಾಗಿ ಆಹಾರ ತಂದು ಕೊಡುತ್ತದೆ. ಒಳಗಿರುವ ಮೊಟ್ಟೆ ಮರಿ ಆದ ಮೇಲೆ ಗೂಡನ್ನು ತುಸು ರಂಧ್ರಮಾಡಿ ಮರಿ ಹಕ್ಕಿಯೂ ಹೊರಗೆ ಮೂತಿ ಇಡುವಂತೆ ಮಾಡುತ್ತದೆ. ಈ ಎರಡೂ ಪಕ್ಷಿಗಳಿಗೆ ಗಂಡು ಹಕ್ಕಿ ಆಹಾರ ತಂದು ಸಾಕುತ್ತದೆ. ಮರಿ ರೆಕ್ಕೆ ಬಲಿತ ಮೇಲೆ ಮೂರೂ ಪಕ್ಷಿಗಳು ಕೂಡಿ ಹಾರುತ್ತವೆ. ಇದು ಕೊಕ್ಕರೆಯನ್ನು ಹೋಲುವ ಮುಂಗಟ್ಟೆ ಹಕ್ಕಿಯ ಕೌಟುಂಬಿಕ ಜೀವನ. ಅವು

ಜೋಡಿಯಾದವು. ನಂತರ ಸಂತಾನ, ಸಂಗಾತಿಯನ್ನು ಜೋಪಾನ ಮಾಡುವ ಜವಾಬ್ದಾರಿ ಗಂಡು ಹಕ್ಕಿಯದು. ಈ ಗಂಡು ಹಕ್ಕಿಯು ತನಗೆ ಸ್ವಾತಂತ್ರ್ಯವಿದೆ. ಕಾಡಿನಲ್ಲಿ ಬೇಕಾದ ಹೆಣ್ಣು ಹಕ್ಕಿಗಳಿವೆ ಎಂದು ಇನ್ನೊಂದು ಸಂಗಾತಿ ಪಕ್ಷಿಯನ್ನು ಹುಡುಕಿಕೊಂಡು ಹೋಗುವುದಿಲ್ಲ. ಜವಾಬ್ದಾರಿಯಿಂದ ನಡೆದುಕೊಳ್ಳುತ್ತದೆ. ಕಾಡಿನಲ್ಲಿ ಬೇಕಾದಷ್ಟು ಹೆಣ್ಣು ಪಕ್ಷಿಗಳಿದ್ದರೂ ಇನ್ನೊಂದು ಹಕ್ಕಿ ಇದಕ್ಕೆ ಜೋಡಿಯಾಗುವುದಿಲ್ಲ. ನೀನು ಸಂಸಾರಸ್ತ. ನಿನ್ನ ಸಂಗಾತಿ ಮತ್ತು ನಿನ್ನ ಮರಿಯನ್ನು ಸಾಕುವುದು ನಿನ್ನ ಜವಾಬ್ದಾರಿ ಎಂದು ಅವು ಒಪ್ಪಂದ ಮಾಡಿಕೊಂಡಂತೆ ನಡೆದುಕೊಳ್ಳುತ್ತವೆ. ಅಲ್ಲಿ ಕೋರ್ಟು, ಪೊಲೀಸು ಏನೂ ಇಲ್ಲ. ಆದರೂ ಈ ಪಕ್ಷಿಗಳು ಜವಾಬ್ದಾರಿಯಿಂದ ಬಹಳ ಸಂತೋಷದಿಂದ ಜೀವನ ಮಾಡುತ್ತವೆ. ಈ ಬಾಳುವೆಯನ್ನು ಯಾವ ಧರ್ಮಗಳೂ ಕಲಿಸಿಲ್ಲ. ಅವು ಪ್ರಕೃತಿಯಲ್ಲಿ ಜೀವನ ಮಾಡುತ್ತ ಕಲಿತಿವೆ. ಅವು ಪ್ರೀತಿ, ಪ್ರೇಮಕ್ಕೆ ಕೊಟ್ಟ ಮೌಲ್ಯ ದೊಡ್ಡದು. ಹಕ್ಕಿಗಳ ಜೀವನ ಮನುಷ್ಯನಿಗಿಂತ ಉನ್ನತದ ಜೀವನ.

ಪಿಕಳಾರ ಕಾಡಿನ ಗುಬ್ಬಚ್ಚಿ ಎನ್ನಬಹುದು. ಅವು ದಿನಾ ನಮ್ಮ ಕಣ್ಣಿಗೆ ಬೀಳುತ್ತವೆ. ಅವು ಜೋಡಿಯಾದ ಮೇಲೆ ನಾಳಿನ ಸಂಸಾರದ ಬಗೆಗೆ ಚಿಂತನೆ ಮಾಡುತ್ತವೆ. ಎರಡೂ ಕೂಡಿ ಯೋಗ್ಯ ಸ್ಥಳದಲ್ಲಿ ಗೂಡು ಕಟ್ಟುತ್ತವೆ. ಹಾವು, ಬೆಕ್ಕು, ಹದ್ದು, ಗರುಡ, ಇಣಚಿ, ಕಾಡುಬೆಕ್ಕು ಮುಂತಾದ ಜೀವಿಗಳು ಬರಲಾರದ ಸ್ಥಳವನ್ನು ಅವು ಆಯ್ಕೆ ಮಾಡುತ್ತವೆ. ಮಳೆ, ಬಿರುಗಾಳಿಗೂ ರಕ್ಷಿತವಾದ ಸ್ಥಳ ಹುಡುಕುತ್ತವೆ. ಪಿಕಳಾರ ದಿನಕ್ಕೊಂದರಂತೆ ಪುಟ್ಟ ಗೋಲಿಯಾಕಾರದ ಮೂರು ಬಿಳಿ ಮೊಟ್ಟೆಗಳನ್ನು ಇಡುತ್ತದೆ. ತಾಯಿ ಹಕ್ಕಿ ತನ್ನ ಮೊಟ್ಟೆಗಳಿಗೆ ಕಾವು ಕೊಡಬೇಕಿರುವುದರಿಂದ ಗಂಡು ಹಕ್ಕಿ ಹೆಚ್ಚು ಕೆಲಸ ಮಾಡುತ್ತದೆ. ನಸುಕು ಹರಿದಂತೆಲ್ಲ ಆಹಾರ ತಂದುಕೊಡಲು ಆರಂಭಿಸುತ್ತದೆ. ಮೂರು ಮೊಟ್ಟೆಗಳು ಮರಿಯಾದ ಮೇಲೆ ತಂದೆ, ತಾಯಿ ಎರಡು ಹಕ್ಕಿಗಳೂ ತಮ್ಮ ಮರಿಗಳಿಗೆ ಆಹಾರ ತಂದುಕೊಡುತ್ತವೆ. ಈ ಜೋಡಿ ಹಕ್ಕಿಗಳು ತಮ್ಮ ಈ ಮರಿಗಳಿಗೆ ದಿನಕ್ಕೆ 90/100ರ ಆಸುಪಾಸಿನಲ್ಲಿ ಆಹಾರ ತಂದುಕೊಡುತ್ತವೆ. ಅವು ಬೆಳೆಗಳ ಮೇಲೆ ಬರುವ ಕ್ರಿಮಿಕೀಟಗಳನ್ನು ಹಿಡಿದು ತರುತ್ತವೆ. ತಮ್ಮ ಕೊಕ್ಕಿನಲ್ಲಿ ನುರಿಸಿ ನುರಿಸಿ ತಮ್ಮ ಮರಿಗಳ ಬಾಯೊಳಗೆ ಇಡುತ್ತವೆ. ಈ ಹಕ್ಕಿಗಳು ಎರೆಹುಳುವಿನಂತೆ ರೈತನ ಮಿತ್ರ. ತಾವೂ ಚೆಂದ ಬದುಕುವ ಮೂಲಕವೇ ಮನುಷ್ಯನ ಬೆಳೆಗಳನ್ನು ಸಂರಕ್ಷಣೆ ಮಾಡುತ್ತವೆ. ಯಾವ ಪೊಲೀಸು, ಆಸ್ಪತ್ರೆ, ಶಾಲೆ, ಆಹಾರ ಇಲಾಖೆ, ಬಿ.ಡಿ.ಎ. ಇಲಾಖೆಯ ಉಸಾಬರಿ ಇಲ್ಲದೆ ಕೋಟ್ಯಾಂತರ ಪಕ್ಷಿಗಳು ಚೆಂದ ಜೀವನ ನಡೆಸಿವೆ. ಮನುಷ್ಯ ನಾನು ಬಹಳ ಅಡ್ವಾನ್ಸ್ಡ್, ಫಾಸ್ಟ್ ಎಂದೆಲ್ಲ ಕೊಚ್ಚಿಕೊಳ್ಳುತ್ತಾನೆ. ಧರ್ಮಕ್ಕೆ ಬದ್ಧನಾದ ಮನುಷ್ಯನು ಏನಾಗಿದ್ದಾನೆ? ಧರ್ಮ ನಮ್ಮನ್ನೇನು ಮಾಡಿದೆ? ನಿಸರ್ಗದ ಕಡೆಗೆ ನೋಡಬೇಕು. ನಿಸರ್ಗದಲ್ಲಿ ಇರುವೆ, ಜೇನುನೊಣಗಳ ಸಮಾಜ ರಚನೆಯಲ್ಲಿ



ಬಹಳ ದೋಷವಿದೆ. ಇಲ್ಲೆಲ್ಲ ಗಂಡು ಹುಳು ದುರ್ಬಲ ಹೆಣ್ಣು ಹುಳುಗಳೇ ರಾಣಿ. ಮಿಗಿಲಾಗಿ ಎಲ್ಲವೂ ಹೆಣ್ಣುಸಂತಾನವೆ. ಗಂಡುಸಂತಾನವು ವಂಶಾಭಿವೃದ್ಧಿಗಾಗಿ ಸೃಷ್ಟಿ ಮಾಡಿಕೊಂಡು ಅಗತ್ಯ ಮುಗಿದ ಮೇಲೆ ಗಂಡು ಹುಳುವನ್ನು ಕೊಂದು ತಿಂದುಬಿಡುತ್ತದೆ. ಸೈನಿಕ, ಗೂಢಚಾರ, ಸೇವಕ ಎಲ್ಲವೂ ಹೆಣ್ಣುಹುಳುಗಳೇ ಇರುತ್ತವೆ. ರಾಣಿಯ ಇಚ್ಛೆಯಂತೆ ಗೂಡು ಜೀವನ ನಿರ್ಧಾರವಾಗುತ್ತದೆ. ಮಾನವ ಸಮಾಜದಲ್ಲಿ ಕೂಡ ಇದೇ ಅಸಮಾನತೆಯು ತುಂಬಿ ತುಳುಕುತ್ತಿದೆ. ಪುರುಷ ಪುರುಷನಿಗೆ ಸಮಾನತೆ ಕೊಡುವುದಿಲ್ಲ. ಮಹಿಳೆಗಂತೂ ಕೊಡುವುದೇ ಇಲ್ಲ. ಲಿಂಗ ಅಸಮಾನತೆ ಥಾಳಾಗಿದೆ. ಅಸ್ತಿತ್ವಕ್ಕಾಗಿ ಹೋರಾಟ ಇದು ನಿಸರ್ಗದಲ್ಲಿ ನಿರಂತರ ಇರುವಂಥದೇ. ಹೋರಾಟವೇ ಜೀವನವಾಗಿರುತ್ತದೆ. ಇಂತಹ ಲಿಂಗ ಅಸಮಾನತೆಯ ಕೆಲವು ಉದಾಹರಣೆಗಳು ಇವು.

ಸಾಹಿತಿಗಳು, ವಿದ್ವಾಂಸರೂ ಆದ ಡಾ. ಪ್ರಭುಶಂಕರರ ಬರವಣಿಗೆ. 1954ರ ಸಮಯದಲ್ಲಿ ನನಗೆ ಅಮೇರಿಕನ್ ಮಹಿಳೆಯೊಬ್ಬರ ನಿಕಟವಾದ ಪರಿಚಯವಾಯಿತು. ಅವರನ್ನು ಚಾಮುಂಡಿ ಬೆಟ್ಟಕ್ಕೆ ಕರೆದುಕೊಂಡು ಹೋಗುವ ಕೆಲಸ ನನ್ನ ಪಾಲಿಗೆ ಬಂತು. ಶ್ರೀಮತಿ ಸರಳಾ ಬೋಸ್ ಎಂದು ಅವರ ಹೆಸರು. ಅಮೇರಿಕದಲ್ಲಿ ನೆಲೆಸಿರುವ ಭಾರತೀಯರು. ಸ್ನಾನ ಮಾಡಿ ಶುಭ್ರವಸನಧಾರಿಣಿಯಾಗಿ ಆಕೆ ದೇವಾಲಯವನ್ನು ಪ್ರವೇಶಿಸುವ ಸಮಯದಲ್ಲಿ ಪೂಜಾರಿಯೊಬ್ಬರು ಆಕೆಯನ್ನು ಬಾಗಿಲ ಬಳಿ ತಡೆದರು. ಇವರು ವಿದೇಶೀಯರು, ಒಳಕ್ಕೆ ಬರುವಂತಿಲ್ಲ ಎಂದು ಕನ್ನಡದಲ್ಲಿ ಹೇಳಿದರು. ಆಕೆ ವಿಷಯವನ್ನು ನನ್ನಿಂದ ತಿಳಿದು ಹೀಗೆ ಹೇಳಿದರು. ಅವರಿಗೆ ತಿಳಿಸಿ. ಅವರು ಹಾಕಿರುವ ಜನಿವಾರ ಅವರು ಎಂದೂ ತೊಳೆದಂತೆ ಕಾಣೆ. ಅದು ಕೊಳೆತು ನಾರುತ್ತಿದೆ. ನಾನು ಎಷ್ಟೋ ಸ್ವಚ್ಛವಾಗಿದ್ದೇನೆ. ಹೀಗೆಂದು ಹೇಳಿ ಆ ಮಡಿಯ ಮನುಷ್ಯನನ್ನು ಒಂದು ಕಡೆಗೆ ನೂಕಿ ಗಂಭೀರವಾಗಿ ಒಳಕ್ಕೆ ಬಂದು ದೇವಿಯ ದರ್ಶನ ಮಾಡಿದರು. (ಪುಟ 14, ಅಮೇರಿಕದಲ್ಲಿ ನಾನು ಶಾಂತಿ, ಪ್ರಭುಶಂಕರ, 10ನೆಯ ಮುದ್ರಣ 2013, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು 570004)

ಒಡಿಸ್ಸಾದ ಜಗನ್ನಾಥ ದೇವಾಲಯಕ್ಕೆ ದೇಶದ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಪ್ರವೇಶಿಸಲು ಹೋದಾಗ ಪ್ರವೇಶ ನಿಷೇಧಿಸಲಾಯಿತು. ದೇಶದ ಪ್ರಧಾನಮಂತ್ರಿ ಈ ವ್ಯವಸ್ಥೆಯನ್ನು ಒಪ್ಪಿಕೊಂಡರು. ಹಾಗಾದರೆ ಈ ವ್ಯವಸ್ಥೆಯನ್ನು ಬದಲಿಸುವವರು ಯಾರು?

□

# ಕೊಂಡಗುಳಿ ಕೇಶಿರಾಜನ ಶೀಲಮಹತ್ವದ ಕಂದ

**ಡಾ. ಆರ್. ರಾಮಕೃಷ್ಣ**

ಕೊಂಡಗುಳಿ ಕೇಶಿರಾಜ ವೀರಶೈವ ಕವಿ. ಈತನ ಕಾಲ ಸು. 1150. ಕಲಬುರ್ಗಿ ಜಿಲ್ಲೆ ಜೇವರಗಿ ತಾಲ್ಲೂಕಿನಲ್ಲಿಯ ಜಾಡಕೊಂಡಗುಳಿ ಇವನ ಜನ್ಮಸ್ಥಳ. ಕೇಶಿರಾಜನು ವಾಜಿಕುಲ ವಂಶಸ್ಥ. ತಂದೆ ನಿಂಬಣಯ್ಯ; ಕಲ್ಯಾಣ ಚಾಲುಕ್ಯ ಅರಸರಲ್ಲಿ ಪ್ರಧಾನ ದಂಡಾಧೀಶನಾಗಿದ್ದವನು. ತಾಯಿ ದುರ್ಗಾದೇವಿ; ಗುರು ವಿರೂಪಾಕ್ಷ; ಇಷ್ಟದೈವ ಸೋಮನಾಥ. ಆದುದರಿಂದಲೇ ತನ್ನ ಕೃತಿಗಳಲ್ಲಿ ಸೋಮನಾಥನನ್ನು ಭಕ್ತಿಯಿಂದ ಸ್ಮರಿಸಿದ್ದಾನೆ. ಈತನ ಹೆಂಡತಿ ಗಂಗಾದೇವಿ, ಮಹಾಶಿವಭಕ್ತೆ. ವೀರಶೈವ ಧರ್ಮದ ಅನುಸಂಧಾನಿ. ಶಿವನನ್ನು ಆರಾಧಿಸುತ್ತ ಬದುಕನ್ನು ನಿಭಾಯಿಸಬೇಕೆಂಬುದೇ ಈ ದಂಪತಿಗಳ ಸಾರಸಂಸಾರದ ಮರ್ಮ. ಬದುಕಿನ ನಶ್ವರತೆಯನ್ನು ಬದುಕಿನ ನಿಷ್ಠೆಯಾಗಿ ಪರಿವರ್ತಿಸಿಕೊಳ್ಳಬೇಕೆಂಬುದು ಕೇಶಿರಾಜನ ನಿಲುವು.

ಕೇಶಿರಾಜನ ಹೆಸರಿನ ಹಿಂದೆ ಅವನ ಮೂಲಸ್ಥಳದ ಹೆಸರು ಸೇರಿಕೊಂಡಿದೆ. ಕೊಂಡಗುಳಿ ಕೇಶಿರಾಜನೆಂದೇ ಈ ಶಿವಭಕ್ತ ಪ್ರಸಿದ್ಧನಾಗಿದ್ದಾನೆ. 'ಕೊಂಡಗುಳಿ' ಎನ್ನುವುದು 'ಅಗ್ನಿಕುಂಡ' ಎನ್ನುವುದರ ಪರ್ಯಾಯರೂಪ. ಹನ್ನೊಂದನೆಯ ಶತಮಾನದಲ್ಲಿ ಕೊಂಡಗುಳಿ ಅಗ್ರಹಾರವಾಗಿತ್ತು. ಬ್ರಾಹ್ಮಣರು ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ಯಜ್ಞಯಾಗಾದಿಗಳು ನಡೆಯುತ್ತಿತ್ತು. ಯಜ್ಞಗಳನ್ನು ಮಾಡುವುದಕ್ಕಾಗಿ ತೋಡಿದ ಕುಂಡಗಳ ಕಾರಣದಿಂದಾಗಿ, ಆ ಸ್ಥಳವು 'ಕೊಂಡಗುಳಿ' ಎಂದು ಹೆಸರಾಯಿತು.

ಚಾಲುಕ್ಯ ಸಾಮ್ರಾಜ್ಯದ ವಿಕ್ರಮಾದಿತ್ಯನು ಚಕ್ರವರ್ತಿ ಪಟ್ಟವನ್ನು ಸ್ವೀಕರಿಸಿದ ತರುವಾಯ ತನಗೆ ಯೋಗ್ಯನಾದ ದಂಡನಾಯಕನನ್ನು ಹುಡುಕುತ್ತಿರುತ್ತಾನೆ. ಇವನ ಆಸ್ಥಾನದ ಗಣ್ಯರ ಸಲಹೆಯಂತೆ ಕೇಶಿರಾಜನನ್ನು ಮಂತ್ರಿಯಾಗಿ ನೇಮಿಸಿಕೊಂಡ. ಅಂದಿನಿಂದ ಕೇಶಿರಾಜನಿಗೆ ದಣ್ಣಾಯಕ ಎಂಬ ಬಿರುದು ಲಭ್ಯವಾಯಿತು. ಸ್ವಲ್ಪ ಸಮಯದಲ್ಲಿಯೇ ತನ್ನ ಆಡಳಿತದ ವೈಖರಿಯಿಂದಲೂ ಶಿವಕಾರ್ಯಗಳಿಂದಲೂ ಕೇಶಿರಾಜನು ವಿಕ್ರಮಾದಿತ್ಯನಿಗೆ ತುಂಬ ಹತ್ತಿರದವನಾಗುತ್ತಾನೆ. ಇವನು ನಿರ್ವಹಿಸಿದ ಕೆಲವು ಮಹತ್ವದ ಹುದ್ದೆಗಳೆಂದರೆ: ಹಿರಿಯ ಪ್ರಧಾನಿ, ದಂಡನಾಯಕ, ಮಹಾದಂಡನಾಯಕ, ಸಂಧಿವಿಗ್ರಹಿ, ಸಾಮಂತಾಧಿಪತಿ.



ಕೇಶಿರಾಜ ರಾಜನೀತಿವಿಶಾರದನೂ, ಸಕಲಶಾಸ್ತ್ರಪಂಡಿತನೂ ಆಗಿದ್ದರಿಂದ ಇವನ ಆಡಳಿತ ಜನಪ್ರಿಯವಾಗತೊಡಗಿತು. ಶಿವಭಕ್ತನಾಗಿ ಶರಣರ ತತ್ತ್ವಗಳನ್ನು ಈತ ಪ್ರಚುರಪಡಿಸುತ್ತಿದ್ದುದರಿಂದ ಅಸೂಯಾಪರರಾದ ಕೆಲವರು ಅಸಮಾಧಾನಗೊಂಡು ರಾಜನಲ್ಲಿ ಇಲ್ಲಸಲ್ಲದ ಚಾಡಿಯನ್ನು ಹೇಳಿದರು. ಇದರಿಂದ ಕೇಶಿರಾಜನಿಗೂ ರಾಜನಿಗೂ ವಿರಸವುಂಟಾಯಿತು. ಕೇಶಿರಾಜ ಮಂತ್ರಿ ಪದವಿಯನ್ನು ತೊರೆದು ತನ್ನ ಸ್ವಗ್ರಾಮಕ್ಕೆ ತೆರಳಿದ. ತನ್ನ ತಪ್ಪನ್ನರಿತ ದೊರೆ ಕ್ಷಮಾಪಣೆ ಕೇಳಿ ರಾಜಧಾನಿಗೆ ಹಿಂತಿರುಗುವಂತೆ ಕರೆ ಕಳುಹಿಸಲು, ಅದನ್ನು ವಿನಯಪೂರ್ವಕವಾಗಿ ನಿರಾಕರಿಸಿದ. ಭೀಮಾ ನದಿಯಲ್ಲಿ ಬಿದ್ದ ಇಷ್ಟಲಿಂಗವನ್ನು ಕರಸ್ಥಳಕ್ಕೆ ಬರುವಂತೆ ಮಾಡಿದ್ದು ಈತ ಮಾಡಿದ ಪವಾಡವೆನ್ನಲಾಗಿದೆ. ಕೊಂಡಗುಳಿಯಲ್ಲೇ ಇರುವ ಶಿವಲಿಂಗದಲ್ಲಿ ಐಕ್ಯವಾದ ನೆಂಬುದು ಜನಪದ ನಂಬಿಕೆ. ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಮತ್ತಿತರ ವೀರಶೈವ ಗ್ರಂಥಗಳಲ್ಲಿ ಈತನ ವಿಚಾರವಾಗಿ ಅನೇಕ ಉಲ್ಲೇಖಗಳಿವೆ. ಶಿಕಾರಿಪುರದ 119 ಮತ್ತು 123ನೆಯ ಶಾಸನಗಳಲ್ಲಿ ಇವನನ್ನು ಕುರಿತ ಮಾಹಿತಿಗಳು ಲಭ್ಯವಾಗುತ್ತವೆ.

ಕೇಶಿರಾಜನ ಕಾಲದ ಕನ್ನಡ ಸಾಹಿತ್ಯವು ರಾಜಾಶ್ರಯದ ಸೊತ್ತಾಗಿತ್ತು. ಆದರೆ ಕೇಶಿರಾಜನು ಅದಕ್ಕೆ ಭಿನ್ನವಾಗಿ ನಿಂತು ಕೃತಿರಚನೆ ಮಾಡಿದ್ದು ಒಂದು ಬಗೆಯ ಕ್ರಾಂತಿಯೇ ಆಗಿದೆ. ರಾಜಾಶ್ರಯದಲ್ಲಿದ್ದೂ ತನ್ನ ಸಾಹಿತ್ಯ ಕೃಷಿಯನ್ನು ರಾಜನ ಹೊಗಳಿಕೆಗಾಗಿ ಮೀಸಲಾಗಿ ಇರಿಸದಿದ್ದುದು ಒಂದು ಸೋಜಿಗ.

**ಕೇಶಿರಾಜನು ಒಟ್ಟು ಏಳು ಕೃತಿಗಳನ್ನು ರಚಿಸಿದ್ದಾನೆ**

1. ಮಂತ್ರಮಹತ್ವದ ಕಂದ
2. ಲಿಂಗಸ್ತೋತ್ರದ ಕಂದ- ಒಂದು
3. ಲಿಂಗಸ್ತೋತ್ರದ ಕಂದ-ಎರಡು
4. ಕೇಶಿರಾಜ ದಣ್ಣಾಯಕರ ಕಂದ
5. ಶೀಲಮಹತ್ವದ ಕಂದ
6. ಅಳಲಾಷ್ಟಕ ಮತ್ತು
7. ನವರತ್ನಮಾಲಾ

ಈ ಕೃತಿಗಳ ಪೈಕಿ ಶೀಲಮಹತ್ವದ ಕಂದವನ್ನು ಪರಿಚಯಿಸುವುದು ಈ ಲೇಖನದ ಪ್ರಮುಖ ಉದ್ದೇಶ. ಇದಕ್ಕೆ ಮುಖ್ಯ ಕಾರಣ, ವೀರಶೈವರಲ್ಲದವರಿಗೂ ಈ ಕೃತಿಯ ಕೆಲವು ವಿಚಾರಗಳು ಅನುಸರಣೀಯವೆನಿಸುತ್ತವೆ.

ಶೀಲಮಹತ್ವದ ಕಂದ ಕೃತಿಯಲ್ಲಿ ಒಟ್ಟು ನೂರೊಂದು ಕಂದಪದ್ಯಗಳಿವೆ. ಕೃತಿಯು ಗುರುಸ್ತುತಿಯಿಂದ ಪ್ರಾರಂಭಗೊಂಡು ಅಂತಿಮವಾಗಿ "ಕೇಶಿರಾಜ ದಣ್ಣಾಯಕರು

ನಿರೂಪಿಸಿದ ಕಂದ ಸಮಾಪ್ತ ಮಂಗಳ ಮಹಾ ಶ್ರೀಶ್ರೀಶ್ರೀ" ಎಂದು ಮುಗಿಯುತ್ತದೆ. ಕೇಶಿರಾಜನು ಹೇಳಿರುವ ಶೀಲಗಳು ವೀರಶೈವ ಸಾಧಕರಿಗೆ ಅವಶ್ಯಕವಾದವು. ಶೀಲಗಳನ್ನು ಬಿಡದೆ ಅವನ್ನು ಶ್ರದ್ಧೆಯಿಂದ ನಡೆಸಬೇಕೆಂಬುದು ಕೇಶಿರಾಜನ ಅಭಿಮತ.

**ಕೃತಿಯಲ್ಲಿ ಉಲ್ಲೇಖಗೊಂಡಿರುವ ಶೀಲಗಳಿವು**

1. ತನ್ನ ಮನೆ, ದನ, ಮನೆಯೊಳಗಿನ ಎಲ್ಲ ವಸ್ತುಗಳಿಗೆ ಲಿಂಗಮುದ್ರೆಯನ್ನು ಹಾಕಿಸಬೇಕು.
2. ಸತಿ-ಪತಿ ಸಮರಸದಿಂದ ಧರ್ಮವನ್ನು ಆಚರಿಸಬೇಕು.
3. ತನ್ನ ಆಚಾರವನ್ನು ತಾನೇ ಆಚರಿಸಬೇಕು.
4. ಅಂತರಂಗಶುದ್ಧನಾಗಿ ಧರ್ಮಾಚಾರದಲ್ಲಿ ಶ್ರದ್ಧೆ ಭಕ್ತಿಯಿಂದ ನಡೆಯಬೇಕು.
5. ಗರ್ಭಕ್ಕೆ ಲಿಂಗಧಾರಣೆ ಮಾಡಿಸಬೇಕು.
6. ಜಂಗಮದ ಪಾದತೀರ್ಥಾದಿಗಳನ್ನು ಇಷ್ಟಲಿಂಗಕ್ಕೆ ಅರ್ಪಿಸಿ ಸ್ವೀಕರಿಸುವುದು
7. ಗುರು-ಲಿಂಗ-ಜಂಗಮ ಇವರನ್ನು ಸಮಭಾವದಿಂದ ಕಾಣಬೇಕು.
8. ಲಿಂಗಪೂಜೆ ಪ್ರಸಾದಕ್ಕಾಗಿ ಬಾವಿನೀರನ್ನು ಮಂತ್ರಶುದ್ಧಿಯಿಂದ ಬಳಸಬೇಕು.
9. ಶಿವಾರ್ಚನೆಯ ಅಭಿಷೇಕಕ್ಕಾಗಿ ಆಕಳ ಹಾಲನ್ನು ಬಳಸಬೇಕು.
10. ತನ್ನ ಉಪಯೋಗದ ಪಾತ್ರೆ ವಸ್ತ್ರಾದಿಗಳನ್ನು ಶಿವಭಕ್ತನಿಂದಲೇ ಶುದ್ಧಿ ಮಾಡಿಸಿಕೊಳ್ಳಬೇಕು.
11. ತನ್ನ ಮಗು-ಹಸು ಮೊದಲಾದವುಗಳಿಗೆಲ್ಲ ಲಿಂಗವಂತನು ಲಿಂಗವನ್ನು ಧಾರಣ ಮಾಡಿಸಬೇಕು.
12. ತನ್ನ ಹಸುವನ್ನು ಶಿವಭಕ್ತನೇ ಕಾಯಬೇಕು; ಉಪಚರಿಸಬೇಕು.
13. ಬೇರೆ ಬೇರೆ ಕಡೆಗಳಿಂದ ಹರಿದು ಬಂದ ನೀರನ್ನು ಬಳಸಬಾರದು.
14. ಹಸುವಿನ ಸಗಣಿಯಿಂದ ಭಸ್ಮ ಮಾಡಿ ಧರಿಸಬೇಕು.
15. ಚರ್ಮದ ವಸ್ತುಗಳನ್ನು ಬಳಸದೆ, ನೂಲಿನಿಂದ ತಯಾರಿಸಿದ ವಸ್ತುಗಳನ್ನು ಬಳಸಬೇಕು.
16. ತಮ್ಮ ಇಷ್ಟಲಿಂಗಕ್ಕೆಂದು ಬಳಸುವ ಪಾತ್ರೆಗಳನ್ನು ತನ್ನ ಮನೆಯಲ್ಲೇ ತಯಾರಿಸಿ, ಲಿಂಗಮುದ್ರೆ ಹಾಕಿಸುವುದು.
17. ಅಂಗವಸ್ತ್ರ-ಲಿಂಗವಸ್ತ್ರಗಳನ್ನು ಲಿಂಗಮುದ್ರೆಯ ಬಾವಿಯಲ್ಲಿಯ ನೀರಲ್ಲೇ ಒಗೆಯಬೇಕು.
18. ಚರ್ಮದ ಪಾದುಕೆಗಳನ್ನು ಧರಿಸಬಾರದು.
19. ತೋಟಕ್ಕೆ, ತೋಟದ ಬಾವಿಗೆ ಭವಿಯ ದೃಷ್ಟಿ ತಾಕದಂತೆ ಜಾಗೃತರಾಗಿರಬೇಕು.



20. ಶಿವಭಕ್ತರಿರುವ ಗ್ರಾಮದಲ್ಲಿ ವಾಸ ಮಾಡಬೇಕು, ಭೂಮಿಗೆ ಲಿಂಗಮುದ್ರೆ ಹಾಕಿಸಬೇಕು, ಶಿವಭಕ್ತರಿಂದಲೇ ಭೂಮಿಯ ಸಾಗುವಳಿ ನಡೆಯಬೇಕು.
21. ಯಾವುದೇ ಕೆಲಸಕ್ಕೂ ಚರ್ಮವನ್ನು ಬಳಸಬಾರದು.
22. ಗುರು-ಲಿಂಗ-ಜಂಗಮರನ್ನು ಶಿವನೆಂದು ಭಾವಿಸಿ ಸೇವೆ ಮಾಡಬೇಕು.
23. ಭವಿಯೊಡನೆ ಸಂಬಂಧ ಇರಿಸಿಕೊಳ್ಳಬಾರದು.
24. ಭವಿಯ ಮಾತು, ಭವಿಯ ಹೊಗಳಿಕೆ, ಭವಿಯ ದೈವ, ಭವಿಯ ಸಂಗಸ್ಪರ್ಶ, ಭವಿಯ ವಸ್ತು ಇವೆಲ್ಲವನ್ನೂ ತ್ಯಜಿಸಬೇಕು.
25. ಶಿವ, ಶಿವಭಕ್ತರು, ಶಿವಮಂತ್ರ, ಶಿವಾನುಭವವೇ ಘನವೆಂದು ಸಾಧಿಸಿ ತೋರಿಸಬೇಕು.
26. ಜಾತಿಸೂತಕ, ಜನನಸೂತಕ, ಸಾವಿನಸೂತಕಗಳನ್ನು ಆಚರಿಸಬಾರದು.
27. ಪರರ ಧನ, ಪರಸ್ತ್ರೀ, ಪರರ ಕ್ಷೇತ್ರ, ಪರರ ನೀರು ಸ್ವೀಕರಿಸಬಾರದು.
28. ಶಿವಲಿಂಗದ ಪೂಜೆ, ಪ್ರಾರ್ಥನೆ, ಇಚ್ಛೆ, ನೇಮ, ವ್ರತಾದಿಗಳನ್ನು ಮಾಡಬೇಕು.
29. ಶಿವಭಕ್ತರೆ ತನ್ನ ಸರ್ವಸ್ವವೆಂದು ಭಾವಿಸಿ ಶಿವಪಥದಲ್ಲಿ ನಿಲ್ಲಬೇಕು.
30. ಭಕ್ತರೊಡನೆ ಸರಸದಿಂದ ಇರುವುದಾಗಲೀ, ಅವಗುಣ ಹುಡುಕುವುದಾಗಲಿ ಮಾಡಬಾರದು.
31. ಭಕ್ತರಲ್ಲಿ ಭೇದವೆಣಿಸಬಾರದು.
32. ನಾಯಿ, ಹಂದಿ, ಕೋಳಿ, ಬೆಕ್ಕು, ಇಲಿಗಳನ್ನು ಮನೆಯಲ್ಲಿ ಸುಳಿಯದಂತೆ ನೋಡಿಕೊಳ್ಳಬೇಕು.
33. ದೇಹಕ್ಕೆ ಕಾಯಿಲೆ ಬಂದಾಗ ಮಂತ್ರ, ತಂತ್ರ, ಮಣೆ, ನಾರು, ಬೇರುಗಳೆಂದು ಮನದಲ್ಲಿಯೂ ನೆನೆಯದೆ ಇರುವುದು.
34. ವಾರ, ತಿಥಿ, ತಾರಾಬಲ, ಚಂದ್ರಬಲ ಮೊದಲಾದ ಪಂಚಾಂಗದ ನೇಮಗಳನ್ನು ಬಿಡಬೇಕು.
35. ಭವಿಗಳಿಂದ ಯಾವುದೇ ಸಂಪರ್ಕವಿಲ್ಲದೆ ದೂರವಿರಬೇಕು.
36. ಶಿವರಾತ್ರಿ, ಸಂಕಷ್ಟರಾತ್ರಿ, ಸೋಮವಾರ, ಏಕಾದಶಿ, ಉಪವಾಸಾದಿ ವ್ರತಗಳನ್ನು ಆಚರಿಸದಿರುವುದು.
37. ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನಗಳನ್ನು ನಿರ್ವಂಚನೆಯಿಂದ ಅರ್ಪಿಸಿ ಸೇವೆ ಮಾಡಬೇಕು.
38. ಪುಣ್ಯಸಂಪಾದನೆಗಾಗಿ ತೀರ್ಥಕ್ಷೇತ್ರಗಳಿಗೆ ಹೋಗಬಾರದು.
39. ಅನ್ಯರಿಗೆ ಉಪದೇಶಿಸದೆ, ತನ್ನ ತಾನು ಸರಿಯಾಗಿ ನಡೆದುಕೊಳ್ಳಬೇಕು.
40. ತೋರಿಕೆಯ ಭಕ್ತಿ ಬಿಟ್ಟು ಜಂಗಮಸೇವೆ ಮಾಡಬೇಕು.

41. ತನ್ನ ಸಮಶೀಲರಾದವರು ಶೇಷಪ್ರಸಾದವನ್ನು ಸ್ವೀಕರಿಸುತ್ತಿರುವಾಗ ಐಕ್ಯರಾದರೆ ಅವರೊಂದಿಗೆ ತಾನೂ ಐಕ್ಯನಾಗುವುದು.
42. ಲೋಕದವರ ಅನುಸರಿಸದೆ, ತನ್ನ ತಾನು ಮನಮೆಚ್ಚಿ ನಡೆಯಬೇಕು.
43. ತನುಮನಕ್ಕೆ ಸದಾಚಾರವೇ ಪ್ರಾಣವೆಂದು ಬಗೆದು, ಅನುಭಾವಕ್ಕೆ ಜಂಗಮಭಕ್ತಿಯೇ ಮೂಲವೆಂದು ಭಾವಿಸಬೇಕು.
44. ಸ್ವರ್ಗ ನರಕ, ಪುಣ್ಯ ಪಾಪ ಎಂಬ ಭಾವ ಬಿಟ್ಟು ಶಿವಪಾರಮ್ಯವನ್ನು ನಂಬಿ ಬದುಕಬೇಕು.
45. ಜಿಹ್ವಾ ಚಾಪಲ್ಯಗಳನ್ನು ತ್ಯಜಿಸಿ, ಅವನ್ನು ಶಿವನಿಗರ್ಪಿಸಬೇಕು.
46. ಭವಿಯ ನುಡಿ ಮತ್ತು ಕಾವ್ಯ ಕೇಳದಿರುವುದು.
47. ಅವಸ್ಥಾತ್ರಯಗಳಲ್ಲೂ ಶಿವಲಿಂಗವನ್ನು ನೆನೆಯುತ್ತಿರಬೇಕು.
48. ಹಗಲು ರಾತ್ರಿ ಶಿವನ ಧ್ಯಾನದಲ್ಲಿ ಕಳೆಯಬೇಕು.
49. ಅನ್ಯರ ಸೇವೆ ಮಾಡದೆ ಶಿವನ ಸೇವೆ ಮಾಡಬೇಕು.
50. ಶಿವಭಕ್ತರೊಡನೆ ಸಂಪರ್ಕ ಇರಿಸಿಕೊಂಡು, ಶಿವದರ್ಶನ, ಶಿವಮಾರ್ಗದಲ್ಲಿ ವಿಹರಿಸಬೇಕು.
51. ದಾನದ ಫಲವನ್ನು ನಿರೀಕ್ಷಿಸದೆ, ಶಿವಸ್ಮರಣೆಯಲ್ಲಿ ಮನವನ್ನು ನಿಲ್ಲಿಸಬೇಕು.
52. ಅರಿಷಡ್ವರ್ಗಾದಿಗಳಿಗೆ ಎಡೆ ನೀಡದೆ ಶಿವತತ್ತ್ವಚಿಂತಾಮಣಿಯಲ್ಲಿರುವುದು.
53. ಎಲ್ಲ ಬಾಹ್ಯಾಡಂಬರದ ಪ್ರದರ್ಶನ ಬಿಟ್ಟು ಮನವನ್ನು ಶಿವನಲ್ಲಿ ನೆಲೆಗೊಳಿಸಬೇಕು.
54. ಎಲ್ಲ ಆಭರಣಗಳಿಗೆ ಮುಖವೆಂದು ರುದ್ರಾಕ್ಷಿಯನ್ನು ಧರಿಸುವುದು.
55. ಎಲ್ಲರಲ್ಲಿಯೂ ಶಿವನು ಇರುವನೆಂದು ಭಾವಿಸದೆ, ಶಿವಭಕ್ತರಲ್ಲಿ ಮಾತ್ರ ಶಿವನಿರುವನೆಂದು ತಿಳಿಯಬೇಕು.
56. ದಶವಿಧ ಪಾದೋದಕ ಏಕಾದಶ ಪ್ರಸಾದಗಳನ್ನು ಸೇವಿಸಿ, ಇಷ್ಟ, ಪ್ರಾಣ ಭಾವಲಿಂಗಗಳ ಅನುಸಂಧಾನದಲ್ಲಿ ತೊಡಗಬೇಕು.
57. ಪುರುಷಾರ್ಥಗಳನ್ನು ಕಾಮಿಸದೆ, ಸುಜ್ಞಾನಿಯಾಗಿ ಶಿವಧ್ಯಾನದಲ್ಲಿರಬೇಕು.
58. ಇಂದ್ರಿಯ ಗುಣಗಳನ್ನು ಸುಟ್ಟುಹಾಕಿ ಮನವನ್ನು ಲಿಂಗದಲ್ಲಿ ಇರಿಸಬೇಕು.
59. ಲಿಂಗತ್ರಯಗಳನ್ನು ಷಟ್ಸ್ಥಲಾನುಸಂಧಾನವನ್ನು ಹೊಂದಿಕೊಂಡಿರುವುದು.
60. ಅಂಗಭೋಗಿಯಾಗದೆ, ಲಿಂಗಭೋಗಿಯಾಗಿರಬೇಕು.



61. ಪರವಸ್ತುವಿನ ಜ್ಞಾನವೇ ಹಿರಿಯದಾದ ಜ್ಞಾನವೆಂದು ಅರಿತು, ಅದರ ಗಳಿಕೆಗಾಗಿ ಸಾಧನೆ ಮಾಡಬೇಕು.
62. ಬೆಳಗು-ಮಧ್ಯಾಹ್ನ-ಸಂಜೆಯೆಂದು ಸಮಯ ನೋಡದೆ, ಬಿಡುವು ಸಿಕ್ಕಾಗಲೆಲ್ಲ ಲಿಂಗಾರ್ಚನೆ ಮಾಡಬೇಕು.
63. ಲಿಂಗಪ್ರಸಾದಿಯಾಗಿ ಆತ್ಮ ಪರಮಾತ್ಮ ಭೇದವನ್ನುಳಿದು, ಲಿಂಗದಲ್ಲಿಯೇ ಒಂದಾಗಿರುವುದು.
64. ಜಪತಪಾದಿಗಳನ್ನೆಲ್ಲ ಮೀರಿನಿಂತು ಅಪರಿಮಿತ ಆನಂದದಿಂದ ಶಿವನೊಡನೆ ಬೆರೆಯಬೇಕು.

ಈ ಮೇಲೆ ತಿಳಿಸಿರುವ ಎಲ್ಲ ಶಿವಾಚರಣೆಗಳು ಬದುಕನ್ನು ಸಂಸ್ಕಾರಗೊಳಿಸುತ್ತದೆ; ಶಿವಮಯವನ್ನಾಗಿಸುತ್ತದೆ. ಲಿಂಗಾನುಸಂಧಾನದಿಂದ ಸಾಧಕನು ತನಗೆ ತಾನೇ ಹಲವು ಶಿವಶೀಲಗಳಿಗೆ ಒಳಗುಮಾಡಿಕೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ. ಈ ಕಾರಣದಿಂದಲೇ ಕೊಂಡಗುಳಿ ಕೇಶಿರಾಜನು ಸಾಧಕನಿಗೆ ಅತ್ಯವಶ್ಯಕವಾದ ಶೀಲಗಳನ್ನು ಶೀಲಮಹತ್ವದ ಕಂದದ ಮೂಲಕ ತಿಳಿಸಿಕೊಟ್ಟಿದ್ದಾನೆ. ಶೀಲಗಳಿಂದ ಸಂಸ್ಕಾರಗೊಳ್ಳುತ್ತ ನಡೆದ ಸಾಧಕ ವ್ಯಕ್ತಿಗೆ ಅಂತರಂಗದ ದಿವ್ಯದರ್ಶನ ಪ್ರಾಪ್ತವಾಗುತ್ತದೆ.

ಮುತ್ತು ನೀರಲಿ ಹುಟ್ಟಿ ಮತ್ತೆ ನೀರಪ್ಪುದೆ ?
ಗುರುಕಾರುಣ್ಯವ ಪಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದಡೆ
ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ,
ಆಚಾರದ್ರೋಹ, ಪ್ರಸಾದದ್ರೋಹ !
ಇಂತೀ ಪಂಚಮಹಾಪಾತಕಂಗಳು
ಭಕ್ತಂಗಲ್ಲದೆ ಭವಿಗೆಲ್ಲಿಯದೊ ?
ಗುರುವಿದು, ಲಿಂಗವಿದು, ಜಂಗಮವಿದು
ಆಚಾರವಿದು ಪ್ರಸಾದವಿದೆಂದರಿಯದಿದ್ದಡೆ
ಕುಂಭಿಪಾತಕ ನಾಯಕನರಕ !
ಕೂಡಲಸಂಗಮದೇವಾ.

**ಬಸವಣ್ಣ**

# ಗ್ರಂಥಾಂತರಂಗ

**ಕೃತಿ: ಶಾಸಕರ ಸಹಚಿಂತನ ಶಿಬಿರ ಸಂಪಾದಕ: ಗೊ.ರು. ಚನ್ನಬಸಪ್ಪ**

**ಡೆಮ್ಮಿ $^{1}/_{8}$ xvi +338 * ಬೆಲೆ: 300 ರೂ.ಗಳು * ಜೆಎಸ್‌ಎಸ್ ಗ್ರಂಥ ಮಾಲೆ 2014**

---

**ಕೆ.ಬಿ. ಗಣಪತಿ**
ಪ್ರಧಾನ ಸಂಪಾದಕರು, 'ಮೈಸೂರು ಮಿತ್ರ' ದಿನಪತ್ರಿಕೆ

## ಧರ್ಮ-ರಾಜಕಾರಣ ಚಿಂತನ ಸಮ್ಮಿಲನ

ಕಳೆದ ತಿಂಗಳು ಒಂದು ಅಪರೂಪದ ಪುಸ್ತಕ ನನ್ನ ಕೈಸೇರಿತು. ಅದರ ಹೆಸರು 'ಶಾಸಕರ ಸಹ ಚಿಂತನ ಶಿಬಿರ'. ಸಂಪಾದಿಸಿದವರು ನಾಡಿನ ಖ್ಯಾತ ಸಾಹಿತಿ ಹಾಗೂ ಚಿಂತಕರೂ ಆದ ಗೊ.ರು. ಚನ್ನಬಸಪ್ಪನವರು. ಅಚ್ಚುಕಟ್ಟಾಗಿ ಮುದ್ರಿಸಿ ಹೊರತಂದ ಈ ಪುಸ್ತಕ 338 ಪುಟಗಳನ್ನು ಹೊಂದಿದೆ. ನಿಜವಾಗಿಯೂ ಸಂಪಾದಕರ ನುಡಿಯಲ್ಲಿ ಗೊ.ರು. ಚನ್ನಬಸಪ್ಪನವರು ಹೇಳಿದ ಹಾಗೆ ಇದೊಂದು ದಾಖಲೆಯ ಕೃತಿ. ಅಷ್ಟೇ ಅಲ್ಲ, ನನಗಂತೂ ಇದೊಂದು ತುಂಬಾ ಉಪಯುಕ್ತವಾಗುವ, ವಿಶೇಷವಾಗಿ ರಾಜಕಾರಣಿಗಳಿಗೆ ಅಪರೂಪದ ಕೃತಿಯೂ ಕೂಡ. ಏಕೆಂದರೆ ನಮ್ಮ ಪ್ರತಿನಿಧಿಗಳಾದ ಶಾಸಕರು ಭಾಗವಹಿಸಿದ್ದ ವಿಶೇಷ ಶಿಬಿರದಲ್ಲಿ ಪಾಲ್ಗೊಂಡಿದ್ದ ಉಪನ್ಯಾಸಕರುಗಳ ಚಿಂತನೆ ಈ ಪುಸ್ತಕದಲ್ಲಿ ಅಕ್ಷರರೂಪದಲ್ಲಿ ಮೂಡಿ ಬಂದಿದೆ. ಈ ಚಿಂತನಾಶಿಬಿರ 6 ವರ್ಷಗಳ ಹಿಂದೆ ಅಂದರೆ 2008ರಲ್ಲಿ ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಡೆದದ್ದು. ತಡವಾಗಿಯಾದರೂ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿ ಹೊರತಂದಿರುವುದು ಸಂತೋಷದ ವಿಷಯ.

ಕರ್ನಾಟಕ ರಾಜ್ಯ ವಿಧಾನಸಭೆಯಲ್ಲಿ 224 ಶಾಸಕರು, ವಿಧಾನ ಪರಿಷತ್ತಿನಲ್ಲಿ 75 ಸದಸ್ಯರು ಇದ್ದರೂ ಕೂಡ ಕೇವಲ 64 ಶಾಸಕರು ಪಾಲ್ಗೊಂಡಿದ್ದರು. ನಮ್ಮ ಶಾಸಕರಲ್ಲಿ ಅವರ ಜವಾಬ್ದಾರಿ ಮೇಲೆ ಇರುವ ಕಾಳಜಿಯನ್ನು ಇದು ಸೂಚಿಸುತ್ತದೆ. ದುರಾದೃಷ್ಟದ ವಿಷಯವೆಂದರೆ ಒಬ್ಬ ಶಾಸಕ ಚುನಾಯಿತನಾದ ಮರುದಿನವೇ ತಾನು ಸರ್ವಜ್ಞ ಎಂಬ ಭಾವನೆಯನ್ನು ಅವನ ಮನಸ್ಸಿನಲ್ಲಿ ತುಂಬಿಕೊಂಡು ಅವನ ನಡೆನುಡಿಯನ್ನು ಅದೇ ರೀತಿಯಲ್ಲಿ ತೋರ್ಪಡಿಸಿಕೊಳ್ಳುತ್ತಾನೆ. ದಿನಕಳೆದಂತೆ ಜನರಿಂದ ದೂರವಾಗಿ ಪ್ರಜಾಪ್ರಭುತ್ವದಡಿ ಅವನಿಗಿರುವ ಜವಾಬ್ದಾರಿ ಮರೆತಂತೆ ಅನೇಕರನ್ನು ನಾವು ನೋಡಿದ್ದೇವೆ.

ಒಬ್ಬ ಶಾಸಕ ಈ ರೀತಿಯ ಬಲೆಯಲ್ಲಿ ಸಿಲುಕಿ ಅಪ್ರಯೋಜನಕಾರಿಯಾಗುವುದನ್ನು ತಪ್ಪಿಸಲು ಈ ರೀತಿಯ ಶಾಸಕರ ಸಹಚಿಂತನ ಶಿಬಿರ ತುಂಬಾ ಪ್ರಯೋಜನಕಾರಿ



ಯಾಗುವುದರಲ್ಲಿ ಸಂಶಯವಿಲ್ಲ. ಸುತ್ತೂರು ಶ್ರೀಮಠದ ಈ ಪ್ರಯತ್ನವನ್ನು ಇಡೀ ನಾಡಿನ ಜನತೆ ಮೆಚ್ಚಬೇಕಾದದ್ದು. ಈ ದಿಶೆಯಲ್ಲಿ ವಿಧಾನಸಭೆಯ ಸಭಾಪತಿಯೂ ಕೂಡ ಶಿಬಿರಗಳನ್ನು ನಡೆಸುತ್ತಾರೆಂದು ನಾನು ಕೇಳಿ ತಿಳಿದಿದ್ದೇನೆ. ಅಲ್ಲೂ ಕೂಡ ಶಾಸಕ ಶಿಬಿರಾರ್ಥಿಗಳ ಹಾಜರಿ ಅಷ್ಟಕಷ್ಟೆ ಎಂದು ತಿಳಿದಿದ್ದೇನೆ. ಅದೇನೇ ಇರಲಿ, ಸುತ್ತೂರು ಶ್ರೀಮಠದವರು ದೇಶದ ಅನೇಕ ಗಣ್ಯರನ್ನು ಆಹ್ವಾನಿಸಿ ಅವರಿಂದ ತುಂಬಾ ಉತ್ತಮವಾದ ಉಪನ್ಯಾಸಗಳನ್ನು ನಡೆಸಿಕೊಟ್ಟಿದ್ದಾರೆ.

ಜವಾಬ್ದಾರಿ ಸ್ಥಾನದಲ್ಲಿರುವವರು ತಮ್ಮ ತಮ್ಮ ಸ್ಥಾನಮಾನಕ್ಕನುಗುಣವಾಗಿ ನಡೆಯಬೇಕೆಂಬುದು ಒಂದು ನಿಯಮ. ಯಾವುದೇ ಒಂದು ವ್ಯವಸ್ಥೆ, ಅಂದರೆ ಒಂದು ಸರ್ಕಾರವಾಗಲೀ, ಒಂದು ಸೇವಾಸಂಸ್ಥೆಯಾಗಲೀ, ಒಂದು ಉದ್ಯಮವಾಗಲೀ ಸರಿಯಾದ ಹಾದಿಯಲ್ಲಿ ಸಾಗಬೇಕೆಂದರೆ ಜವಾಬ್ದಾರಿ ಎಂಬುದನ್ನು ಸರಿಯಾಗಿ ನಿಭಾಯಿಸಬೇಕು. ನಾವು ಒಂದು ಬದ್ಧತೆಯಲ್ಲಿ ಸಾಗುತ್ತಿದ್ದೇವೆಯೇ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. 'ಆತ್ಮಾವಲೋಕನ' ಎಂಬುದು ಗಂಭೀರವಾಗಿ ಪರಿಗಣಿಸಲ್ಪಟ್ಟ ಯಾವುದೇ ಒಂದು ವಿಚಾರವನ್ನು ತೂಗಿ ನೋಡುವ ಒಂದು ಸಾಧನ ಎಂದೂ ಹೇಳಬಹುದು. ಇದನ್ನೇ ನಾವು 'ಚಿಂತನೆ' ಎನ್ನಬಹುದು. ನಮ್ಮ ನಡೆ-ನುಡಿಯ ಆತ್ಮಾವಲೋಕನಕ್ಕಾಗಿಯೇ ನಡೆಯುವಂತಹವು ಚಿಂತನಾ ಶಿಬಿರಗಳು.

ಶ್ರೀಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಮಹತ್ತರ ಚಿಂತನೆ ಫಲವಾಗಿ ಈ ಚಿಂತನ ಶಿಬಿರ ಏರ್ಪಾಡಾಗಿತ್ತು. ಶಿಬಿರದಲ್ಲಿ ಆಡಳಿತಾತ್ಮಕ ಚಿಂತನೆಗಳೊಂದಿಗೆ ಆಧ್ಯಾತ್ಮಿಕ ವಿಚಾರಧಾರೆಗಳೂ ಸ್ಫುರಿಸಿದವು.

ಆಧ್ಯಾತ್ಮಿಕ ಚಿಂತಕರೂ, ಈಶಾ ಫೌಂಡೇಶನ್ ಸಂಸ್ಥಾಪಕರೂ ಆದ ಜಗ್ಗಿವಾಸುದೇವ್ ಹಾಗೂ ಶ್ರೀ ಸಿದ್ಧೇಶ್ವರ ಸ್ವಾಮಿಗಳು ನೀಡಿದ ಉಪನ್ಯಾಸಗಳು ಕೃತಿಯಲ್ಲಿವೆ. ರಾಜಕಾರಣದ ಸಂಬಂಧ ಹಾಗೂ ಸಾಮಾಜಿಕವಾಗಿ ಶಾಸಕರು ನಡೆಸಿದ ಮುಕ್ತ ಚರ್ಚೆಗಳಿವೆ. ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಮಾಜಸೇವಕರಾದ ಅಣ್ಣಾ ಹಜಾರೆಯವರ ಉಪನ್ಯಾಸ ಮಾಲಿಕೆಯಿದೆ. ಸಮಾಜಸೇವಕ ಡಾ. ಪ್ರಕಾಶ್ ಆಮ್ಟೆ, ಡಾ. ಮಂದಾಕಿನಿ ಆಮ್ಟೆ ದಂಪತಿ ವಿಚಾರಧಾರೆಗಳೂ ಕೃತಿಯಲ್ಲಿವೆ. ಪ್ರಸಿದ್ಧ ಬೋಧಕರ ಚಿಂತನೆಗಳ ಅಡಕವಿದೆ. ವಿವೇಚನೆಯ ಪರಿಧಿಗೆ ತೆಗೆದುಕೊಳ್ಳಬಹುದಾದ ಕೆಲವು ವಿಚಾರಧಾರೆಗಳನ್ನು ಈ ಕೃತಿ ಪರಿಚಯದಲ್ಲಿ ಉಲ್ಲೇಖಿಸುವುದು ಔಚಿತ್ಯಪೂರ್ಣವೆನಿಸುತ್ತದೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳು ಅಂತರಂಗ ಶುದ್ಧಿ ಲಕ್ಷಣಗಳ ಬಗ್ಗೆ ತಿಳಿಸಿರುವ ಮಾತುಗಳು ತುಂಬವೇ ಲಕ್ಷಿಸುವಂತಹವು. ಅವರ ಪ್ರಕಾರ ಮನಸ್ಸಿನಲ್ಲಿ ಮೂರು ಪ್ರಕಾರ. ಸಿರಿವಂತ ಮನಸ್ಸು, ಸುಂದರ ಮನಸ್ಸು ಹಾಗೂ ವಿಶಾಲ ಮನಸ್ಸು.

**ಸಿರಿವಂತ ಮನಸ್ಸು:** ಮನಸ್ಸು ಸಿರಿವಂತವಾಗುವುದೆಂದರೆ ಅತಿಯಾಸೆಯಿಂದ ದೂರವಾಗಿರುವುದು. ಮನೆ ದೊಡ್ಡದಾದರೆ ಮನುಷ್ಯ ದೊಡ್ಡವನಾಗುವುದಿಲ್ಲ. ಮನಸ್ಸು

ದೊಡ್ಡದಿರಬೇಕು. ಆಗ ಮಾತ್ರ ಮನುಷ್ಯ ದೊಡ್ಡವನಾಗುತ್ತಾನೆ. ಸದಾಸೆಯುಳ್ಳವನೇ ನಿಜವಾದ ಸಿರಿವಂತ ಎಂದು ವ್ಯಾಖ್ಯಾನಿಸಿದ್ದಾರೆ. ಸದಾಸೆಗೆ ನೀಡಿರುವ ಒಂದು ದೃಷ್ಟಾಂತವೂ ಇಲ್ಲಿ ಉಲ್ಲೇಖಿಸುವಂತಹದ್ದು.

ಓರ್ವ ಸಿರಿವಂತ ತನ್ನ ಈರ್ವರು ಮಕ್ಕಳಿಗೆ ಆಸ್ತಿ ಪಾಲು ಮಾಡಿದ. ಒಬ್ಬನದು ಹೆಂಡತಿ ಮಕ್ಕಳ ಕುಟುಂಬ. ಇನ್ನೊಬ್ಬ ಅವಿವಾಹಿತ. ಈರ್ವರ ಜಮೀನುಗಳಲ್ಲಿ ಬೆಳೆದ ಧಾನ್ಯ ಲಕ್ಷ್ಮಿ ಮನೆಗೆ ಬರುವುದಿತ್ತು. ಅಂದು ಹುಣ್ಣಿಮೆಯ ದಿನ. ಹಿರಿಯ ಮಧ್ಯರಾತ್ರಿ ತನ್ನ ಹೊಲಕ್ಕೆ ತೆರಳಿದ. ತನ್ನ ರಾಶಿಯಲ್ಲಿನ ಅರ್ಧದಷ್ಟು ಜೋಳವನ್ನು ತಮ್ಮನ ರಾಶಿಗೆ ಸುರಿದ. ಒಬ್ಬಂಟಿಗ ಉಪಜೀವನಕ್ಕೆ ಒಂದಷ್ಟು ಅನುಕೂಲವಾಗಲಿ ಎಂಬುದು ತಮ್ಮನ ಮೇಲಿನ ಅಣ್ಣನ ಔದಾರ್ಯ. ಅಣ್ಣ ಮನೆಗೆ ಮರಳಿದ. ಆ ನಂತರ ತಮ್ಮ ಹೊಲಕ್ಕೆ ಬಂದ. ಅಣ್ಣನ ರಾಶಿಗೆ ತನ್ನ ರಾಶಿಯಲ್ಲಿದ್ದ ಅರ್ಧದಷ್ಟು ಜೋಳವನ್ನು ಸುರಿದ. ಅಣ್ಣನಿಗೆ ಮಡದಿ ಮಕ್ಕಳಿದ್ದಾರೆ, ಬಂಧು ಬಳಗವಿದೆ. ತಾನು ಒಂಟಿ ಜೀವಿ. ಅಣ್ಣನಿಗೆ ಒಂದಷ್ಟು ಅನುಕೂಲವಾಗಲೆಂಬ ಬಯಕೆ. ಸದ್ಭಾವ ಉಳ್ಳವರೇ ನಿಜವಾದ ಸಿರಿವಂತರು ಎಂದು ಬಿಂಬಿಸಿದ ದೃಷ್ಟಾಂತವಿದು. ಹುಟ್ಟುತ್ತಾ ಅಣ್ಣ ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು ಎನ್ನುವ ವಾಡಿಕೆಯಿದೆ. ಇಂತಹ ಔದಾರ್ಯ ಗುಣವಿದ್ದರೆ ದಾಯಾದಿಗಳಾಗುವ ಪ್ರಶ್ನೆಯೇ ಬರುವುದಿಲ್ಲ.

**ಸುಂದರ ಮನಸ್ಸು:** ದ್ವೇಷ ಅಸೂಯೆಯಿಲ್ಲದ ಮನಸ್ಸೇ ಸುಂದರ ಮನಸ್ಸು. ಈರ್ಷೆ ರಹಿತ ಮನಸ್ಸೇ ಸುಂದರ ಮನಸ್ಸು.

**ವಿಶಾಲ ಮನಸ್ಸು:** ಉತ್ತಾನ ಮಹಾರಾಜನ ಸುರುಚಿ ಮತ್ತು ಸುನೀತ ಎಂಬ ಈರ್ವರು ಪತ್ನಿಯರಲ್ಲಿ ಸುರುಚಿ ಎಂಬುವಳ ಉದಾಹರಣೆಯೊಂದಿಗೆ ಶ್ರೀಗಳು ದೊಡ್ಡ ಮನಸ್ಸಿನ ಲಕ್ಷಣಗಳನ್ನು ತಿಳಿಸಿದ್ದಾರೆ. ಸುನೀತಿಯ ಮಗ ಧ್ರುವ ಮಹಾರಾಜನ ತೊಡೆಯ ಮೇಲೆ ಕುಳಿತಿದ್ದಾಗ ಸುರುಚಿ ಅದನ್ನು ಸಹಿಸದೆ ತನ್ನ ಮಗನಿಗೆ ಮಾತ್ರ ತೊಡೆಯ ಮೇಲೆ ಕೂರುವ ಅರ್ಹತೆ ಎಂದು ಹೇಳಿ ಧ್ರುವನನ್ನು ರಾಜನ ತೊಡೆಯಿಂದ ಎಳೆದು ಬಿಡುತ್ತಾಳೆ. ಒಂದು ದೇಶ ಆಳುವವರ ನಡುವೆ ಇಂತಹ ಸಣ್ಣ ನಡವಳಿಕೆಯವರಿದ್ದರೆ ಆ ದೇಶ ಉದ್ಧಾರವಾಗಲಾರದು ಎಂದು ಶ್ರೀಗಳು ತಿಳಿ ಹೇಳಿದ್ದಾರೆ. ಹತ್ತಾರು ಜನರ ನಡುವೆಯೇ ಬದುಕಬೇಕಾದವರು ನಾವು. ನಿರ್ಮಲ ಮನಸ್ಸಿನೊಂದಿಗೆ ಬಾಂಧವ್ಯದ ಬೆಸುಗೆಯೊಂದಿಗೆ ಜೀವನ ಸಾಗಿಸುವುದು ನಮ್ಮ ಧ್ಯೇಯವಾಗಬೇಕು ಎಂಬುದು ಶ್ರೀಗಳ ಹಿತವಚನ.

ರಾಜಕೀಯ ಕ್ಷೇತ್ರದತ್ತ ಒಬ್ಬೊಬ್ಬರದೂ ಒಂದೊಂದು ದೃಷ್ಟಿಕೋನ. ಅವರದೇ ಲೆಕ್ಕಾಚಾರ. ರಾಜಕೀಯ ಕ್ಷೇತ್ರ ಕಲುಷಿತವಾಗಿದೆ. ಭ್ರಷ್ಟಾಚಾರ ವಿಜೃಂಭಿಸಿದೆ. ಜನಸಾಮಾನ್ಯರಿಗೆ ಸ್ಪಂದನೆಯಿಲ್ಲ ಎಂಬಂತಹ ಮಾತುಗಳೇ ಹೆಚ್ಚಿನದಾಗಿವೆ.



ಶಿಬಿರದಲ್ಲಿ ಶಾಸಕರ ಜವಾಬ್ದಾರಿ ಕುರಿತಂತೆ ದೀರ್ಘ ಚರ್ಚೆಗಳಾಗಿವೆ. ಏಕೆಂದರೆ ಇದು ಶಾಸಕರದೇ ಶಿಬಿರ. ರಾಜಕೀಯ ಕ್ಷೇತ್ರದಲ್ಲಿ ದೀರ್ಘಕಾಲ ದುಡಿದೂ ಕ್ಷೇತ್ರದ ಬಗ್ಗೆ ರಾಜಕಾರಣಿಗಳೇ ವಿಷಾದ, ನಿರಾಶೆ ವ್ಯಕ್ತಪಡಿಸಿದ್ದಾರೆಂದರೆ ನಮ್ಮ ಆಡಳಿತ ವ್ಯವಸ್ಥೆಗಳು ಎತ್ತ ಸಾಗಿವೆ ಎಂಬುದಕ್ಕೆ ಉತ್ತರವಾಗುತ್ತದೆ.

ಭ್ರಷ್ಟಾಚಾರದ ವಿರುದ್ಧ ಸಿಡಿದೆದ್ದ ಅಣ್ಣಾ ಹಜಾರೆಯವರು ಸಾರ್ವಜನಿಕ ಸೇವೆಯಲ್ಲಿ ಪ್ರಾಮಾಣಿಕತೆ ಕುರಿತಂತೆ ಮಾತನಾಡಿದ್ದಾರೆ. ಮಹಾತ್ಮಗಾಂಧಿಯವರ ಚಿಂತನೆಗಳನ್ನು ಪ್ರಸ್ತಾಪಿಸಿದ್ದಾರೆ. ನಾವು ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸಿದಾಗ ಅದು ಗ್ರಾಮೀಣಾಭಿವೃದ್ಧಿಗೆ ದ್ಯೋತಕವಲ್ಲ. ಇಂತಹ ಕಟ್ಟಡಗಳನ್ನು ನಿರ್ಮಿಸುವಲ್ಲಿ ಪಾಲ್ಗೊಂಡವರ ಮನಸ್ಸು ಪರಿವರ್ತನೆ ಮಾಡಬೇಕು. ಈ ಅಭಿಮತದೊಂದಿಗೆಯೇ ಗಗನಚುಂಬಿ ಕಟ್ಟಡಗಳ ನಿರ್ಮಾಣ ತಪ್ಪಲ್ಲ ಎಂದೂ ಗಾಂಧೀಜಿಯವರು ಹೇಳಿದ್ದಾರೆ. ಅಂದರೆ ಇಂತಹ ಪ್ರಗತಿಯೊಂದಿಗೆ ಹಳ್ಳಿಗಳ ಉದ್ಧಾರವೂ ಮೊದಲಾಗಬೇಕು ಎಂಬುದು ಗಾಂಧೀಜಿ ಬಯಕೆ.

ನಮ್ಮ ದೇಶ ಪಂಚಾಯತ್ ರಾಜ್ ವ್ಯವಸ್ಥೆಗೆ ಬಹಳ ಮಹತ್ವ ನೀಡಿದೆ. ಗ್ರಾಮಗಳ ಅಭಿವೃದ್ಧಿ ಬಯಸುವುದು ಮುಖ್ಯ ಧ್ಯೇಯವಾಗಬೇಕೆಂಬ ಸಂದೇಶವನ್ನು ಅಣ್ಣಾ ಹಜಾರೆಯವರು ಜನಪ್ರತಿನಿಧಿಗಳಿಗೆ ನೀಡಿದ್ದಾರೆ.

ಜನರ ಆಶೋತ್ತರಗಳಿಗೆ ಸ್ಪಂದಿಸುವ ಮಹತ್ತರ ಜವಾಬ್ದಾರಿ ಚುನಾಯಿತ ಪ್ರತಿನಿಧಿಗಳದು. ಈ ನಿಟ್ಟಿನಲ್ಲಿ ಕೆಲವು ಶಾಸಕರು ವ್ಯಕ್ತಪಡಿಸಿದ ಅಭಿಪ್ರಾಯಗಳೂ ಕೃತಿಯಲ್ಲಿವೆ.

ಶಾಸನ ರೂಪಿಸುವ ಮಹತ್ತರ ಜವಾಬ್ದಾರಿ ಹೊತ್ತವರು ಚುನಾಯಿತ ಪ್ರತಿನಿಧಿಗಳು. ಪರಿಣಾಮಕಾರಿ ಚರ್ಚೆಗಳಿಗೆ ಅವಕಾಶವಾಗಬೇಕೆಂದರೆ ಸದನದ ಕಲಾಪಗಳು ಸಾಂಗವಾಗಿರಬೇಕು. ಚಿಂತನ ಶಿಬಿರದಲ್ಲಿ ನಡೆದ ಇಂತಹ ಒಂದು ಚರ್ಚೆ ಸದನ ಕಲಾಪಗಳ ವಿಚಾರದಲ್ಲಿ ಒಂದು ಗಹನ ಚರ್ಚೆ ಎನ್ನಬಹುದು.

ಶಾಸಕರ ಸಾಮಾಜಿಕ ಬದ್ಧತೆ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ವಿ. ಶಿವರಾಜ್‌ಪಾಟೀಲ್ ತಮ್ಮದೇ ವಿಚಾರ ಲಹರಿಯನ್ನು ನೀಡಿದ್ದಾರೆ. ಇವರ ಮುಖ್ಯ ಪ್ರತಿಪಾದನೆಯೆಂದರೆ ಶಾಸಕರಾದವರಿಗೆ ಜನಸಂಪರ್ಕ ಅತೀ ಮುಖ್ಯ. ಪ್ರಜಾಪ್ರತಿನಿಧಿಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಬೇಕಾದರೆ ಇದು ಅತ್ಯಗತ್ಯ. ಶಾಸಕರು ವಾಸ್ತವವಾಗಿ ಸರ್ಕಾರ ಮತ್ತು ಜನರ ನಡುವಿನ ಸೇತುವೆಯಾಗಬೇಕು. ಕಾರಣ ಜನರು ಸರ್ಕಾರದ ಹತ್ತಿರವೇ ಹೋಗಿ ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಯಶಸ್ವೀ ಆಡಳಿತಕ್ಕೆ ಪ್ರಜಾಪ್ರತಿನಿಧಿಗಳ ಹಾಗೂ ಆಡಳಿತ ವರ್ಗದವರ ನಡುವೆ ಸಾಮರಸ್ಯವೂ ಮುಖ್ಯ ಎಂಬುದು ಶ್ರೀಯುತರ ಅಭಿಮತ.

ಸದನ ಕಲಾಪಗಳು ಹಾಗೂ ಶಾಸಕರ ಸಾಮಾಜಿಕ ಬದ್ಧತೆ ಕುರಿತಂತೆ ಶಿಬಿರದಲ್ಲಿ ನಡೆದ ಚರ್ಚೆಗಳ ಬಗ್ಗೆಯೂ ಈ ಕೃತಿಯಲ್ಲಿ ಅವಲೋಕಿಸಬಹುದಾಗಿದೆ. ಶಾಸಕರ ಚಿಂತನ ಶಿಬಿರವಾದ್ದರಿಂದ ಇದು ಆದ್ಯತೆಯ ಚರ್ಚೆ ಕೂಡ ಆಗಿದೆ. ವಿಧಾನ ಪರಿಷತ್ ಮಾಜಿ ಸಭಾಪತಿಗಳಾದ ಪ್ರೊ. ಬಿ.ಕೆ. ಚಂದ್ರಶೇಖರ್ ಅವರು ಶಾಸನಸಭೆ ಹಾಗೂ ಸಭಾ ನಡವಳಿಕೆ ಕುರಿತು ಗಂಭೀರ ವಿಚಾರಗಳನ್ನು ಅನಾವರಣಗೊಳಿಸಿದ್ದಾರೆ. ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್ ಪ್ರಸ್ತಾಪದೊಂದಿಗೆ ನಮ್ಮ ಸದನಗಳ ಕಲಾಪಗಳು ಯಾವ ರೀತಿ ಇರುತ್ತವೆ ಎಂದು ವಿಚಾರ ಮಾಡಿದ್ದಾರೆ. ಲೋಕಸಭೆ, ವಿಧಾನಸಭೆಗಳ ಕಲಾಪಗಳು ಹೇಗಿರುತ್ತವೆ ಎಂಬುದನ್ನು ಜನಸಾಮಾನ್ಯರೂ ದೃಶ್ಯಮಾಧ್ಯಮಗಳಲ್ಲಿ ನೋಡಿರುತ್ತಾರೆ. ಕುರ್ಚಿ ಎಸೆಯುವುದು, ಮೈಕ್ ಕಿತ್ತುಕೊಳ್ಳುವುದು, ಕೈ ಕೈ ಮಿಲಾಯಿಸುವ ಮಟ್ಟಕ್ಕೆ ವರ್ತಿಸುವುದೂ, ಸದನದಿಂದ ಹೊರ ನಡೆಯುವುದೂ ಇದೆ. ಸದನದಲ್ಲಿ ಗಂಭೀರ ವಿಚಾರಗಳಿಗೆ ಗಮನ ಕೊಡುವುದು ಮುಖ್ಯ. ಸದನಗಳಲ್ಲಿ ಸದಸ್ಯರ ಹಾಜರಾತಿ ಕುರಿತು ಮಾತನಾಡುವುದರೊಂದಿಗೆ ಹೌಸ್ ಆಫ್ ಕಾಮನ್ಸ್‌ನ ಹಾಜರಾತಿ ಚಿತ್ರಣವನ್ನು ಚಂದ್ರಶೇಖರ್‌ರವರು ನೀಡಿದ್ದಾರೆ. ಹೌಸ್ ಆಫ್ ಕಾಮನ್ಸ್‌ನಲ್ಲಿ ಸದನಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಮಾತ್ರ ಚರ್ಚೆಗಳು ನಡೆಯುತ್ತವೆ. ಸದನದ ಮುಂದೂಡಿಕೆ ಅಡ್ಡಿಪಡಿಸುವುದು, ಗದ್ದಲದಲ್ಲೇ ಸದನದ ಸಮಯ ಕಳೆಯುವುದು ಅಲ್ಲಿಲ್ಲ.

ನಮ್ಮ ದೇಶದ ಸಂವಿಧಾನ ಶ್ರೇಷ್ಠ ಸಂವಿಧಾನ ಎಂಬುದು ವ್ಯಕ್ತವಾಗಿರುವ ಅಭಿಮತ. ಆದರೆ ಆ ಸಂವಿಧಾನದ ಯಶಸ್ಸು ನಾವು ಎಷ್ಟರಮಟ್ಟಿಗೆ ಸಂವಿಧಾನ ಬದ್ಧವಾಗಿ ನಡೆದುಕೊಳ್ಳುತ್ತೇವೆ ಎಂಬುದರ ಮೇಲೆ ಅವಲಂಬಿಸಿದೆ. ರಾಜಕಾರಣದ ಯಶಸ್ಸು ಇದನ್ನೇ ಅವಲಂಬಿಸಿದೆ. ಚಿಂತನ ಶಿಬಿರದಲ್ಲಿ ನಡೆದ ಪ್ರಶ್ನೋತ್ತರರೂಪದ ವಿಚಾರವಿನಿಮಯಗಳೂ ಕೂಡ ಕೃತಿಯಲ್ಲಿವೆ. ಶಿಬಿರಾರ್ಥಿಗಳ ಅನಿಸಿಕೆಗಳ ಮಾಲಿಕೆಯೂ ಇದೆ. ಶಿಬಿರದ ವರ್ಣ ಛಾಯಾಚಿತ್ರಗಳ ಅಡಕ ಕೃತಿಯ ಅವಲೋಕನೆಗೆ ಪೂರಕವಾಗಿದೆ.

ಆದರೆ ಉಪನ್ಯಾಸಮಾಲಿಕೆಗಳು ಕುರಿತಂತೆ ಇಲ್ಲೊಂದು ವಿಚಾರದ ಪ್ರಸ್ತಾಪ ಅಗತ್ಯವೆನಿಸುತ್ತದೆ. ಕೆಲವರು ಆಂಗ್ಲ ಭಾಷೆಯಲ್ಲಿ ನೀಡಿದ ಉಪನ್ಯಾಸಗಳನ್ನು ಕನ್ನಡಾನುವಾದವಾಗಿ ಸಾರಾಂಶ ರೂಪದಲ್ಲಿ ನೀಡಬಹುದಾಗಿತ್ತೇನೋ ಎಂಬುದು ಅನಿಸಿಕೆ.

ಕೊನೆಯದಾಗಿ ಹೇಳುವುದೆಂದರೆ ಶಾಸಕರ ನಡೆ-ನುಡಿಗಳು ಆತ್ಮಸಾಕ್ಷಿಗೆ ಅನುಗುಣವಾಗಿರಬೇಕು ಎಂಬುದೇ ಈ ಶಿಬಿರದ ಸಂದೇಶವಾಗಿದೆ.

**ಸೌಜನ್ಯ: ಮೈಸೂರು ಮಿತ್ರ**

# ವಾರ್ತಾವಿಹಾರ

## ಸ್ವಚ್ಛ ಭಾರತದ ಜೊತೆಗೆ ಮನಸ್ಸಿನ ಸ್ವಚ್ಛತೆಗೂ ಆದ್ಯತೆ ನೀಡಬೇಕು

ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ದಿನಾಂಕ 1.1.2015 ರಂದು ಅದಮ್ಯ ಚೇತನ ಸಂಸ್ಥೆ ಆಯೋಜಿಸಿದ್ದ ಅದಮ್ಯ ಚೇತನ ಸೇವಾ ಉತ್ಸವದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯರು 'ಎಲ್ಲಾ ವಿಜ್ಞಾನಿಗಳನ್ನು ಒಂದೇ ವೇದಿಕೆಗೆ ಕರೆತಂದು ಸನ್ಮಾನಿಸುವ ಮೂಲಕ ಅದ್ಯಮ ಚೇತನ ಸಂಸ್ಥೆ ಒಳ್ಳೆಯ ಕೆಲಸ ಮಾಡಿದೆ' ಎಂದರು.

'ಸ್ವಚ್ಛ ಭಾರತ ಎಂಬ ಕಲ್ಪನೆ ಅದ್ಭುತವಾಗಿದೆ. ಇದರ ಜೊತೆಗೆ ಮನಸ್ಸಿನ ಸ್ವಚ್ಛತೆಗೂ ಆದ್ಯತೆ ನೀಡಬೇಕು' ಎಂದು ಸಲಹೆ ನೀಡಿದರು.

ಕುಡಿದು ಹೊಸ ವರ್ಷ ಆಚರಿಸುವ ಪಾಶ್ಚಾತ್ಯ ಸಂಸ್ಕೃತಿ ವಿಜೃಂಭಿಸುತ್ತಿರುವಾಗ ಅದಮ್ಯ ಚೇತನ, ಸಾವಿರಾರು ಮಂದಿಯಿಂದ ವಂದೇಮಾತರಂ ಗೀತೆ ಹಾಡಿಸುವ ಮೂಲಕ ಹೊಸ ಭಾಷ್ಯ ಬರೆದಿದೆ ಎಂದು ಪರಮಪೂಜ್ಯರು ತಿಳಿಸಿದರು.

ಬಾಹ್ಯಾಕಾಶ ಸಂಶೋಧನೆಯಲ್ಲಿ ಬೆಂಗಳೂರು 'ಭಾರತದ ಮಿದುಳು' ಇದ್ದಂತೆ. ಬಾಹ್ಯಾಕಾಶ, ವೈಮಾನಿಕ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಈ ನಗರಿಯ ಕೊಡುಗೆ ಅನನ್ಯ ಎಂದು ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಬಣ್ಣಿಸಿದರು.

ಮಂಗಳಯಾನದಲ್ಲೂ ಬೆಂಗಳೂರಿನ ಪಾತ್ರ ಅದ್ಭುತ. ಇದರಿಂದಾಗಿ ಭಾರತಕ್ಕೆ ವಿಶ್ವಮಟ್ಟದಲ್ಲಿ ಮನ್ನಣೆ ಲಭಿಸಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಈ ನಗರಿಯ ಜನ ನೀಡಿದ ವಿಶೇಷ ಕೊಡುಗೆಗಳಿಂದಾಗಿ ಗಡಿ ಪ್ರದೇಶ ಸುಭದ್ರವಾಗಿದೆ ಎಂದು ಶ್ಲಾಘಿಸಿದರು.

ಅಭಿವೃದ್ಧಿ ವಿಷಯದಲ್ಲಿ ಬೇರೆ ದೇಶಗಳು ನಮ್ಮನ್ನು ತುಚ್ಛವಾಗಿ ಕಾಣುತ್ತಿವೆ. ಆದರೆ, ಬಾಹ್ಯಾಕಾಶ ಕ್ಷೇತ್ರದಲ್ಲಿನ ಅಮೋಘ ಸಾಧನೆಗಳಿಂದಾಗಿ ಆ ದೇಶಗಳಿಗೆ ನಾವು ಸೆಡ್ಡು ಹೊಡೆದಿದ್ದೇವೆ. ನಮ್ಮ ವಿಜ್ಞಾನಿಗಳು ಬಾಹ್ಯಾಕಾಶ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಲೇ ಪೂಜೆ ಸಲ್ಲಿಸುತ್ತಾರೆ. ಇದಕ್ಕೆ ಕಾರಣ ನಮ್ಮ ಅನನ್ಯ ಸಂಸ್ಕೃತಿ. ಈ ಬಗ್ಗೆ ನಾವು ಹೇಗೆ ಹೆಮ್ಮೆ ಪಡಬೇಕು, ಹೇಗೆ ವರ್ತಿಸಬೇಕು ಎಂಬುದನ್ನು ನಮ್ಮ ಸಂಸ್ಕೃತಿ ಕಲಿಸುತ್ತದೆ ಎಂದು ನುಡಿದರು.

**ಸನ್ಮಾನಿತ ವಿಜ್ಞಾನಿಗಳು :** ಡಾ. ಯು.ಆರ್. ರಾವ್, ಡಾ. ಎಸ್.ಕೆ. ಶಿವಕುಮಾರ್, ಡಾ. ವಿ. ಕೇಶವರಾಜು, ಸಿ.ಡಿ. ಶ್ರೀಧರ, ಡಾ. ಎಂ. ಅಣ್ಣಾದೊರೈ, ಡಾ. ಎಸ್.ವಿ. ಶರ್ಮ, ಶ್ರೀ ಇ. ವಸಂತ, ಡಾ. ಜಿ. ನಾಗೇಂದ್ರ ರಾವ್, ಡಾ. ಬಿ.ಎನ್. ಸುರೇಶ್, ಡಾ. ವಿ. ಕೋಟೇಶ್ವರ ರಾವ್, ಶ್ರೀ ವಿ.ಆರ್. ಕಟ್ಟಿ, ಡಾ. ಕೋಟಾ ಹರಿನಾರಾಯಣ, ಶ್ರೀ ಪಿ.ಎಸ್. ಸುಬ್ರಮಣ್ಯಂ, ಡಾ. ಕೆ. ಕರುಣಾಕರ್, ಡಾ. ಟಿ.ಎಸ್. ಪ್ರಹ್ಲಾದ್, ಡಾ. ಶ್ಯಾಮ್ ಚೆಟ್ಟಿ, ಡಾ. ಕೆ. ತಮಿಳ್‌ವಾಣಿ, ಡಾ. ಸಿ.ಪಿ. ರಾಮನಾರಾಯಣನ್, ಡಾ. ಎಸ್. ಕ್ರಿಸ್ಟೋಫರ್, ಶ್ರೀಮತಿ ಜೆ. ಮಂಜುಳಾ, ಶ್ರೀ ಪಿ. ಜಯಪಾಲ್, ಡಾ. ವಿ.ಕೆ. ಅತ್ರೆ, ಡಾ. ಕೆ.ಡಿ. ನಾಯಕ್, ಡಾ. ಕೆ. ರಾಮಚಂದ್, ಡಾ. ಎ.ಸಿ. ರಘುರಾಂ, ಶ್ರೀ ಕೆ. ನಾಗರಾಜ್, ಡಾ. ಸಿ.ಜಿ. ಕೃಷ್ಣದಾಸ್ ನಾಯರ್, ಡಾ. ಆರ್.ಕೆ. ತ್ಯಾಗಿ, ಶ್ರೀ ಟಿ. ಸುವರ್ಣ ರಾಜು, ಶ್ರೀ ಮೋಹನ್ ಎಸ್.ಎನ್.

**ಜಿ.ಕೆ. ಬಾಲಕೃಷ್ಣ ಶಿಸ್ತಿನ ಸಿಪಾಯಿ**

ರೋಟೇರಿಯನ್ ಜಿ.ಕೆ. ಬಾಲಕೃಷ್ಣ ಅವರಿಗೆ 70 ವಸಂತಗಳು ತುಂಬಿದ ಸಂದರ್ಭದಲ್ಲಿ ದಿನಾಂಕ 10.1.2015 ರಂದು ಅವರ ಸ್ನೇಹಿತರು, ಅಭಿಮಾನಿಗಳು, ಮೈಸೂರಿನ ರೇಸ್ ಕ್ಲಬ್‌ನ ಆವರಣದಲ್ಲಿ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯ ಜಗದ್ಗುರುಗಳು ಮಾತನಾಡುತ್ತ ನಾವು ಕಂಡಂತೆ ಶ್ರೀ ಜಿ.ಕೆ. ಬಾಲಕೃಷ್ಣ ಅವರು ಶಿಸ್ತಿನ ಸಿಪಾಯಿ ಇದ್ದಂತೆ. ಯಾವುದೇ ಕೆಲಸವನ್ನು ಮಾಡಬೇಕಾದರೂ, ಅದರಲ್ಲಿ ಅವರ ಶಿಸ್ತು ಎದ್ದು ಕಾಣುತ್ತದೆ. ಅವರ ಸ್ನೇಹಿತರೆಲ್ಲರೂ ಸೇರಿ ಅವರನ್ನು ಅಭಿನಂದಿಸುತ್ತಿರುವುದು ಉತ್ತಮವಾದ ಕೆಲಸ ಎಂದು ಹೇಳಿದರು.

ಯಾರಿಗಾದರೂ 60 ವಯಸ್ಸು ತುಂಬಿದರೆ ಸಮಾಜ ಅವರನ್ನು ಅರಳು ಮರಳು ಎಂದು ಹೇಳುವುದುಂಟು. ಆದರೆ ಶ್ರೀ ಜಿ.ಕೆ. ವಿಷಯದಲ್ಲಿ ಅದು ಬೇರೆಯದೇ ಅರ್ಥ ಕೊಡುತ್ತದೆ. ಅವರಿಗೆ ವಯಸ್ಸು 70 ಆದರೂ ಅವರು ಮರಳಿ ಅರಳುವಂತಾಗಿದ್ದಾರೆ. ಹೀಗಾಗಿ ಜಿ.ಕೆ. ಅವರ ವಿಚಾರದಲ್ಲಿ ಹೆಚ್ಚು ಹೇಳುವುದೇನಿಲ್ಲ. ನಾನೂ ಸಂತೋಷವಾಗಿರಬೇಕು. ಸಮಾಜ ಕೂಡ ಸಂತೋಷವಾಗಿರಬೇಕು ಎನ್ನುವ ಅವರು ಇತರರಿಗೆ ಮಾದರಿಯಾಗುವಂತೆ ಬದುಕುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿ.ಕೆ. ಹಾಗೂ ಡಾ. ಈಶ್ವರಿ ಅವರ ಮಕ್ಕಳಾದ ಡಾ. ಸವಿತ ಹಾಗೂ ಡಾ. ರೋಹಿಣಿ ಅವರು ಪ್ರಾರಂಭಿಕ ದೇಣಿಗೆಯಾಗಿ ಫೌಂಡೇಷನ್‌ಗೆ 10 ಲಕ್ಷ ರೂ.ಗಳನ್ನು ನೀಡಿದರು. (ಸಮಾಜದಲ್ಲಿ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಹಾಗೂ ಇನ್ನಿತರ ಚಟುವಟಿಕೆಗಳಿಗಾಗಿ ಫೌಂಡೇಷನ್ ವತಿಯಿಂದ ನೆರವು ನೀಡಲು)



ಫೌಂಡೇಷನ್ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿದ ಪರಮಪೂಜ್ಯರು, ಇದು ಉತ್ತಮವಾದ ಕಾರ್ಯ. ತಮ್ಮ ತಾಯಿಯ ನೆನಪಿಗಾಗಿ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗುವಂತೆ ಅವರ ಮಕ್ಕಳು ಫೌಂಡೇಷನ್ ಆರಂಭಕ್ಕೆ ಕಾರಣರಾಗಿದ್ದಾರೆ. ಅವರ ಉದ್ದೇಶ ಸಾರ್ಥಕತೆಯನ್ನು ಕಾಣಲಿ ಎಂದು ಹಾರೈಸಿದರು. ಮಕ್ಕಳು ನೀಡಿದ 10 ಲಕ್ಷ ರೂ.ಗಳ ಚೆಕ್‌ನ್ನು ಪರಮಪೂಜ್ಯ ಜಗದ್ಗುರುಗಳವರು ಜಿ.ಕೆ. ಅವರಿಗೆ ಹಸ್ತಾಂತರಿಸಿದರು.

ಸಮಾರಂಭದಲ್ಲಿ ರೊಟೇರಿಯನ್ ಡಾ. ಪಿ. ಆನಂದ್, ಶ್ರೀ ಅರುಣ್ ಚಿಂತೋಪಂಥ್, ಅಭಿನಂದನಾ ಸಮಿತಿ ಬಿ. ಕಾಲ್ಯ, ಡಾ. ರೋಹಿಣಿ ಮುಂತಾದವರು ಹಾಜರಿದ್ದರು.

**ಬಾಲ್ಯದಲ್ಲೇ ಪರಿಸರ ಕಾಳಜಿ ಮೂಡಿಸಿ**

ಮಕ್ಕಳಿಗೆ ಬಾಲ್ಯದಲ್ಲೇ ಪರಿಸರದ ಬಗ್ಗೆ ಆಸಕ್ತಿ ಬೆಳೆಸುವುದರಿಂದ ಪರಿಸರದ ಮೇಲಾಗುವ ಒತ್ತಡ ತಡೆಯಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ದಿನಾಂಕ 11.1.2015 ರಂದು ನಗರದ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಆಯೋಜಿಸಿದ್ದ ಯುವ ಸಂಘಟನೆ ಸಮಾರೋಪ ಸಮಾರಂಭದಲ್ಲಿ ಪರಮಪೂಜ್ಯರು ಮಾತನಾಡಿದರು.

ಪ್ರತಿಯೊಂದು ಮಗುವಿಗೂ ಪ್ರಾಣಿಗಳ ಬಗ್ಗೆ ಸಹಜ ಕುತೂಹಲವಿರುತ್ತದೆ. ಹೀಗಾಗಿಯೇ ಬಹುತೇಕ ಪೋಷಕರು ಮಕ್ಕಳ ಒತ್ತಾಯಕ್ಕಾಗಿ ಮನೆಯಲ್ಲಿ ಸಾಕುಪ್ರಾಣಿಗಳನ್ನು ಇಟ್ಟುಕೊಂಡಿರುತ್ತಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಎಲ್ಲೆಡೆ ಅರಣ್ಯ ಅತಿಕ್ರಮಣಗಳು ಹೆಚ್ಚಾಗುತ್ತಿದ್ದು, ಪರಿಸರ ನಾಶವಾಗುತ್ತಿದೆ ಎಂದರು.

ಅತಿಯಾಗುತ್ತಿರುವ ಅರಣ್ಯ ನಾಶದಿಂದ ಕಾಡು ಪ್ರಾಣಿಗಳು ಬೇರೆ ಸ್ಥಳ ನೋಡಿಕೊಳ್ಳುವಂತಾಗಿದೆ. ಹೀಗಾಗಿ ಪ್ರಾಣಿಗಳು ಕಾಡು ಬಿಟ್ಟು ನಾಡಿನತ್ತ ಬರುತ್ತಿವೆ. ಹೀಗಾಗಿ ಮಕ್ಕಳಲ್ಲಿ ಬಾಲ್ಯದಲ್ಲೇ ಪರಿಸರ ಪ್ರಜ್ಞೆ ಬೆಳೆಸಿದರೆ ಪರಿಸರ ನಾಶ ತಡೆಯಲು ಸಾಧ್ಯ ಎಂದು ಪರಮಪೂಜ್ಯರು ತಿಳಿಸಿದರು.

**ಪರಿಸರ ಜಾಗೃತಿ :** ಮಕ್ಕಳಲ್ಲಿ ಪರಿಸರ ಪ್ರಜ್ಞೆ ಮೂಡಿಸುವ ಸಲುವಾಗಿ ಮೃಗಾಲಯದ ವತಿಯಿಂದ ಕಳೆದ ಹಲವು ವರ್ಷದಿಂದ ಯುವ ಸಂಘಟನೆ ಕಾರ್ಯಕ್ರಮ ನಡೆಸಲಾಗುತ್ತಿದೆ. ಅದರಂತೆ ಪ್ರಸಕ್ತ ಸಾಲಿನಲ್ಲಿ 36 ಶಾಲಾ ಕಾಲೇಜುಗಳಿಂದ ಆಗಮಿಸಿದ್ದ 12 ರಿಂದ 18 ವರ್ಷದೊಳಗಿನ 38 ಗಂಡು ಹಾಗೂ 22 ಹೆಣ್ಣುಮಕ್ಕಳು ಸೇರಿದಂತೆ ಒಟ್ಟು 60 ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲಾಯಿತು.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷೆ ಶ್ರೀಮತಿ ರೆಹನಾ ಭಾನು, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀ ಆರ್.ಎಸ್. ಸುರೇಶ್, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಪಿ. ರವಿ, ಮೃಗಾಲಯದ ವೈದ್ಯಾಧಿಕಾರಿ ಶ್ರೀ ಸಿ. ಸುರೇಶ್ ಇತರರಿದ್ದರು.

**ದಯೆ, ಪ್ರೀತಿ ಇಲ್ಲದ ಧರ್ಮ ಧರ್ಮವೇ ಅಲ್ಲ**

ಇದೇ ಮೊದಲಬಾರಿಗೆ ಮೈಸೂರಿನಿಂದ ಸಿ.ಎಸ್.ಐ. ದಕ್ಷಿಣ ಕರ್ನಾಟಕ ಡಯಾಬಿಟಿಸ್ (ಕೆಎಸ್‌ಡಿ)ಗೆ ನೂತನ ಧರ್ಮಾಧ್ಯಕ್ಷರಾಗಿ ಆಯ್ಕೆಗೊಂಡಿರುವ ರೆವೆರೆಂಡ್ ಮೋಹನ್ ಮನೋರಾಜ್ ಅವರನ್ನು ಸೌಹಾರ್ದ ಸಂಜೆಯಲ್ಲಿ ಸತ್ಕರಿಸಲಾಯಿತು.

ದಿನಾಂಕ 11.1.2015 ರಂದು ನಗರದ ಸಿಎಸ್‌ಐ. ಹಾರ್ಡ್ವಿಕ್ ಬೋರ್ಡಿಂಗ್ ಹೋಂ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಗಳ ಧರ್ಮಗುರುಗಳು ಒಂದೇ ವೇದಿಕೆಯ ಮೇಲೆ ಮೋಹನ್ ಅವರನ್ನು ಅಭಿನಂದಿಸಿದರು.

ಪರಮಪೂಜ್ಯ ಜಗದ್ಗುರುಗಳು, ಇಸ್ಲಾಂ ಧರ್ಮಗುರು ಮೌಲಾನಾ ಆಲ್ ಹಜ್ ಮೊಹಮ್ಮದ್ ಉಸ್ಮಾನ್ ಶರೀಫ್ ಸರ್ ಖಾಜಿ ಮತ್ತು ಮೈಸೂರಿನ ಬಿಷಪ್ ರೆವರೆಂಡ್ ಡಾ. ಥಾಮಸ್ ಆಂತೋನಿ ವಾಳಪಿಳ್ಳೆ ಸಾನ್ನಿಧ್ಯ ವಹಿಸಿದ್ದರು.

ಮೋಹನ್ ಅವರು ಕೆಎಸ್‌ಡಿಗೆ ಬಿಷಪ್ ಆಗಿ ನೇಮಕವಾಗಿರುವುದು ಮೈಸೂರಿನ ಎಲ್ಲರಿಗೂ ಸಂದ ಗೌರವ. ಇವತ್ತು ಸಮಾಜದಲ್ಲಿ ನೆಮ್ಮದಿ ಕೆಡಿಸಿರುವ ಭಯೋತ್ಪಾದನೆ, ಅತ್ಯಾಚಾರ ಸೇರಿದಂತೆ ಮತ್ತಿತರ ಅನಿಷ್ಟಗಳನ್ನು ತೊಡೆದುಹಾಕಲು ಎಲ್ಲ ಧರ್ಮದ ಮುಖಂಡರೂ ಮುಂದಾಗಬೇಕು. ಪ್ರೀತಿಯ ಸಂದೇಶ ನೀಡಿದ ಏಸು, ದಯೆಯೇ ಧರ್ಮದ ಮೂಲವೆಂದ ಬಸವಣ್ಣನಂತಹ ಹಲವಾರು ಸಂತರು ಬಾಳಿದ ನಾಡಿನಲ್ಲಿ ಪ್ರೀತಿ, ಶಾಂತಿ, ನೆಮ್ಮದಿ ಸ್ಥಾಪಿಸುವ ಗುರುತರವಾದ ಜವಾಬ್ದಾರಿ ಎಲ್ಲರದ್ದೂ ಆಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಮನುಷ್ಯರ ನಡುವೆ ಪರಸ್ಪರ ಪ್ರೀತಿ, ವಿಶ್ವಾಸ ಬೆಳೆದಾಗ ಮಾತ್ರ ಸಮಾಜದಲ್ಲಿ ಉತ್ತಮ ಬದಲಾವಣೆ ಸಾಧ್ಯ. ದಯೆ, ಪ್ರೀತಿ ಇಲ್ಲದ ಧರ್ಮ ಧರ್ಮವೇ ಅಲ್ಲ. ಭಯದಿಂದ ಅನುಸರಿಸುವುದು ಧರ್ಮವಲ್ಲ. ಪ್ರೀತಿಯಿಂದ ಅಪ್ಪಿಕೊಂಡು ಪಾಲಿಸುವುದೇ ನಿಜಧರ್ಮ ಎಂದು ಪರಮಪೂಜ್ಯರು ತಿಳಿಸಿದರು.

ಯಾವುದೇ ಧರ್ಮವು ಪರಸ್ಪರರ ನಡುವೆ ದ್ವೇಷವನ್ನು ಬೋಧಿಸುವುದಿಲ್ಲ. ಈ ದೇಶದಲ್ಲಿ ಪ್ರತಿದಿನವೂ ಗಂಟೆಯ ನಿನಾದ, ಪ್ರಾರ್ಥನೆಗಳ ಧ್ವನಿಗಳು ಏಕಕಾಲದಲ್ಲಿ ಕೇಳುತ್ತವೆ. ಇಂತಹ ಸೌಹಾರ್ದ ವಾತಾವರಣವು ನೂರಾರು ವರ್ಷಗಳಿಂದ ಇದೆ.



ಎಲ್ಲರೂ ಧರ್ಮ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ಅದೇ ರೀತಿ ಬಾಳುತ್ತಿದ್ದಾರೆ. ಇಂತಹ ವಾತಾವರಣ ಭವಿಷ್ಯದಲ್ಲಿಯೂ ಮುಂದುವರಿಯಬೇಕು ಎಂದು ಇಸ್ಲಾಂ ಧರ್ಮಗುರು ಮೌಲಾನಾ ಆಲ್ ಹಜ್ ಮೊಹಮ್ಮದ್ ಉಸ್ಮಾನ್ ಶರೀಫ್ ಸರ್‌ಖಾಜಿ ಹೇಳಿದರು.

ಕಾರ್ಯಕ್ರಮದಲ್ಲಿ ಮೋಹನ್ ಮನೋರಾಜ್ ಅವರ ಪತ್ನಿ ಶ್ರೀಮತಿ ಪ್ರೇಮಾ ಸರೋಜಿನಿ, ಸಿಎಸ್‌ಐ ಕೆಎಸ್‌ಡಿ ಉಪಾಧ್ಯಕ್ಷ ಶ್ರೀ ಕೆ.ಪಿ. ದೇವಕುಮಾರ್, ಶ್ರೀ ಸಾಲೋಮನ್ ಥಾಮಸ್, ಕಾರ್ಯದರ್ಶಿ ಶ್ರೀ ಐಸಾಕ್ ವಿಜಯಶೇಖರ್, ಮೈಸೂರು ಪ್ರಾಂತ್ಯ ಪರಿಷತ್ ಅಧ್ಯಕ್ಷ ಶ್ರೀ ವಿಕ್ಟರ್, ವಕೀಲರಾದ ಶ್ರೀ ಕ್ರಿಸ್ಟಿನಾ ರತ್ನಾಕರ್, ಅರಣ್ಯ ಇಲಾಖೆ ನಿವೃತ್ತ ಅಧಿಕಾರಿ ಶ್ರೀ ದೊರೆರಾಜ್, ಕಾಡಾ ಅಧ್ಯಕ್ಷ ಶ್ರೀ ಸಿ. ದಾಸೇಗೌಡ ಹಾಜರಿದ್ದರು.

**ಆರೋಗ್ಯವಿಲ್ಲದಿದ್ದರೆ ಬದುಕಿನಲ್ಲಿ ಸಾಧನೆ ಅಸಾಧ್ಯ**

ಸಂಪತ್ತು, ಐಶ್ವರ್ಯ, ಶ್ರೀಮಂತಿಕೆ ಎಷ್ಟೇ ಇದ್ದರೂ ಆರೋಗ್ಯ ಇಲ್ಲವೆಂದಾದರೆ ಬದುಕಿನಲ್ಲಿ ಯಾವುದೇ ಸಾಧನೆ ಮಾಡಲಾಗದು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ದಿನಾಂಕ 14.1.2015 ರಂದು ಉಡುಪಿ ಸರ್ವೀಸ್ ಬಸ್ ನಿಲ್ದಾಣದ ಬಳಿಯ ಆದರ್ಶ ಆಸ್ಪತ್ರೆಯ ನೂತನ ವಿಭಾಗವನ್ನು ಉದ್ಘಾಟಿಸಿ ಪರಮಪೂಜ್ಯರು ಆಶೀರ್ವಚನ ನೀಡಿದರು.

ಜನರ ಮನಸ್ಸಿಗೆ ತನ್ನ ಸಂದೇಶಗಳ ಮೂಲಕ ಸಾಂತ್ವನ ನೀಡುವ ಶ್ರೀಕೃಷ್ಣ ಈ ಜಗತ್ತಿನ ಬಲು ದೊಡ್ಡ ಅಧ್ಯಾತ್ಮ ವೈದ್ಯ. ಉತ್ತಮ ನೀರು, ಗಾಳಿ, ಆಹಾರ ಸೇವನೆ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಅದಮಾರು ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು ಆಶೀರ್ವಚನ ನೀಡಿ, ವೈದ್ಯನ ಔಷಧಿಗಿಂತ ಆತನ ಮಾತು ಮತ್ತು ಮಂದಹಾಸವೇ ರೋಗಿಯ ಶೇ. 75 ರೋಗ ವಾಸಿಮಾಡುತ್ತದೆ. ತಾಳ್ಮೆಯಿಲ್ಲದೆ ಜನರ ಆರೋಗ್ಯ ಹಾಳಾಗಿದೆ. ವೈದ್ಯರೂ ತಾಳ್ಮೆಯಿಂದ ರೋಗಿಗಳ ಮಾತು, ರೋಗದ ಗುಟ್ಟು ಆಲಿಸಿ ಚಿಕಿತ್ಸೆ ನೀಡಬೇಕು ಎಂದರು.

ಉಡುಪಿ ಧರ್ಮಪ್ರಾಂತ್ಯದ ವಿಕಾರ್ ಜನರಲ್ ಶ್ರೀ ವೆ.ರೆ. ಮೆಸೆಂಜರ್ ಬ್ಯಾಪಿಸ್ಟ್ ಮಿನೇರಿಝಸ್ ಮಾತನಾಡಿ, ಪ್ರೀತಿಸಿದ ತಂದೆ, ತಾಯಿಯ ಹೃದಯವನ್ನು ವಂಚಿಸಬಾರದು ಎಂದರು.

ರಾಜ್ಯಸಭೆ ಸದಸ್ಯ ಶ್ರೀ ಆಸ್ಕರ್ ಫರ್ನಾಂಡೀಸ್ ಮಾತನಾಡಿ, ಯುವಜನತೆಗೆ ಬದುಕಿನ ದಾರಿ ತೋರುವುದೇ ದೇವರ ಸೇವೆ ಎಂದು ಹೇಳಿದರು.

ಸಮಾರಂಭದಲ್ಲಿ ಆದರ್ಶ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಜಿ.ಎಸ್. ಚಂದ್ರಶೇಖರ್, ಉಡುಪಿ ಶಾಸಕ ಶ್ರೀ ಪ್ರಮೋದ್ ಮಧ್ವರಾಜ್, ರಾಜ್ಯ ನಗರಾಭಿವೃದ್ಧಿ ಸಚಿವ ಶ್ರೀ ವಿನಯ ಕುಮಾರ್ ಸೊರಕೆ, ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ಡಾ. ನಿ.ಬೀ. ವಿಜಯ ಬಲ್ಲಾಳ್, ಮಾಜಿ ಸಂಸದ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ಮಾತನಾಡಿದರು.

**ಇತಿಹಾಸ ಬರಹ ನಿಷ್ಠುರವಿರಬೇಕು – ಡಾ. ಷ. ಶೆಟ್ಟರ್**

"ವೀರಶೈವ ಅಥವಾ ಲಿಂಗಾಯತ ಒಂದೇ ಅಥವಾ ಭಿನ್ನವೇ ಎನ್ನುವ ಅನಗತ್ಯ ಪ್ರಶ್ನೆ ಎತ್ತುವ ಮೂಲಕ ಸಮಾಜವನ್ನು ಇಬ್ಭಾಗವಾಗಿಸುವ ಪ್ರಯತ್ನ ನಡೆಯುತ್ತಿರುವ ಈ ಕಾಲದಲ್ಲಿ ವೀರಶೈವ ಇತಿಹಾಸವನ್ನು ನಿಷ್ಠುರವಾಗಿ ಬರೆಯಲು ಟೊಂಕ ಕಟ್ಟಿ ನಿಲ್ಲಬೇಕಿದೆ" ಎಂದು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಸಂದರ್ಶಕ ಪ್ರಾಧ್ಯಾಪಕ ಡಾ. ಷ. ಶೆಟ್ಟರ್‌ರವರು ಅಭಿಪ್ರಾಯಪಟ್ಟರು.

ದಿನಾಂಕ 25.3.2015 ರಂದು ಪರಮಪೂಜ್ಯ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯು ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ ಹಾಗೂ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ವೈದಿಕ ಯುಗದ ನಂಬಿಕೆಗಳನ್ನು ಪ್ರಶ್ನಿಸಿ ಉದ್ಭವಿಸಿದ್ದು ವೀರಶೈವ ಧರ್ಮ. ಬುದ್ಧನ ನಂತರ ಸಮಾಜದಲ್ಲಿ ಹೊಸ ಚಿಂತನೆ ಹುಟ್ಟುಹಾಕಿದವರು ಬಸವಣ್ಣ. ವೀರಶೈವ ಧರ್ಮ ಮತ್ತು ವಚನ ಸಾಹಿತ್ಯವನ್ನು 12 ನೇ ಶತಮಾನಕ್ಕೆ ಸೀಮಿತಗೊಳಿಸಿ ನೋಡುವ ಮನೋಭಾವ ಇಂದು ಹುಟ್ಟಿಕೊಂಡಿದೆ. ಒಂದು ಧರ್ಮದ ಪರಂಪರೆ ಒಂದು ಶತಮಾನಕ್ಕೆ ಒಬ್ಬ ವ್ಯಕ್ತಿಗೆ ಸೀಮಿತವಾಗಿರಲು ಸಾಧ್ಯವಿಲ್ಲ. ಅದೊಂದು ನಿರಂತರವಾದ ಪ್ರವಾಹ" ಎಂದು ಡಾ. ಷಟ್ಟರ್ ವಿಶ್ಲೇಷಿಸಿದರು.

"ಎಲ್ಲ ಧರ್ಮದ ತತ್ವಗಳೂ ಅದ್ಭುತವಾಗಿರುತ್ತವೆ. ಆದರೆ ಆ ತತ್ವಗಳು ಆಚರಣೆಯಲ್ಲಿ ಅದ್ಭುತವಾಗಿರುವುದಿಲ್ಲ. ವೀರಶೈವ ಧರ್ಮವೂ ಇದಕ್ಕೆ ಹೊರತಲ್ಲ. ಕುಲ ಮತ ಬೇರೆ ಯಾವುದೂ ಇಲ್ಲ, ಎಲ್ಲ ಜನಾಂಗವೂ ಒಂದೇ ಎಂಬ ತತ್ವವನ್ನು ಕಡೆಗಾಣಿಸಿ ಜಾತಿಮತಗಳನ್ನು ಪ್ರೋತ್ಸಾಹಿಸುತ್ತ ಬಂದಿದ್ದೇವೆ. ಪ್ರತಿಯೊಂದು ಧರ್ಮವೂ ಹೊಂದಾಣಿಕೆ ಮಾಡಿಕೊಂಡೇ ಬೆಳೆಯುತ್ತದೆ. ಯಾವ ಹಂತದಲ್ಲಿ ಯಾವ ಬದಲಾವಣೆಯನ್ನು ಮಾಡಿಕೊಳ್ಳಲಾಯಿತು ಎಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕಾದ ಅಗತ್ಯ ಇದೆ" ಎಂದು ಅವರು ನುಡಿದರು.

"ಛಂದಸ್ಸು ಮತ್ತು ಚಂಪೂ ಶೈಲಿಯನ್ನು ಉಲ್ಲಂಘಿಸಿದ್ದು ವಚನ ಸಾಹಿತ್ಯದ



ಶಕ್ತಿ. ವಚನಗಳು ಸರಳ ಭಾಷೆಯಲ್ಲಿ ಜನರನ್ನು ತಲುಪಿದವು. ವೀರಶೈವ ಧರ್ಮ ಮತ್ತು ಸಾಹಿತ್ಯ ತಾತ್ವಿಕವಾಗಿ ಅದ್ಭುತವಾಗಿದೆ. ಇಂಥ ವಿಶಿಷ್ಟ ಪರಂಪರೆ ಹೊಂದಿರುವ ನಮಗೆ ಆ ಪರಂಪರೆಯ ವಾರಸುದಾರರು ಎಂದು ಹೇಳಿಕೊಳ್ಳುವ ಯೋಗ್ಯತೆ ಇಲ್ಲ. ಈ ಪರಂಪರೆಯಲ್ಲಿ ಒಳಪಂಗಡಗಳು, ಅವುಗಳ ವಿಭಿನ್ನ ಆಚರಣೆಗಳ ಉಗಮಕ್ಕೆ ಕಾರಣ ಯಾರು ಎಂಬುದನ್ನು ವಾರಸುದಾರರು ಪತ್ತೆಹಚ್ಚಬೇಕಿದೆ" ಎಂದು ನುಡಿದರು.

"ಎ ಸರ್ವೆ ಆಫ್ ವೀರಶೈವ ರಿಲಿಜನ್ ಅಂಡ್ ಲಿಟರೇಚರ್" ಎಂಬ ಕೃತಿಗಾಗಿ ಪ್ರೊ. ಚಂದ್ರಶೇಖರಯ್ಯನವರಿಗೆ 2013 ನೇ ಸಾಲಿನ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತಿ ಶ್ರೀ ಜಯದೇವಪ್ಪ ಜೈನಕೇರಿ ಮತ್ತು ಪ್ರೊ. ಸಿ. ನಾಗಣ್ಣ ಅವರುಗಳು ಕೃತಿಗಳನ್ನು ಕುರಿತು ಮಾತನಾಡಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಶ್ರೀ ಬಿ.ಎನ್. ಬೆಟ್‌ಕೆರೂರ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

**ಸಮಾರಂಭದಲ್ಲಿ ಕೆಳಕಂಡ ಕೃತಿಗಳು ಲೋಕಾರ್ಪಣೆಗೊಂಡವು**

| | |
|---|---|
| ಅಲ್ಲಮ ಪ್ರಭುದೇವರ ಟೀಕಿನ ವಚನಗಳು (2ನೇ ಆವೃತ್ತಿ) | ವಿದ್ವಾನ್ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮೀಜಿ |
| ದಿ ವೀರಶೈವ ಸೇಂಟ್ಸ್: ಎ ಸ್ಟಡಿ (2ನೇ ಆವೃತ್ತಿ) | ಡಾ. ಎಚ್. ತಿಪ್ಪೇರುದ್ರಸ್ವಾಮಿ |
| ಡಿವೋಷನಲ್ ಸೇಯಿಂಗ್ಸ್ ಆಫ್ ಬಸವೇಶ್ವರ (3ನೇ ಆವೃತ್ತಿ) | ಶ್ರೀ ಸಿದ್ಧೇಶ್ವರ ಸ್ವಾಮೀಜಿ |
| ದಿವ್ಯ ಚೇತನ | ಪ್ರೊ. ಬಿ. ಸೋಮಶೇಖರಪ್ಪ |
| ಘನಲಿಂಗ ಶಿವಯೋಗಿ: ವಿಚಾರಸಂಕಿರಣ | ಪ್ರೊ. ಚಂದ್ರಶೇಖರಯ್ಯ |
| ವಚನಗಳಲ್ಲಿ ಭಕ್ತಿ | ಡಾ. ಸಂಗಮೇಶ ಬಿರಾದಾರ |
| ವಚನಗಳಲ್ಲಿ ಸ್ಥಾವರ-ಜಂಗಮ | ಡಾ. ಬಿ.ವಿ. ವಸಂತಕುಮಾರ್ |
| ವಚನಗಳಲ್ಲಿ ದೃಷ್ಟಾಂತ | ಡಾ. ರಾಜಶೇಖರ ಜಮದಂಡಿ |

**ನಗರದ ಸಂಸ್ಕೃತಿಗೆ ಮರುಳಾಗದೆ ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು**

ದಿನಾಂಕ 6.3.2015 ರಂದು ಹೆಗ್ಗಡದೇವನಕೋಟೆ ತಾಲ್ಲೂಕು ಮನುಗನಹಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಯ ವಿಸ್ತೃತ ಕಟ್ಟಡದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಪರಮಪೂಜ್ಯ ಜಗದ್ಗುರುಗಳವರು,

"ಪ್ರಕೃತಿಸಹಜ ಗಾಳಿ, ನೀರು, ಆಹಾರವನ್ನು ಸೇವಿಸುವುದರಿಂದ ಬದುಕು ಮತ್ತು ಆರೋಗ್ಯ ಹಸನಾಗಿರುತ್ತದೆ. ಸಂಸಾರದಲ್ಲಿ ಅನೇಕ ಸಮಸ್ಯೆಗಳು, ಏರುಪೇರುಗಳು ಬರುತ್ತವೆ. ಅದನ್ನೇ ದೊಡ್ಡದು ಮಾಡಿಕೊಳ್ಳದೆ ಅನುಸರಣೆಯಿಂದ ಜೀವನ ನಿರ್ವಹಿಸುವುದು ಮುಖ್ಯ. ಈಗ ಅವಿಭಕ್ತ ಕುಟುಂಬಗಳು ಮರೆಯಾಗಿವೆ. ನಗರದ ಸಂಸ್ಕೃತಿಗೆ ಮರುಳಾಗದೆ ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು. ಸತ್ಯ ಮತ್ತು ಆಚಾರವಿರುವೆಡೆ ಅದೇ ಸ್ವರ್ಗ. ಆಚಾರಸಂಪನ್ನರು ಇರುವೆಡೆಯಲ್ಲೇ ಅದನ್ನು ಕಾಣಲು ಸಾಧ್ಯ. ಮಕ್ಕಳಲ್ಲಿ ಶಿಕ್ಷಣದೊಂದಿಗೆ ಸಂಸ್ಕೃತಿ, ಗುರುಹಿರಿಯರು, ಶಿಕ್ಷಕರ ಬಗೆಗೆ ಗೌರವವನ್ನು, ದೇಶಭಕ್ತಿಯನ್ನು ಬೆಳೆಸುವಂತಾಗಬೇಕು" ಎಂದು ನುಡಿದರು.

"ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಪೋಷಕರು ಸಮಯವನ್ನು ಮೀಸಲಿಡಬೇಕು" ಎಂದು ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವ ಶ್ರೀ ಯು.ಟಿ. ಖಾದರ್‌ರವರು ಪೋಷಕರಿಗೆ ಕಿವಿಮಾತು ಹೇಳಿದರು.

"ಇತರ ಅನಾವಶ್ಯಕ ವಿಚಾರಗಳಲ್ಲಿ ಹೆಚ್ಚು ಕಾಲಹರಣ ಮಾಡುವ ಬದಲು ಮಕ್ಕಳ ಶಾಲಾ ಚಟುವಟಿಕೆಗಳ ಬಗೆಗೆ ತಂದೆ-ತಾಯಿಯರು ಆಸಕ್ತಿ ತೋರಬೇಕು. ಆಗ ಮಾತ್ರ ನೀವು ನಿಮ್ಮ ಮಕ್ಕಳ ಬಗ್ಗೆ ಕಾಣುವ ಕನಸು ನನಸಾಗುತ್ತದೆ. ಮಕ್ಕಳನ್ನು ದೇಶದ ಸತ್ಪ್ರಜೆಗಳಾಗಿ ರೂಪಿಸುವುದೇ ನಿಮ್ಮ ಬದುಕಿನ ಗುರಿಯಾಗಬೇಕು. ನಮ್ಮೆಲ್ಲರ ಜೀವನವನ್ನು ಸಮೃದ್ಧಿಗೊಳಿಸುವುದೇ ಮಠಮಾನ್ಯಗಳ ಗುರಿಯಾಗಿದೆ" ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಂದಾಯ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಆದ ಶ್ರೀ ವಿ. ಶ್ರೀನಿವಾಸ ಪ್ರಸಾದ್‌ರವರು, "ಶಿಕ್ಷಣದ ಕೊರತೆಯಿರುವೆಡೆ ಸಾಮರಸ್ಯದ ಕೊರತೆ ಕಂಡುಬರುತ್ತದೆ. ಶಿಕ್ಷಣ ಎಂದರೆ ಜ್ಞಾನ, ಬುದ್ಧಿವಂತಿಕೆ. ಮನುಷ್ಯ ಮನುಷ್ಯನನ್ನು ಅರಿತುಕೊಳ್ಳುವುದೇ ನಾಗರಿಕ ಸಮಾಜದ ಲಕ್ಷಣ. ಮನುಷ್ಯತ್ವದ ತಳಹದಿಯ ಮೇಲೆ ಸಮಾಜವನ್ನು ಕಟ್ಟಬೇಕು.

ಕಂಪ್ಯೂಟರ್ ಲ್ಯಾಬ್ ಅನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಶ್ರೀ ಎಸ್. ಚಿಕ್ಕಮಾದುರವರು "ವಿದ್ಯೆ ಕಲಿಯಬೇಕಾದರೆ ಸುಂದರ ಪರಿಸರವೂ ಮುಖ್ಯ. ಈ ಭಾಗದಲ್ಲಿ ಅತ್ಯಂತ ಭವ್ಯವಾದ ಕಟ್ಟಡ ನಿರ್ಮಿಸಿರುವ ಜೆಎಸ್‌ಎಸ್ ಸಂಸ್ಥೆಯು ಜನರ ಉತ್ತಮ ವ್ಯಕ್ತಿತ್ವ ರೂಪಿಸುವಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಿದೆ" ಎಂದರು.

ಮೈಸೂರು ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, ಸದಸ್ಯರಾದ ಶ್ರೀಮತಿ ಎಚ್.ಆರ್. ಭಾಗ್ಯಲಕ್ಷ್ಮಿ, ಶ್ರೀ ನಿಂಗರಾಜು, ಮಾಜಿ ಸಚಿವ ಶ್ರೀ ಎಂ. ಶಿವಣ್ಣ, ಮೈಸೂರು ಜಿಲ್ಲಾ ಪಂಚಾಯತ್ ಉಪಾಧ್ಯಕ್ಷ ಶ್ರೀ ಎಲ್. ಮಾದಪ್ಪ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



**ನೈತಿಕತೆ, ರಾಷ್ಟ್ರೀಯತೆ, ಸಹೋದರಭಾವಗಳು ವ್ಯಕ್ತಿತ್ವಕ್ಕೆ ಒಂದು ಗೌರವ ತರುತ್ತವೆ**

ದಿನಾಂಕ 7.3.2015 ರಂದು ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆಯ ಜೆಎಸ್‌ಎಸ್ ಪ್ರೌಢಶಾಲೆಯ ಕಟ್ಟಡದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯರು, "ಮನುಷ್ಯನಿಗೆ ಜ್ಞಾನಸಂಪಾದನೆ ಬಹಳ ಅವಶ್ಯಕ. ವಿದ್ವಾಂಸನಾದವನನ್ನು ಇಡೀ ಜಗತ್ತೇ ಗೌರವಿಸುತ್ತದೆ. ಕೇವಲ ಪದವಿಗಳನ್ನು ಗಳಿಸುವುದಷ್ಟೇ ಜ್ಞಾನವಲ್ಲ. ಇತ್ತೀಚಿನ ದಿನಗಳಲ್ಲಿ ಯಂತ್ರಗಳಿಗೆ ದಾಸನಾಗುತ್ತಿರುವ ಮಾನವ, ಮಾನವೀಯ ಸಂಬಂಧಗಳಿಂದ ದೂರವಾಗುತ್ತಿದ್ದಾನೆ. ನೈತಿಕತೆ, ರಾಷ್ಟ್ರೀಯತೆ, ಸಹೋದರಭಾವಗಳು ವ್ಯಕ್ತಿತ್ವಕ್ಕೆ ಒಂದು ಗೌರವ ತರುತ್ತವೆ. ಹೊರಗಿನ ವಸ್ತುಗಳಿಗೆ ಆಕರ್ಷಿತರಾಗುವುದಕ್ಕಿಂತಲೂ ಅಂತರಂಗದ ಪರಿಶುದ್ಧತೆಗೆ ಹೆಚ್ಚು ಮಹತ್ವ ನೀಡಬೇಕು" ಎಂದು ಹೇಳಿದರು.

"ಕುಡಿಯುವ ನೀರಿನ ಯೋಜನೆಯನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಲು ಸರ್ಕಾರ ಬದ್ಧವಾಗಿದೆ" ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಶ್ರೀ ಎಚ್.ಕೆ. ಪಾಟೀಲ್‌ರವರು ತಿಳಿಸಿದರು.

"ಗ್ರಾಮೀಣ ಭಾಗದ ಕುಡಿಯುವ ನೀರಿನ ಯೋಜನೆಗೆ 45,000 ಕೋಟಿ ರೂ.ಗಳ ಅವಶ್ಯಕತೆ ಇದೆ. ಹನೂರು ಕ್ಷೇತ್ರದ 310 ಕೋಟಿ ರೂ.ಗಳ ಕುಡಿಯುವ ನೀರಿನ ಯೋಜನೆಯನ್ನು 2015-16ನೇ ಸಾಲಿನಲ್ಲಿ ಜಾರಿಗೊಳಿಸಲಾಗುವುದು. ಗ್ರಾಮೀಣ ರಸ್ತೆಗಳ ಉತ್ತಮ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಲಾಗಿದೆ. ಪ್ರತಿಯೊಂದು ಹಳ್ಳಿಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶದಿಂದ ಶೌಚಾಲಯ, ಬಚ್ಚಲುಮನೆ, ಕುರಿ ಕೊಟ್ಟಿಗೆ, ದನದ ಕೊಟ್ಟಿಗೆ ಮೊದಲಾದ ಯೋಜನೆಗಳನ್ನು ಜಾರಿಗೊಳಿಸಲು ಸರ್ಕಾರ ಕಟಿಬದ್ಧವಾಗಿದೆ" ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರ ಮತ್ತು ಸಕ್ಕರೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು ಆದ ಶ್ರೀ ಎಚ್.ಎಸ್. ಮಹದೇವ ಪ್ರಸಾದ್‌ರವರು "ಚಾಮರಾಜನಗರ ಜಿಲ್ಲೆಯ ಪೂರ್ಣ ಪ್ರಮಾಣದ ಅಭಿವೃದ್ಧಿಗಾಗಿ ಸರ್ಕಾರವು ಕ್ರಿಯಾಯೋಜನೆಯನ್ನು ರೂಪಿಸಿದ್ದು, ಮಹದೇಶ್ವರ ಬೆಟ್ಟದಲ್ಲಿ ಅಭಿವೃದ್ಧಿ ಪ್ರಾಧಿಕಾರ, ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ, ರಸ್ತೆಗಳ ಅಭಿವೃದ್ಧಿ, ಏತ ನೀರಾವರಿ, ಗುಂಡಾಲ್ ಜಲಾಶಯ ಅಭಿವೃದ್ಧಿ ಮುಂತಾದ ಕಾರ್ಯಗಳನ್ನು ಹಂತಹಂತವಾಗಿ ಜಾರಿಗೊಳಿಸಲಾಗುವುದು ಎಂದು ಹೇಳಿದರು.

ಕಂಪ್ಯೂಟರ್ ಲ್ಯಾಬ್ ಅನ್ನು ಉದ್ಘಾಟಿಸಿ ಮಾತನಾಡಿದ ಶಾಸಕರಾದ ಶ್ರೀ ಆರ್.

ನರೇಂದ್ರರವರು, ಕುಡಿಯುವ ನೀರು ಮತ್ತು ರಸ್ತೆ ಅಭಿವೃದ್ಧಿಗೆ ಹೆಚ್ಚು ಅನುದಾನ ಬಿಡುಗಡೆಗೊಳಿಸುವಂತೆ ಸಚಿವರಲ್ಲಿ ಮನವಿ ಮಾಡಿದರು.

ಕರ್ನಾಟಕ ಗೃಹಮಂಡಳಿಯ ಅಧ್ಯಕ್ಷರಾದ ಶ್ರೀ ಎಸ್.ಜಿ. ನಂಜಯ್ಯನಮಠ್, ಮಾಜಿ ಶಾಸಕಿ ಶ್ರೀಮತಿ ಪರಿಮಳ ನಾಗಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕೊಳ್ಳೇಗಾಲದ ಡಾ. ಶಿವರುದ್ರಸ್ವಾಮಿಯವರು ದಿವಂಗತ ಪ್ರಭುಸ್ವಾಮಿಯವರ ಹೆಸರಿನಲ್ಲಿ ದತ್ತಿ ಸ್ಥಾಪನೆಗಾಗಿ 25,000 ರೂ.ಗಳ ಚೆಕ್ಕನ್ನು ಜೆಎಸ್‌ಎಸ್ ಸಂಸ್ಥೆಗೆ ನೀಡಿದರು.

**ಬಸವ ಭವನಗಳು ಬಸವಪ್ರಜ್ಞೆಯ ಕೇಂದ್ರಗಳಾಗಬೇಕು**

ದಿನಾಂಕಗ 19.4.2015 ರಂದು ಚಾಮರಾಜನಗರ ತಾಲ್ಲೂಕು ಬಂದೀಗೌಡನ ಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಬಸವ ಭವನ ಹಾಗೂ ಜೀರ್ಣೋದ್ಧಾರ ಮಾಡಿರುವ ಶ್ರೀ ಮಕ್ಕಳ ಮಲ್ಲಪ್ಪ ದೇವಸ್ಥಾನದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಆಶೀರ್ವಚನ ನೀಡಿದರು.

ಬಸವ ಭವನಗಳು ಬಸವಪ್ರಜ್ಞೆಯ ಕೇಂದ್ರಗಳಾಗಬೇಕು, ರಾಜಕೀಯ ಕೇಂದ್ರಗಳಾಗಬಾರದು. ಗ್ರಾಮೀಣ ಜನತೆ ಚುನಾವಣೆಯ ಸಂದರ್ಭದಲ್ಲಿ ಯಾವುದೇ ಪಕ್ಷ ರಾಜಕೀಯ ಮಾಡಿದರೂ ಬೇರೆ ದಿನಗಳಲ್ಲಿ ಗ್ರಾಮದ ಒಗ್ಗಟ್ಟನ್ನು ಕಾಪಾಡಿಕೊಳ್ಳಬೇಕು ಮತ್ತು ಬಸವ ಭವನ ಕೇದ್ರವನ್ನು ಗ್ರಾಮದ ಸಾಂಸ್ಕೃತಿಕ ಬೆಳವಣಿಗೆಗೆ ಬಳಸಿಕೊಳ್ಳಬೇಕು, ವಿಶೇಷ ಉಪನ್ಯಾಸಗಳು, ಭಜನಾ ಕಲಿಕೆ, ಧಾರ್ಮಿಕ ಚಿಂತನೆ ಇವುಗಳನ್ನು ಪ್ರಚಾರ ಮಾಡುವ ಕೇಂದ್ರಗಳನ್ನಾಗಿ ಮಾಡಿಕೊಳ್ಳಬೇಕು. ಆ ಮೂಲಕ ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಪಿಡುಗನ್ನು ನಿವಾರಣೆ ಮಾಡಲು ಒಂದೇ ಮನಸ್ಸಿನಿಂದ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದರು.

ಸಮಾರಂಭದಲ್ಲಿ ಸೋಮಹಳ್ಳಿ ಮಠದ ಶ್ರೀ ಸಿದ್ಧಮಲ್ಲ ಸ್ವಾಮಿಗಳು, ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಚ್.ಎಸ್. ಮಹದೇವಪ್ರಸಾದ್, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ಡಿ.ಎಸ್. ನಾಗೇಂದ್ರ, ಶಾಸಕರಾದ ಶ್ರೀ ಧರ್ಮಸೇನಾ, ಶ್ರೀ ಸಿ. ಪುಟ್ಟರಂಗಶೆಟ್ಟಿ, ಸಂಸದ ಶ್ರೀ ಆರ್. ಧ್ರುವನಾರಾಯಣ, ಸಾಹಿತಿ ಪ್ರೊ. ಮಲೆಯೂರು ಗುರುಸ್ವಾಮಿ ಅವರುಗಳು ಭಾಗವಹಿಸಿದ್ದರು.

ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡರಾದ ಶ್ರೀ ಬಿ.ಕೆ. ರವಿಕುಮಾರ್ ಅವರು ಪ್ರಾಸ್ತಾವಿಕ ಮಾತುಗಳನ್ನು ಆಡಿ ಎಲ್ಲರನ್ನು ಸ್ವಾಗತಿಸಿದರು. □





## ಕೃತಿ ಸ್ವೀಕೃತಿ

* **From this World of Misery to the World of Bliss :** Bellavi Somashekaraiah Guruprakash, Complimentary Copy, Printing : Aditya Printers, P. 96.
* **Self Knowledge For Ultimate Happiness** : Bellavi Somashekaraiah Guruprakash, Complimentary Copy, Sujnana Prakashana, P. 60.
* **ಈ ಮಂಗತನದಿಂದ ಶ್ರೀರಂಗನೆಡೆಗೆ (ಮೋಕ್ಷಕ್ಕೆ ಮಾರ್ಗ) :** ಬೆಳ್ಳಾವಿ ಸೋಮಶೇಖರಯ್ಯ ಗುರುಪ್ರಕಾಶ್, ಸುಜನ ಪ್ರಕಾಶನ, ಗೌರವಪೂರ್ವಕ ವಿತರಣೆಗಾಗಿ.
* **ವೀರಶೈವ ಸಾಹಿತ್ಯ ಚರಿತ್ರೆ (ಸಂಪುಟ 3, ಭಾಗ-3) ಪ್ರಾಯೋಗಿಕ ನೆಲೆ :** ಡಾ. ಎಸ್. ವಿದ್ಯಾಶಂಕರ, ಪ್ರಿಯದರ್ಶಿನಿ ಪ್ರಕಾಶನ, ಪು. 750, ಬೆಲೆ ರೂ. 500/-
* **ಅಮೃತ ಕ್ಷಣ ಬಿ.ಎಸ್. ಪರಮಶಿವಯ್ಯ 75 (ಅಭಿನಂದನಾ ಸಂಪುಟ) :** ಸಂ. ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ಪ್ರೊ. ಎಂ. ಪ್ರಸನ್ನಕುಮಾರ, ಟಿ.ಎಸ್. ಗಂಗಾಧರ್, ಪ್ರಕಾಶಕರು: ಬಿ.ಎಸ್. ಪರಮಶಿವಯ್ಯ ಅಭಿಮಾನಿ ಹಾಗೂ ಹಿತೈಷಿಗಳ ಬಳಗ, ಬೆಲೆ ರೂ. 300/-
* **ವಿಷಯು ವಚನ ಸಂಪುಟಗಳು (ಸಂಪುಟ 1, ಸಂಪುಟ 2) :** ಸಂ. ಡಾ. ಸಂಗಮೇಶ ಸವದತ್ತಿಮಠ, ಪ್ರಕಾಶಕರು: ಬಿ.ಎಸ್. ಪರಮಶಿವಯ್ಯ ಅಭಿಮಾನಿ ಹಾಗೂ ಹಿತೈಷಿಗಳ ಬಳಗ.
* **ಸನ್ನಿಧಿಯಲ್ಲಿ ಸೀತಾಪುರ (ಕಥಾಪ್ರಸಂಗಗಳು):** ಡಾ. ನಾ. ಮೊಗಸಾಲೆ, ಬೆಲೆ. ರೂ. 160
* **ದೇವರು ಮತ್ತೆ ಮತ್ತೆ (ಕವನಗಳು) :** ಡಾ. ನಾ. ಮೊಗಸಾಲೆ, ಪ್ರ: ದೇಸಿಪುಸ್ತಕ, ಬೆಲೆ. ರೂ. 80/-
* **ನುಡಿಹಾರ 6:** ಸಂ. ಡಾ. ಅರುಣಕುಮಾರ್ ಎಸ್.ಆರ್., ಕನ್ನಡ ಸಂಘ ಪ್ರಕಾಶನ, ಕಾಂತಾವರ, ಬೆಲೆ ರೂ. 100/-
* **ಶ್ರೀ ಸಂತಾನ ಗಣಪತಿ ದೇವಸ್ಥಾನ ದರ್ಶನ :** ಪಿ.ಸಿ. ರಾಜಶೇಖರ ಪಡಗೂರು, ಪು. 96, ಬೆಲೆ ರೂ. 60/-
* **ಮುಸ್ಸಂಜೆ ಮಳೆಯ ನೆನಪುಗಳು :** ಡಾ. ಭ. ನಾಗರಾಜ್, ಸ್ನೇಹ ಪ್ರಕಾಶನ, ಪು. 112, ಬೆಲೆ ರೂ. 100/-
* **ಭಾರತೀಯ ವನ್ಯಜೀವಿ ನಿರ್ವಹಣಾ ಕಲೆ :** ಬಿ.ಎಂ.ಟಿ. ರಾಜೀವ್, ಶ್ರೀಕೃಷ್ಣಾ ಪ್ರಕಾಶನ, ಪು. 368, ಬೆಲೆ ರೂ. 750/-
* **ಡಾ. ಎಚ್. ತಿಪ್ಪೇರುದ್ರಸ್ವಾಮಿ :** ಪ್ರಕಾಶಗಿರಿ ಮಲ್ಲನವರ, ಪ್ರಕಾಶಕರು : ಲಿಂಗಾಯತ ಅಧ್ಯಯನ ಸಂಸ್ಥೆ, ಪು. 128, ಬೆಲೆ ರೂ. 20/-
* **ಸಂಪೂರ್ಣ ಸ್ವಾಸ್ಥ್ಯ ಸೂತ್ರ ಸೂರ್ಯ ನಮಸ್ಕಾರ :** ಡಾ. ಎಸ್.ಎನ್. ಓಂಕಾರ್, ವಸಂತ ಪ್ರಕಾಶನ. ಪು. 138, ಬೆಲೆ ರೂ. 120/-

**ಫಾರಂ (ರೂಲ್ 8 ರಂತೆ)**

**'ಪ್ರಸಾದ' ದ್ವೈಮಾಸಿಕದ ಮಾಲಿಕತ್ವ ಮತ್ತು ಇತರ ವಿವರಗಳು**

| | | | |
|---|---|---|---|
| 1. | ಪತ್ರಿಕೆಯ ಹೆಸರು<br>ಮತ್ತು ವಿಳಾಸ | : | ಪ್ರಸಾದ<br>ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು |
| 2. | ದ್ವೈಮಾಸಿಕವೆ ? ಮಾಸಿಕವೆ ?<br>ವಾರಪತ್ರಿಕೆಯೆ ? | : | ದ್ವೈಮಾಸಿಕ |
| 3. | ಪ್ರಕಾಶಕರ ಹೆಸರು ಮತ್ತು<br>ವಿಳಾಸ | : | ಬಿ.ಎನ್. ಬೆಟ್‌ಕೆರೂರ್<br>ಕಾರ್ಯನಿರ್ವಾಹಕ ಕಾರ್ಯದರ್ಶಿ<br>ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 4. | ಸಂಪಾದಕರ ಹೆಸರು<br>ಭಾರತೀಯರೆ, ಹೊರದೇಶದವರೆ ?<br>ಮತ್ತು ವಿಳಾಸ | : | ಮಲೆಯೂರು ಗುರುಸ್ವಾಮಿ<br>: ಭಾರತೀಯರು<br>: ಜೆಎಸ್ಎಸ್ ಪ್ರಕಟಣ ವಿಭಾಗ<br>ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 5. | ಮುದ್ರಕರ ಹೆಸರು ಮತ್ತು<br>ವಿಳಾಸ | : | ಶ್ರೀ ಸದ್ಗುರು ಪ್ರಿಂಟರ್ಸ್<br>ಮೈಸೂರು 570 004 |
| 6. | ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| 7. | ಪತ್ರಿಕೆಯ ಮಾಲೀಕತ್ವ ಮತ್ತು ವಿಳಾಸ<br>ಒಬ್ಬರಿಗಿಂತ ಹೆಚ್ಚು ಜನ ಅದರ<br>ಒಡೆತನದಲ್ಲಿದ್ದರೆ ಅವರ ಹೆಸರು,<br>ವಿಳಾಸ ಮತ್ತು ವಿವರಗಳು | : | ಜೆಎಸ್ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |

ಮೇಲಿನ ವಿವರಗಳು ಸತ್ಯ ಮತ್ತು ನೈಜವಾದ ವಿವರಗಳೆಂದು ಹೇಳುತ್ತೇನೆ.

ಬಿ.ಎನ್. ಬೆಟ್‌ಕೆರೂರ್
ಪ್ರಕಾಶಕ, 'ಪ್ರಸಾದ' ದ್ವೈಮಾಸಿಕ
ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು



## ಲೇಖಕರ ವಿಳಾಸ

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ್ ತಾರಾನಾಥ ಆಯುರ್ವೇದ ಚಿಕಿತ್ಸಾಲಯ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಎಚ್. ರಸ್ತೆ
ತುಮಕೂರು 572 102

**ಡಾ. ಶ್ರೀ ವಿಜಯಕುಮಾರ ಮಹಾನುಭಾವಿಗಳು**
ಜೋಗದ ಪರಮಗುರು ಪ್ರಭುದೇವ ಧರ್ಮಪೀಠ
ಮಾವಿನಗುಂಡಿ ಅಂಚೆ
ಸಿದ್ದಾಪುರ ತಾಲ್ಲೂಕು
ಉತ್ತರ ಕನ್ನಡ ಜಿಲ್ಲೆ 581 355

**ಡಾ. ಆರ್. ರಾಮಕೃಷ್ಣ**
ಪ್ರಾಧ್ಯಾಪಕ, ಮೈಸೂರು ವಿಶ್ವವಿದ್ಯಾನಿಲಯ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ
ಮೈಸೂರು 570 006




ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ ಹಾಗೂ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಾ. ಷ.ಶೆಟ್ಟರ್ ಮಾತನಾಡುತ್ತಿರುವುದು



ಎಚ್.ಡಿ. ಕೋಟೆ ತಾಲ್ಲೂಕಿನ ಮನುಗನಹಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಯ ವಿಸ್ತೃತ ಕಟ್ಟಡದ ಉದ್ಘಾಟನೆಯನ್ನು ಆರೋಗ್ಯ ಸಚಿವ ಶ್ರೀ ಯು.ಟಿ. ಖಾದರ್ ಉದ್ಘಾಟಿಸಿದರು. ಚಿತ್ರದಲ್ಲಿ ಪರಮಪೂಜ್ಯ ಶ್ರೀಗಳವರು, ಮಾಜಿ ಶಾಸಕರಾದ ಶ್ರೀ ಚಿಕ್ಕಣ್ಣ, ಶ್ರೀ ಎಂ. ಶಿವಣ್ಣ, ಸಚಿವರಾದ ಶ್ರೀ ವಿ. ಶ್ರೀನಿವಾಸಪ್ರಸಾದ್, ಶಾಸಕ ಶ್ರೀ ಎಸ್. ಚಿಕ್ಕಮಾದು ಮತ್ತು ಡಾ. ಪುಷ್ಪಾ ಅಮರನಾಥ್ ಅವರನ್ನು ಕಾಣಬಹುದು



ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆ ಜೆಎಸ್‌ಎಸ್ ಪ್ರೌಢಶಾಲೆಯ ಕಟ್ಟಡವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್‌ರವರು ಉದ್ಘಾಟಿಸಿದರು. ಚಿತ್ರದಲ್ಲಿ ಪರಮಪೂಜ್ಯ ಶ್ರೀಗಳವರು, ಸಚಿವ ಶ್ರೀ ಎಚ್.ಎಸ್. ಮಹದೇವ ಪ್ರಸಾದ್, ಶ್ರೀ ಆರ್. ನರೇಂದ್ರ, ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಎಸ್.ಬಿ. ನಂಜಯ್ಯನಮಠ್, ಶ್ರೀ ಡಿ.ಸಿ. ನಾಗೇಂದ್ರ, ಶ್ರೀ ನಾಗೇಂದ್ರಬಾಬು, ಶ್ರೀ ಮುರುಡೇಶ್ವರ ಸ್ವಾಮಿ ಮತ್ತು ಶ್ರೀ ಬಸವರಾಜು ಅವರುಗಳನ್ನು ಕಾಣಬಹುದು




ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಜರುಗಿದ "ಬೆಳದಿಂಗಳ ಸಂಗೀತ" ಕಾರ್ಯಕ್ರಮದಲ್ಲಿ ವಿದ್ವಾನ್ ಆರ್. ಸೂರ್ಯಪ್ರಕಾಶ್‌ರವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಪಕ್ಕವಾದ್ಯ ಸಹಕಾರದಲ್ಲಿ ವಿದ್ವಾನ್ ಮತ್ತೂರು ಶ್ರೀನಿಧಿ (ವಯೊಲಿನ್) ಮತ್ತು ವಿದ್ವಾನ್ ಬಿ. ರವಿಶಂಕರ (ಮೃದಂಗ)

**ಪತ್ರಿಕೆಯ ಅಪೇಕ್ಷಾ ಪತ್ರ**

☐ ಬಿಡಿ ಪ್ರತಿ: ₹ 10/-

☐ ವಾರ್ಷಿಕ: ₹ 100/-     ☐ ದಶವಾರ್ಷಿಕ: ₹ 500/-

ಹೆಸರು/ವಿಳಾಸ ______________________________

______________________________

______________________________

**ಜೆಎಸ್‌ಎಸ್ ಪ್ರಸಾದ ಮ್ಯಾಗಜ಼ಿನ್**
ಹೆಸರಿಗೆ ಡಿಡಿ/ಚೆಕ್/ಎಂಓ/ನಗದನ್ನು
ಸಂದಾಯ ಮಾಡಬಹುದಾಗಿದೆ

**ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004